# ಯುಗಶ್ರೀ

- ಇಸ್ಲಾಮಿಕ ಜಿಹಾದ್
- ಪ್ರವಾದಿಗಳು ಮತ್ತು ಅವರ ಶತ್ರುಗಳು
- ಯೇಸು ಭಾರತದಲ್ಲಿ ಜೀವಿಸಿದ್ದರೋ?
- ಧರ್ಮದ ನಾಮದಲ್ಲಿ ರಕ್ತಪಾತ

ಫೆಬ್ರವರಿ 2007

ತ್ರೈಮಾಸಿಕ
ಬೆಲೆ ರೂ.5/-

"ನಿಶ್ಚಯವಾಗಿಯೂ ಭೂಮಿಯ ಮೇಲಿರುವ ಎಲ್ಲವನ್ನೂ ನಾವು ಅದಕ್ಕೆ ಅಲಂಕಾರವಾಗಿರಿಸಿರುತ್ತೇವೆ - ಉತ್ತಮವಾಗಿ ವರ್ತಿಸುವವರು ಯಾರೆಂದು ಅವರನ್ನು ಪರೀಕ್ಷಿಸಲಿಕ್ಕೋಸ್ಕರ. (ಮುಂದೊಂದು ದಿನ) ಅದರ ಮೇಲಿರುವುದನ್ನೆಲ್ಲ ನಾವು ಬರಡು ನೆಲವನ್ನಾಗಿ ಮಾಡುವೆವು."

ಪವಿತ್ರ ಖುರ್‌ಆನ್ (18 : 8, 9)

# ಯುಗರಶ್ಮಿ

ತ್ರೈಮಾಸಿಕ

10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ : ರೂ.5/- ವಾರ್ಷಿಕ ಚಂದಾ : ರೂ.20/- ಅಂಚೆ ಮೂಲಕ : ರೂ.30/-

**ವಿಷಯ ಸೂಚಿಕೆ** **ಪುಟ**


| | |
|---|---|
| ★ ಮುಹಮ್ಮದ್ ಪೈಗಂಬರ್[ಸ] ಮತ್ತು ಯುದ್ಧ | 1 |
| ★ ಮುಹಮ್ಮದ್ ಪೈಗಂಬರರ[ಸ] ನುಡಿಮುತ್ತುಗಳು | 2 |
| ★ ಇಸಾಮಿಕ ಜಿಹಾದ್ | 3 |
| ★ ಪ್ರವಾದಿಗಳು ಮತ್ತು ಅವರ ಶತ್ರುಗಳು | 7 |
| ★ ಯೇಸು ಭಾರತದಲ್ಲಿ ಜೀವಿಸಿದ್ದರೋ? | 15 |
| ★ ಇಸ್ಲಾಮಿನ ಪ್ರಾಥಮಿಕ ಪಾಠಗಳು | 17 |
| ★ ಸವಿ ನೆನಪು | 19 |
| ★ ಪುಸ್ತಕ ವಿಭಾಗ : ಧರ್ಮದ ನಾಮದಲ್ಲಿ ರಕ್ತಪಾತ | 21 |


"LOVE FOR ALL

HATRED FOR NONE"

"ಎಲ್ಲರೊಡನೆಯೂ ಪ್ರೀತಿ

ಯಾರೊಡನೆಯೂ ದ್ವೇಷವಿಲ್ಲ"

"ಇನ್ಸಾನಿಯತ್ ಝಿಂದಾಬಾದ್"

"ಮಾನವೀಯತೆ ಚಿರಕಾಲ ಬಾಳಲಿ"

بسم الله الرحمن الرحيم

نحمده ونصلي على رسوله الكريم


# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 24 | ಫೆಬ್ರವರಿ 2007 | ತಬ್ಲೀಗ್ 1386 | ಸಂಚಿಕೆ : 1 |
|---|---|---|---|---|


## ಮುಹಮ್ಮದ್ ಪೈಗಂಬರ್(ಸ) ಮತ್ತು ಯುದ್ಧ

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮಕ್ಕದಲ್ಲಿ ಅವಿಶ್ವಾಸಿಗಳ ಕೈಯಿಂದ ಮತ್ತು ಅದರ ನಂತರ ಸಹ ಪೀಡನೆಗಳನ್ನೂ ದೌರ್ಜನ್ಯಗಳನ್ನೂ ಸಹಿಸಬೇಕಾಯಿತು. ಅವರು ಮಕ್ಕದಲ್ಲಿ ಕಳೆದಿದ್ದ ಹದಿಮೂರು ವರ್ಷಗಳ ಕಾಲ ನಾನಾತರದ ಅನೇಕ ಕಷ್ಟನಷ್ಟಗಳ ಮತ್ತು ಅಸಂಖ್ಯಾತ ದುಃಖಾನುಭವಗಳ ಕಾಲವಾಗಿತ್ತು. ಅದನ್ನು ನೆನಸುವಾಗಲೇ ದುಃಖ ಉಮ್ಮಳಿಸುತ್ತದೆ. ಆದರೆ, ತನ್ನ ಶತ್ರುಗಳ ವಿರುದ್ಧ ಪೈಗಂಬರರು(ಸ) ಖಡ್ಗವೆತ್ತಲಿಲ್ಲ. ಅವರ ಕಠಿಣ ಮಾತುಗಳಿಗೆ ಕಠಿಣ ಉತ್ತರವನ್ನೂ ನೀಡಲಿಲ್ಲ. ಅವರ ಅನೇಕ ಶಿಷ್ಯಂದಿರೂ ಸ್ನೇಹಿತರೂ ನಿಷ್ಕರುಣವಾಗಿ ಹತ್ಯೆಗೀಡಾದರು. ಪೈಗಂಬರರು(ಸ) ಕೂಡ ಹಲತರ ಕಷ್ಟಗಳಿಗೆ ತುತ್ತಾದರು. ಶತ್ರುಗಳು ಅವರಿಗೆ ವಿಷ ಕೊಟ್ಟು ಕೊಲ್ಲಲು ಪ್ರಯತ್ನಿಸಿದರು. ಅವರನ್ನು ಕೊಲ್ಲಲು ಹಲವು ಸಲ ಗೂಢಾಲೋಚನೆಗಳು ನಡೆದವು. ಮಕ್ಕದ ಮುಖಂಡರೂ ಗೋತ್ರ ನಾಯಕರೂ ಒಟ್ಟುಗೂಡಿ ಈ ವ್ಯಕ್ತಿಯನ್ನು ಹೇಗಾದರೂ ಕೊಲ್ಲಬೇಕೆಂದು ಏಕಕಂಠವಾಗಿ ತೀರ್ಮಾನಿಸಿದರು...... ಈ ರೀತಿಯಲ್ಲಿ ಅವರ ಅಕ್ರಮ ಚಟುವಟಿಕೆಗಳು ಮಿತಿಮೀರಿದಾಗ ಮತ್ತು ನಿರಪರಾಧಿಗಳ ಹತ್ಯೆ ಅವರಿಗೆ ಶಿಕ್ಷೆ ನೀಡಬೇಕಾದುದು ಅಗತ್ಯವಾಗಿರುವಷ್ಟು ಹೆಚ್ಚಾದಾಗ ಆತ್ಮರಕ್ಷಣೆಗೋಸ್ಕರ ಪ್ರತಿರೋಧ ಯುದ್ಧ ಮಾಡಲು ದೇವನು ಅವರಿಗೆ ಅನುಮತಿ ನೀಡಿದನು.

(ಮಸೀಹ್ ಹಿಂದುಸ್ತಾನ್ ಮೇಂ)

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ಅಲ್ಲಾಹನು ಹೇಳುತ್ತಾನೆ: ಮನುಷ್ಯಾ, ನೀನು ದಾನ ನೀಡು; ನಾನು ಸಹ ನಿನಗೆ ದಾನ ನೀಡುವೆನು. (ಬುಖಾರಿ, ಮುಸ್ಲಿಂ)

- ದಾನಧರ್ಮ ಮಾಡಿದ ಕಾರಣ ಧನ ಕಮ್ಮಿಯಾಗಲಿಕ್ಕಿಲ್ಲ. ಯಾರಾದರೂ ಕ್ಷಮೆ ನೀಡಿದರೆ ಅಲ್ಲಾಹನು ಆತನ ಗೌರವವನ್ನು ಹೆಚ್ಚಿಸುತ್ತಾನೆ. ಅಲ್ಲಾಹನಿಗೆ ವಿಧೇಯತೆಯನ್ನು ತೋರಿಸಿದವನ ಸ್ಥಾನವನ್ನು ಅವನು ಉನ್ನತಗೊಳಿಸುತ್ತಾನೆ. (ಮುಸ್ಲಿಂ)

- ಅಲ್ಲಾಹನನ್ನು ಸ್ಮರಿಸುವವನು ಜೀವವಿದ್ದವನ ಹಾಗೆ; ಸ್ಮರಿಸದವನು ಸತ್ತವನ ಹಾಗೆ. (ಬುಖಾರಿ, ಮುಸ್ಲಿಂ)

- ಜನರಿಗೆ ಒಂದು ಕಾಲಘಟ್ಟ ಬರಲಿದೆ. ಅಂದು ತಾನು ಧನ ಸಂಪಾದಿಸಿರುವುದು ಧರ್ಮಬದ್ಧವಾದ ರೀತಿಯಲ್ಲೋ ಅಥವಾ ಧರ್ಮ ವಿರುದ್ಧವಾದ ರೀತಿಯಲ್ಲೋ ಎಂಬ ವಿಚಾರ ಮನುಷ್ಯನಿಗೆ ಒಂದು ಸಮಸ್ಯೆಯೇ ಆಗಿರಲಾರದು. (ಬುಖಾರಿ)

- ಕೊಡು - ಕೊಳ್ಳುವಿಕೆಯಲ್ಲೂ ಸಾಲ ತೀರಿಸುವಿಕೆಯಲ್ಲೂ ರಿಯಾಯತಿ ತೋರಿಸುವವನಿಗೆ ಅಲ್ಲಾಹನು ಕರುಣೆದೋರುತ್ತಾನೆ. (ಬುಖಾರಿ)

- ಕಷ್ಟದಲ್ಲಿರುವವನಿಗೆ ಸಾಲ ತೀರಿಸುವ ಗಡುವನ್ನು ಹೆಚ್ಚಿಸಿ ಕೊಟ್ಟರೆ ಅಥವಾ ಸಾಲವನ್ನು ಮನ್ನಾ ಮಾಡಿದರೆ ಅಂತ್ಯದಿನದ ಕಷ್ಟದಿಂದ ಅಲ್ಲಾಹನು ಅವನನ್ನು ಪಾರುಗೊಳಿಸುವನು. (ಮುಸ್ಲಿಂ)

- ಧನ, ಕುಟುಂಬ, ಸೌಂದರ್ಯ, ಧರ್ಮನಿಷ್ಠೆ ಎಂಬೀ ನಾಲ್ಕು ವಿಚಾರಗಳನ್ನು ಪರಿಗಣಿಸಿ ಸ್ತ್ರೀಯನ್ನು (ಸಾಮಾನ್ಯವಾಗಿ) ವಿವಾಹ ಮಾಡಲಾಗುತ್ತದೆ. ಆದ್ದರಿಂದ ನೀನು ಧರ್ಮನಿಷ್ಠೆಯುಳ್ಳವಳನ್ನು ಮದುವೆ ಮಾಡಿಕೊಂಡು ಸೌಭಾಗ್ಯವಂತನಾಗು. (ಬುಖಾರಿ, ಮುಸ್ಲಿಂ)

- ಒಬ್ಬ ನ್ಯಾಯಾಧೀಶ ಕೋಪೋದ್ರಿಕ್ತನಾಗಿ ಕಕ್ಷಿಗಾರರ ಮಧ್ಯೆ ಎಂದಿಗೂ ತೀರ್ಪು ಹೇಳಬಾರದು. (ಬುಖಾರಿ, ಮುಸ್ಲಿಂ)

- ಅನರ್ಹವಾದುದನ್ನು ವಾದಿಸಿ ಪಡೆಯುವವನು ನಮ್ಮ ಪೈಕಿಯವನಲ್ಲ. ಅವನು ನರಕದಲ್ಲಿ ತನಗೊಂದು ಸ್ಥಾನವನ್ನು ಪಡೆದುಕೊಳ್ಳಲಿ. (ಮುಸ್ಲಿಂ)

- ಅಹಂಕಾರದಿಂದ ಉಡುಪನ್ನು ನೆಲದಲ್ಲಿ ಒರಸಿಕೊಂಡು ಹೋಗುವವನನ್ನು ಅಂತ್ಯದಿನದಂದು ಅಲ್ಲಾಹನು ನೋಡಲಾರನು. (ಬುಖಾರಿ, ಮುಸ್ಲಿಂ)

# ಇಸ್ಲಾಮಿಕ ಜಿಹಾದ್

❖ ಅಮ್‌ಜದ್ ಮಹ್‌ಮೂದ್ ಖಾನ್

ಜಿಹಾದ್ ಎಂಬ ಅರಬಿ ಪದದ ಶಬ್ದಾರ್ಥ ಕಠಿಣ ಪ್ರಯತ್ನ ಅಥವಾ ಹೋರಾಟ ಎಂದಾಗಿದೆ. ತನ್ನ ಹೃದಯದಲ್ಲಿರುವ ಕೆಟ್ಟ ಪ್ರವೃತ್ತಿಗಳನ್ನು ಜಯಿಸಲು ಆಂತರಿಕವಾಗಿ ಸ್ತ್ರೀ ಅಥವಾ ಪುರುಷ ಮಾಡುವ ಹೋರಾಟವನ್ನು ಸಹ ಜಿಹಾದ್ ಎಂದು ಕರೆಯಲಾಗಿದೆ. ಕೆಡುಕಿನ ಕಡೆಗೆ ಆತ್ಮವು ಒಲಿಯದಂತೆ ಆಧ್ಯಾತ್ಮಿಕವಾಗಿ ಹೋರಾಡಿ ಅದರಲ್ಲಿ ಜಯಗಳಿಸಿ ದೇವ ಸಾಮೀಪ್ಯವನ್ನು ಗಳಿಸುವ ಪ್ರಕ್ರಿಯೆಯನ್ನು ಜಿಹಾದುಲ್ ಅಕ್‌ಬರ್ (ಅತ್ಯಂತ ದೊಡ್ಡ ಜಿಹಾದ್) ಎಂದು ಕರೆಯಲಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಜಿಹಾದ್ ಎಂಬ ಪದವನ್ನು ಯುದ್ಧ ಎಂಬ ಅರ್ಥದಲ್ಲಿಯೂ ಬಳಸಲಾಗಿದೆ. ಆದರೆ ಅಂತಹ ಯುದ್ಧವು ಪ್ರತಿರೋಧಕ್ಕಾಗಿ ಮಾಡಬೇಕೆಂದು ಇಸ್ಲಾಮ್ ವಿಧಿಸುತ್ತದೆ. ತನ್ನ ಧರ್ಮವನ್ನು ಅವಲಂಬಿಸಿ ಧಾರ್ಮಿಕ ಕಾರ್ಯಗಳನ್ನು ಕೈಗೊಳ್ಳಲು ಬಲಾತ್ಕಾರದಿಂದ ತಡೆಯಲ್ಪಟ್ಟಾಗ ಮಾತ್ರ ಒಬ್ಬ ಮುಸ್ಲಿಮನಿಗೆ ಆತ್ಮರಕ್ಷಣೆಗೆ ಕ್ರಮ ಕೈಗೊಳ್ಳಲು ಅನುಮತಿಸಲಾಗಿದೆ. ಈ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ನಿಮ್ಮ ವಿರುದ್ಧ ಯುದ್ಧ ಮಾಡುವವರೊಡನೆ ಅಲ್ಲಾಹನ ಮಾರ್ಗದಲ್ಲಿ ನೀವು ಸಹ ಯುದ್ಧ ಮಾಡಿರಿ. ಆದರೆ ಅತಿಕ್ರಮಣ ಮಾಡಬೇಡಿರಿ. ಅತಿಕ್ರಮಣ ಮಾಡುವವರನ್ನು ಅಲ್ಲಾಹನು ನಿಶ್ಚಯವಾಗಿಯೂ ಪ್ರೀತಿಸುವುದಿಲ್ಲ." (2:191)**

**"ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿ ಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ಮಾಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ. " (22:40)**

ಪವಿತ್ರ ಖುರ್‌ಆನಿನ ಈ ವಚನಗಳು, ಧಾರ್ಮಿಕ ಕಾರಣದಿಂದ ಸತ್ಯ ವಿಶ್ವಾಸಿಗಳನ್ನು ಯಾರಾದರೂ ಆಕ್ರಮಣ ಮಾಡಿದರೆ ಆಗ ಸತ್ಯ ವಿಶ್ವಾಸಿಗಳು ಆತ್ಮರಕ್ಷಣೆಗಾಗಿ ಯುದ್ಧ ಮಾಡಬಹುದು ಎಂದು ಸೂಚಿಸುತ್ತವೆ. ಮುಸ್ಲಿಮರಿಗೆ ಬಲ ಪ್ರಯೋಗವನ್ನು ಅನುಮತಿಸಿರುವುದು ತುರ್ತು ಪರಿಸ್ಥಿತಿಯಲ್ಲಿ ಮತ್ತು ಆತ್ಮಸಾಕ್ಷಿಯ ಸ್ವಾತಂತ್ರ್ಯಕ್ಕೆ ಭಂಗ ಉಂಟಾಗುವ ಕಾರಣದಿಂದ ಹೊರತು ಕೇವಲ ಧಾರ್ಮಿಕ ಕಾರಣದಿಂದಲ್ಲ. ಧಾರ್ಮಿಕ ಸಹಿಷ್ಣುತೆಗೆ ಇಸ್ಲಾಮ್ ಸೂಚಿಸುವ ಪರಿಮಿತಿಗಳು ತರ್ಕ ಸಮ್ಮತವಾದ ತತ್ವದ ಮೇಲೆ ಸ್ಥಾಪಿತವಾಗಿದೆ. ಅಂದರೆ, ಒಬ್ಬನು ಸ್ವಂತ ನಂಬಿಕೆಯನ್ನು ರಕ್ಷಿಸಲು ಹೋರಾಟ ಮಾಡಬಹುದಾಗಿರುವಾಗ ಅವನು ಬೇರೊಬ್ಬನ ಮೇಲೆ ಒಂದು ವಿಶ್ವಾಸವನ್ನು ಹೇರಲು ಬಲಾತ್ಕಾರ ಮಾಡಬಾರದು.

ಜಿಹಾದ್ ಕುರಿತು ಸಂಕ್ಷಿಪ್ತ ವಿವರಣೆ ಮೇಲಿನಂತೆ ಇರುವಾಗ ಇಂದಿನ ಪರಿಸ್ಥಿತಿಯು ಆಶ್ಚರ್ಯಕರವೂ ಭಯಾನಕವೂ ಆಗಿದೆ. ಇಸ್ಲಾಮ್ ಧರ್ಮಾನುಯಾಯಿಗಳು ತಾವೆಂದು ಹೇಳುವ ಹೋರಾಟಗಾರರು ಜಿಹಾದ್ ಸಿದ್ಧಾಂತವನ್ನು ತಮ್ಮ ರಾಜಕೀಯ ಆಶಾಭಿಲಾಷೆಗಳಿಗಾಗಿ ಮತ್ತು ವೈಯಕ್ತಿಕ ಲಾಭಕ್ಕಾಗಿ ದುರುಪಯೋಗಿಸುತ್ತಾರೆ. ಅವರು ಪ್ರಚಾರ ಮಾಡುತ್ತಿರುವ ಜಿಹಾದ್ ಪವಿತ್ರ ಖುರ್‌ಆನ್ ಉಪದೇಶಿಸುವ ಅರ್ಥದಿಂದ ವಿರಹಿತವಾಗಿದೆ. ಅವರು ಅದನ್ನು ಒಂದು ರಾಜಕೀಯ ಆಯುಧವಾಗಿ ತಮ್ಮ ಕ್ಷೇತ್ರ ವಿಸ್ತರಣೆಗಾಗಿ ಮತ್ತು ವಿಚಾರಗಳ ವಿಸ್ತರಣೆಗಾಗಿ ಬಳಸುತ್ತಾರೆ. ಜಿಹಾದ್ ಕುರಿತು ಕೋಟಿಗಟ್ಟಲೆ ಮುಸ್ಲಿಮರು ಹೃತ್ಪೂರ್ವಕವಾಗಿ ನಂಬಿಕೊಂಡು ಬಂದಿದ್ದ ಮಹೋನ್ನತ ಆಧ್ಯಾತ್ಮಿಕ ಮಹತ್ವವು ಮತಾಂಧರ ಹುಚ್ಚಾಟಿಕೆಗಳಿಂದ ಮತ್ತು ಅತ್ಯಾಶೆಗಳಿಂದ ಕಳೆಗುಂದಿದೆ.

ಹಲವಾರು ಪಾಶ್ಚಿಮಾತ್ಯ ವಿದ್ವಾಂಸರು ಜಿಹಾದಿಗೆ ಯಾವುದಾದರೂ ಆಧ್ಯಾತ್ಮಿಕ ಮಹತ್ವವನ್ನು ಅಥವಾ ಸಹಿಷ್ಣುತೆಯ ಕಡೆಗೆ ವಾಲುವಿಕೆ ಇರುವುದನ್ನು ನಿರಾಕರಿಸುತ್ತಾರೆ. ಹಝ್ರತ್ ಪ್ರವಾದಿಯವರ(ಸ) ಕಾಲದಿಂದ ಜಿಹಾದ್ ಬಲಾತ್ಕಾರದ ಧರ್ಮ ಪರಿವರ್ತನೆ ಮತ್ತು ಬಲಪ್ರಯೋಗ ರೂಪದಲ್ಲಿಯೇ ಪ್ರಕಟವಾಗಿದೆ ಎಂದು ಅವರು ಹೇಳುತ್ತಾರೆ. ಈ ವಿದ್ವಾಂಸರು ನಿಜವಾದ ಇಸ್ಲಾಮಿಕ ಚರಿತ್ರೆಯನ್ನು ಮನವರಿಕೆ ಮಾಡಿಕೊಳ್ಳಲು ಸಮರ್ಥರಾಗಿಲ್ಲ.

ಪ್ರವಾದಿ ಮುಹಮ್ಮದ್‌ರವರ(ಸ) ಕಾಲಕ್ಕಿಂತ ಮೊದಲಿನ ಅರಬ್ ದೇಶವು ನೈತಿಕವಾಗಿ ಅಸ್ತವ್ಯಸ್ತಗೊಂಡಿತ್ತು. ಕೆಲವು ಪ್ರದೇಶಗಳಲ್ಲಿ ಶಿಶು ಹತ್ಯೆ ಜಾರಿಯಲ್ಲಿತ್ತು. ಅನ್ಯರ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳುವುದು ತಮ್ಮ ಜನ್ಮಸಿದ್ಧ ಹಕ್ಕೆಂದು ಅರಬಿಗಳು ಭಾವಿಸುತ್ತಿದ್ದರು. ನಲ್ವತ್ತನೆಯ ವಯಸ್ಸಿನಲ್ಲಿ ಪ್ರವಾದಿ ಮುಹಮ್ಮದ್‌ರವರು(ಸ) ಪವಿತ್ರ ಖುರ್‌ಆನಿನ ಪ್ರಥಮ ಸಂದೇಶವಾಣಿಯನ್ನು ಪಡೆದರು. ಇದು ನೈತಿಕ ಸಂಹಿತೆಯ ಪ್ರಾರಂಭವಾಗಿತ್ತು. ಬಹುದೈವಾರಾಧನೆ ಜಾರಿಯಲ್ಲಿದ್ದ ಅರಬ್ ದೇಶದಲ್ಲಿ ಪ್ರವಾದಿ ಮುಹಮ್ಮದ್‌ರವರು(ಸ) ಏಕದೇವಾರಾಧನೆಯನ್ನು ಬೋಧಿಸಿದರು. ಅದೊಂದು ಕ್ರಾಂತಿಕಾರಕ ಉಪದೇಶವಾಗಿತ್ತು. ಇಪ್ಪತ್ತು ವರ್ಷಗಳೊಳಗೆ ಇಸ್ಲಾಮ್ ಧರ್ಮ ಅರಬ್ ದೇಶದಲ್ಲಿ ಪ್ರಬಲ ಧರ್ಮವಾಯಿತು. ಪ್ರವಾದಿ ಮುಹಮ್ಮದ್‌ರವರು(ಸ) ಒಂದು ಸಾಮ್ರಾಜ್ಯದ ಆಧ್ಯಾತ್ಮಿಕ ನಾಯಕರಾದರು. ಈ ಚಾರಿತ್ರಿಕ ಸಂದರ್ಭದಲ್ಲಿ ಪವಿತ್ರ ಖುರ್‌ಆನಿನ ಈ ವಚನ ಅವತೀರ್ಣಗೊಂಡಿತು:

"ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ." **(2:257)**

ಇಸ್ಲಾಮ್ ಧರ್ಮದಲ್ಲಿ ಬಲಾತ್ಕಾರಕ್ಕೆ ಯಾವುದೇ ಅನುಮತಿ ಇಲ್ಲ ಎಂದು ದೇವನು ಈ ವಚನದಲ್ಲಿ ಒತ್ತಿ ಹೇಳಿರುವನು. ಈ ವಚನದ ಹಿಂದಿನ ಮತ್ತು ಮುಂದಿನ ವಚನಗಳು ಬಲಾತ್ಕಾರದ ವಿರುದ್ಧ ತರ್ಕಬದ್ಧ ವಾದವನ್ನು ಮಂಡಿಸುತ್ತವೆ. ಪವಿತ್ರ ಖುರ್‌ಆನ್‌ಲ್ಲಿ ಹೀಗಿದೆ:

**"ಅಲ್ಲಾಹ್- ಅವನ ಹೊರತು ಬೇರೆ ದೇವನಿಲ್ಲ. ಅವನು ಸದಾ ಜೀವಂತನೂ ಸ್ವತಃ ನೆಲೆನಿಂತಿರುವವನೂ ಎಲ್ಲವನ್ನು ನೆಲೆ ನಿಲ್ಲಿಸುವವನೂ**

ಆಗಿದ್ದಾನೆ. ತೂಕಡಿಕೆಯಾಗಲೀ ನಿದ್ರೆಯಾಗಲೀ ಅವನಿಗಿಲ್ಲ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವೂ ಅವನದ್ದಾಗಿವೆ. ಅವನ ಅನುಮತಿ ಇಲ್ಲದೆ ಅವನ ಸನ್ನಿಧಿಯಲ್ಲಿ ಶಿಫಾರಸು ಮಾಡುವವರು ಯಾರಿದ್ದಾರೆ? ಅವರ ಮುಂದೆ ಮತ್ತು ಹಿಂದೆ ಇರುವ ಎಲ್ಲವನ್ನು ಅವನು ಬಲ್ಲನು. ಅವನು ಇಚ್ಛಿಸುವುದರ ಹೊರತು, ಅವನ ಜ್ಞಾನದಿಂದ ಏನನ್ನೂ ಅವರು ಗಳಿಸುವುದಿಲ್ಲ. ಅವನ ಸಿಂಹಾಸನ ಆಕಾಶಗಳಲ್ಲಿಯೂ ಭೂಮಿಯಲ್ಲಿಯೂ ವ್ಯಾಪಿಸಿಕೊಂಡಿದೆ. ಅವುಗಳ ಸಂರಕ್ಷಣೆ ಅವನನ್ನು ಆಯಾಸಗೊಳಿಸುವುದಿಲ್ಲ. ಅವನು ಅತ್ಯುನ್ನತನೂ ಮಹಾಮಹಿಮನೂ ಆಗಿದ್ದಾನೆ." (2:256)

ಮುಸ್ಲಿಮ್ ವಿದ್ವಾಂಸರು ಈ ವಚನಕ್ಕೆ ಆಯತುಲ್‌ಕುರ್‌ಸೀ ಎಂದು ಹೆಸರಿಸಿದ್ದಾರೆ.

"ದೈವಿಕ ಶಕ್ತಿಯ ವಚನ" ಎಂದು ಅದರ ಅರ್ಥ. ಮನುಷ್ಯನಿಗೆ ಸಂರಕ್ಷಣೆ ನೀಡುವ ಏಕಮಾತ್ರ ಶಕ್ತಿ ದೇವನು ಮಾತ್ರವೆಂದು ಇಲ್ಲಿ ಪ್ರತಿಪಾದಿಸಲಾಗಿದೆ. ಮನುಷ್ಯನ ಜ್ಞಾನ ಪರಿಮಿತಿಗೊಳಪಟ್ಟದ್ದೂ ಅಪೂರ್ಣವೂ ಬಲಹೀನವೂ ಆಗಿದೆ. ಆದರೆ ದೇವನ ಜ್ಞಾನ ಅಪರಿಮಿತವಾದದ್ದೂ ಪೂರ್ಣವೂ ಬಲಶಾಲಿಯಾದುದೂ ಆಗಿದೆ. ಈ ವಚನ ಮನುಷ್ಯನ ಕಲ್ಪನೆಗಳ ತಿಳಿಗೇಡಿತನದ ಕುರಿತು ಮತ್ತು ಮನುಷ್ಯರ ಕುರಿತು ತೀರ್ಮಾನ ಮಾಡಲು ದೇವನಿಗಿರುವ ಪರಮವೂ ಬೇರೆ ಯಾರಿಗೂ ಇಲ್ಲದ್ದೂ ಆಗಿರುವ ಸಾಮರ್ಥ್ಯದ ಕುರಿತು ಸದಾಕಾಲ ನೆನಪಿಡುವ ಆವಶ್ಯಕತೆಯನ್ನೂ ಸೂಚಿಸುತ್ತದೆ.

ಪವಿತ್ರ ಖುರ್‌ಆನ್ ಅಧ್ಯಾಯ 2 ವಚನ 257ರ ಪೂರ್ಣ ರೂಪ ಹೀಗಿದೆ:

"ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ. ಯಾವಾತನು ದುಷ್ಟಶಕ್ತಿಗಳನ್ನು ತಿರಸ್ಕರಿಸಿ ಅಲ್ಲಾಹನನ್ನು ನಂಬುತ್ತಾನೋ ಖಂಡಿತವಾಗಿಯೂ ಆತನು ಸುದೃಢವಾದೊಂದು ಕೈಯಾಸರೆಯನ್ನು ಹಿಡಿದಿರುವನು (ಎಂದು ತಿಳಿದುಕೊಳ್ಳಲಿ). ಅದು ಎಂದೂ ಮುರಿದು ಹೋಗುವಂಥದ್ದಲ್ಲ. ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಬಲ್ಲವನೂ ಆಗಿದ್ದಾನೆ."

ಈ ವಚನದಲ್ಲಿ ಸತ್ಯ ವಿಶ್ವಾಸಿಗಳಾದ ಮುಸ್ಲಿಮರನ್ನು ಮತ್ತು ದುಷ್ಟಶಕ್ತಿಗಳನ್ನು ಹಿಂಬಾಲಿಸುವ ಮಕ್ಕದ ಬಹುದೇವಾರಾಧಕರ ವ್ಯತ್ಯಾಸವನ್ನು ಸೂಚಿಸಲಾಗಿದೆ. ಮುಸ್ಲಿಮರಿಗೆ ದೇವನಿಂದ ಮಹೋನ್ನತವಾದ ಮಾರ್ಗದರ್ಶನವು ದೊರೆತಿದೆಯೆಂದೂ ಅದು ಮನುಷ್ಯ ನಿರ್ಮಿತವಾಡುದಲ್ಲವೆಂದೂ ಅದನ್ನು ಅನ್ಯರ ಮೇಲೆ ಹೇರುವ ಆವಶ್ಯಕತೆಯಿಲ್ಲವೆಂದೂ ಹಾಗೆ ಬಲಾತ್ಕಾರ ಮಾಡುವ ಅನುಮತಿಯು ಮುಸ್ಲಿಮರಿಗೆ ದೇವನಿಂದ ನೀಡಲ್ಪಟ್ಟಿಲ್ಲ ಎಂದೂ ಈ ವಚನ ಸೂಚಿಸುತ್ತದೆ. ಸತ್ಯವು ಅಸತ್ಯದಿಂದ ಬೇರೆಯಾಗಿಯೇ ಕಾಣಿಸಿಕೊಂಡಿದೆ. ಆದುದರಿಂದ ಸತ್ಯ ವಿಶ್ವಾಸಿಗಳು ಬಲಾತ್ಕಾರ ಮಾಡುವ ಆವಶ್ಯಕತೆ ಇದೆ ಎಂದು ಹೇಳುವುದು ವಿವೇಚನಾಶೂನ್ಯವೂ ತರ್ಕರಹಿತವೂ ಆಗಿದೆ.

ಪವಿತ್ರ ಖುರ್‌ಆನ್ ಅಧ್ಯಾಯ 109 ಈ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲುತ್ತದೆ: ಆ ಅಧ್ಯಾಯ ಹೀಗಿದೆ:

"ಹೇಳು : ಓ ಅವಿಶ್ವಾಸಿಗಳೇ, ನೀವು ಆರಾಧಿಸುವುದನ್ನು ನಾನು ಆರಾಧಿಸುವುದಿಲ್ಲ. ನಾನು ಆರಾಧಿಸುವವನನ್ನು ನೀವೂ ಆರಾಧಿಸುವುದಿಲ್ಲ. ಮತ್ತು ನೀವು ಆರಾಧಿಸುವುದನ್ನು ನಾನು ಆರಾಧಿಸುವವನಲ್ಲ. ನಾನು ಆರಾಧಿಸುವವನನ್ನು ನೀವೂ ಆರಾಧಿಸುವವರಲ್ಲ. ನಿಮಗೆ ನಿಮ್ಮ ಧರ್ಮ, ನನಗೆ ನನ್ನ ಧರ್ಮ." (109:1-7)

ಈ ವಚನದಲ್ಲಿ ಸತ್ಯವಿಶ್ವಾಸಿಗಳು ಬಲಪ್ರಯೋಗ ಮಾಡುವುದನ್ನು ತಡೆಯಲಾಗಿದೆ. ಮಾತ್ರವಲ್ಲ ಬೇರೆಯವರು ಹೊಂದಿರುವ ನಂಬಿಕೆಗಳನ್ನು ಬದಲಾಯಿಸಲು ಬಲ ಪ್ರಯೋಗಿಸುವುದಿಲ್ಲ ಎಂದು ಒತ್ತಿ ಹೇಳಲು ಆಜ್ಞಾಪಿಸಲಾಗಿದೆ. ಸತ್ಯ ವಿಶ್ವಾಸಿಗಳು ಅವಿಶ್ವಾಸಿಗಳ ಬಗ್ಗೆ ತಮಗಿರುವ ಸಹಿಷ್ಣುತೆಯನ್ನು ಪ್ರಕಟಿಸಲು ಹೇಳಲಾಗಿದೆ: "ನಿಮಗೆ ನಿಮ್ಮ ಧರ್ಮ; ನನಗೆ ನನ್ನ ಧರ್ಮ." ಇದೇ ಮುಸ್ಲಿಮರ ಘೋಷಣೆಯಾಗಿದೆ.

ಬೇರೆ ಧರ್ಮಗಳ ಕುರಿತು ಇಸ್ಲಾಮಿನ ಸಹಿಷ್ಣುತೆಯನ್ನು ಈ ವಚನ ಸ್ಪಷ್ಟಗೊಳಿಸುತ್ತದೆ. ಧರ್ಮ ಪರಿವರ್ತನೆಗೆ ಬಲ ಪ್ರಯೋಗ ಮಾಡುವುದನ್ನು ಅದು ತಡೆಯುತ್ತದೆ.

ಪವಿತ್ರ ಖುರ್‌ಆನಿನ, ಮೇಲೆ ಉಲ್ಲೇಖಿಸಲಾದ ವಚನಗಳು ಮತ್ತು ಬೇರೆ ವಚನಗಳು ಬಹುದೈವಾರಾಧಕರನ್ನು ಪೂರ್ಣವಾಗಿ ದಾರಿತಪ್ಪಿ ಹೋದವರೆಂದು ಅಸಂಧಿಗ್ಧವಾಗಿ ಸೂಚಿಸುತ್ತದೆ. ಅಡೋಲ್ಫ್ ಎಲ್. ವಿಸ್‌ಮರ್ ಸಹಿತ ಒಂದು ಗುಂಪಿಗೆ ಸೇರಿದ ವಿದ್ವಾಂಸರು ಈ ವಚನಗಳನ್ನು ಉಲ್ಲೇಖಿಸಿ ಅವು "ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ" ಎಂಬ ವಚನಕ್ಕೆ ವಿರುದ್ಧವಾಗಿವೆ ಎಂದು ತಪ್ಪಾಗಿ ಮನವರಿಕೆ ಮಾಡಿಕೊಂಡಿದ್ದಾರೆ. ಪ್ರವಾದಿ ಮುಹಮ್ಮದ್‌ರವರ(ಸ) ಕಾಲದ ಬಹುದೇವಾರಾಧಕರನ್ನು ಆಕ್ಷೇಪಿಸುವ ಪವಿತ್ರ ಖುರ್‌ಆನ್ ಧಾರ್ಮಿಕ ಸಹಿಷ್ಣುತೆಯನ್ನು ಬೋಧಿಸುವುದಾಗಿ ಹೇಳುವುದಾದರೂ ಹೇಗೆಂದು ಅವರು ಪ್ರಶ್ನಿಸುತ್ತಾರೆ. ಮನುಷ್ಯನ ಆಧ್ಯಾತ್ಮಿಕ ಅಂತಿಮ ಗತಿಯು ಮನುಷ್ಯ ಮತ್ತು ದೇವನ ಮಧ್ಯೆ ಬಾಹ್ಯ ಹಸ್ತಕ್ಷೇಪವಿಲ್ಲದೆ ನಿರ್ಧರಿಸಲ್ಪಡುವುದೆಂದು ಪವಿತ್ರ ಖುರ್‌ಆನ್ ಹೇಳುತ್ತದೆ. ನಿಜವಾದ ಧಾರ್ಮಿಕ ವಿಶ್ವಾಸವು ಅತ್ಯಂತ ಹೆಚ್ಚಿನ ವೈಯಕ್ತಿಕ ಬದ್ಧತೆ ಮತ್ತು ಒಪ್ಪಿಗೆಯನ್ನು ಆವಶ್ಯಪಡುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಅಲ್ಲಾಹನು ಇಚ್ಛಿಸುತ್ತಿದ್ದರೆ (ತನ್ನ ಇಚ್ಛೆಯನ್ನು ಬಲವಂತವಾಗಿ ಹೇರುತ್ತಿದ್ದರೆ) ಅವರು (ಅಲ್ಲಾಹನಿಗೆ) ಸಹಭಾಗಿಗಳನ್ನು ಕಲ್ಪಿಸುತ್ತಿರಲಿಲ್ಲ. ನಾವು ನಿನ್ನನ್ನು ಅವರ ಸಂರಕ್ಷಕನನ್ನಾಗಿ ಮಾಡಲಿಲ್ಲ. ನೀನು ಅವರ ಕಾರ್ಯ ನಿರ್ವಾಹಕನೂ ಅಲ್ಲ." (6:108)

ಬೇರೆ ಒಂದು ವಚನ ಹೀಗಿದೆ:

"ನಿನ್ನ ಪ್ರಭು ಇಚ್ಛಿಸಿದ್ದರೆ ಭೂಲೋಕದಲ್ಲಿ ಎಲ್ಲರೂ ವಿಶ್ವಾಸ ಹೊಂದುತ್ತಿದ್ದರು. (ಆದರೆ ಅವನು ನಿರ್ಬಂಧಪಡಿಸುವುದಿಲ್ಲ.) ಹಾಗಿರುವಾಗ

ಜನರು ವಿಶ್ವಾಸಿಗಳಾಗುವಂತೆ ನೀನು ಬಲವಂತಪಡಿಸುವಿಯೋ?" (10:100)

ಸತ್ಯ ವಿಶ್ವಾಸವನ್ನು ಅಂಗೀಕರಿಸದ ಅರಬ್ ದೇಶದ ಬಹುದೇವಾರಾಧಕರ ಬಗ್ಗೆ ನಿರ್ಣಯಿಸುವ ಅಧಿಕಾರವಿರುವುದು ದೇವನಿಗಲ್ಲದೆ ಮನುಷ್ಯನಿಗಲ್ಲವೆಂದು ಮೇಲಿನ ವಚನಗಳು ಸ್ಪಷ್ಟಪಡಿಸುತ್ತವೆ. ಅವರು ತಮ್ಮ ಹಾಗೆಯೇ ಇರುವ ಮನುಷ್ಯರಿಂದ ಶಿಕ್ಷೆಗೆ ಗುರಿಯಾಗುವುದರಿಂದ ಮುಕ್ತರೂ ತಮ್ಮದೇ ಧಾರ್ಮಿಕ ನಂಬಿಕೆಗಳನ್ನು ಹೊಂದುವುದಕ್ಕೆ ಸ್ವತಂತ್ರರೂ ಆಗಿರುವರು. ಧಾರ್ಮಿಕ ವಿಷಯದಲ್ಲಿ ಬಲಾತ್ಕಾರ ಮಾಡುವುದು ಮತ್ತು ಅಸಹಿಷ್ಣುತೆ ತೋರಿಸುವುದು ಇಸ್ಲಾಮಿಕ ಉಪದೇಶಗಳ ಪ್ರಕಾರ ತರ್ಕ ವಿರಹಿತವಾದ ನಡೆವಳಿಕೆಯಾಗಿದ್ದು ಅದು ದೇವನಿಗೆ ಸಹಭಾಗಿಗಳನ್ನು ಕಲ್ಪಿಸುವುದಕ್ಕೆ ಸಮವಾದ ಘೋರ ಪಾಪವೂ ಆಗಿದೆ.

ಕ್ರಿಸ್ತ ಶಕ 628ರೊಳಗಾಗಿ ಅರಬ್ ದೇಶದಲ್ಲಿ ಇಸ್ಲಾಮಿನ ಹೆಚ್ಚುತ್ತಿರುವ ಪ್ರಭಾವವನ್ನು ಗುರುತಿಸಿ ರೋಮನ್ ಸಾಮ್ರಾಜ್ಯದ ದಕ್ಷಿಣ ಗಡಿ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಯಹೂದಿ ಮತ್ತು ಕ್ರೈಸ್ತ ಗೋತ್ರಗಳು ಒಳಸಂಚು ನಡೆಸಿ ಇರಾನಿನ ಅರಸ ಕಿಸ್ರಾ ಮತ್ತು ಯಮನಿನ ರಾಜ್ಯಪಾಲ ಇಸ್ಲಾಮಿನ ವಿರುದ್ಧ ದಂಡೆತ್ತಿ ಬರುವಂತೆ ಮಾಡಿದರು. ಮದೀನದ ಸಮೀಪ ಖೈಬರ್ ಎಂಬಲ್ಲಿ ಮುಸ್ಲಿಮ್ ಸೈನ್ಯವು ಶತ್ರು ಸೈನ್ಯವನ್ನು ತಡೆಗಟ್ಟಿತು. ಮುಸ್ಲಿಮರು ಯಹೂದಿ ಮತ್ತು ಕ್ರೈಸ್ತರ ವಿರುದ್ಧ ಹೋರಾಡುತ್ತಾ ಇದ್ದ ಆ ಕಾಲದಲ್ಲಿ ಪ್ರವಾದಿ ಮುಹಮ್ಮದ್‌ರವರು(ಸ) ಅರಬ್ ದೇಶದ ಸುತ್ತುಮುತ್ತಲೂ ಇದ್ದ ವಿವಿಧ ರಾಜರಿಗೆ ಶಾಂತಿಗಾಗಿ ತನಗಿರುವ ಕಾಳಜಿ ಸೂಚಿಸಿ ಅವರ ಸಹಕಾರವನ್ನು ಬಯಸುವ ಪತ್ರಗಳನ್ನು ಬರೆದರು. ಅಂತಹ ಪತ್ರಗಳಲ್ಲಿ ಒಂದನ್ನು ಸಿನಾಯಿ ಪರ್ವತ ಪ್ರದೇಶದಲ್ಲಿ ವಾಸಿಸುತ್ತಿದ್ದ ಸಂತ ಕೆಥರಿನ್ ಮಠದಲ್ಲಿದ್ದ ಸನ್ಯಾಸಿಗಳನ್ನು ಸಂಬೋಧಿಸಿ ಬರೆಯಲಾಗಿತ್ತು. "ಸವಲತ್ತುಗಳ ಸನದು" ಎಂಬ ಒಂದು ಭಾಗ ಅದರಲ್ಲಿದ್ದು ಮುಸ್ಲಿಮ್ ಸಾಮ್ರಾಜ್ಯದಲ್ಲಿ ವಾಸಿಸುವ ಕ್ರೈಸ್ತರಿಗೆ ಮೂಲಭೂತ ಹಕ್ಕುಗಳನ್ನು ನೀಡುವ ಘೋಷಣೆ ಅದರಲ್ಲಿ ಮಾಡಲಾಗಿತ್ತು. ಅದರಲ್ಲಿ ಹೀಗೆ ಬರೆಯಲಾಗಿತ್ತು:-

"ಅಬ್ದುಲ್ಲಾರ ಪುತ್ರ ಮುಹಮ್ಮದನಿಂದ ಇದೊಂದು ಸಂದೇಶವಾಗಿದೆ. ಹತ್ತಿರ ಮತ್ತು ದೂರದಲ್ಲಿ ವಾಸಿಸುವ ಕ್ರೈಸ್ತಧರ್ಮ ಅನುಸರಿಸುವವರಿಗೆ ನೀಡಲಾಗುವ ಒಂದು ಒಡಂಬಡಿಕೆ. ನಾವು ಅವರ ಜೊತೆಗಿದ್ದೇವೆ. ನಾನು, ನನ್ನ ಸೇವಕರು, ಸಹಾಯಕರು ಮತ್ತು ಅನುಯಾಯಿಗಳು ಅವರನ್ನು ಸಂರಕ್ಷಿಸುವೆವು. ಏಕೆಂದರೆ ಕ್ರೈಸ್ತರು ನನ್ನ ಪ್ರಜೆಗಳಾಗಿದ್ದಾರೆ. ಅವರಿಗೆ ಅತೃಪ್ತಿಯುಂಟು ಮಾಡುವುದನ್ನು ನಾನು ದೇವನಾಣೆ ತಡೆಗಟ್ಟುವೆನು. ಅವರ ಮೇಲೆ ಯಾವುದೇ ಬಲಾತ್ಕಾರ ಮಾಡಲ್ಪಡದು. ಅವರ ನ್ಯಾಯಾಧೀಶರು ತಮ್ಮ ಕೆಲಸದಿಂದ ತೆಗೆದು ಹಾಕಲ್ಪಡಲಾರರು ಮತ್ತು ಅವರ ಸನ್ಯಾಸಿಗಳು ಮಠದಿಂದ ಹೊರಹಾಕಲ್ಪಡಲಾರರು. ಅವರ ಮನೆಗಳು ನಾಶಗೊಳಿಸಲ್ಪಡದು. ಅವುಗಳಿಗೆ ಹಾನಿಯನ್ನುಂಟು ಮಾಡಲಾಗದು ಮತ್ತು ಅವುಗಳಿಂದ ಏನನ್ನೂ ಮುಸ್ಲಿಮರ ಮನೆಗಳಿಗೆ ಕೊಂಡೊಯ್ಯಲಾಗದು. ಯಾರಾದರೂ ಇವುಗಳಿಗೆ ವಿರುದ್ಧವಾಗಿ ವರ್ತಿಸಿದರೆ ಅವನು ದೈವಿಕ ಒಡಂಬಡಿಕೆಯನ್ನು ಭಂಗಗೊಳಿಸಿದಂತಾಗುವುದು ಮತ್ತು ದೇವ ನಿಯುಕ್ತ ಸಂದೇಶವಾಹಕನಿಗೆ ಅವಿಧೇಯತೆ ತೋರಿಸಿದಂತಾಗುವುದು.

"ನಿಶ್ಚಯವಾಗಿಯೂ ಈ ಜನರು ನನ್ನೊಂದಿಗೆ ಸ್ನೇಹ ಸಂಬಂಧ ಹೊಂದಿದವರಾಗಿದ್ದಾರೆ. ಅವರು ದ್ವೇಷಿಸುವವುಗಳ ವಿರುದ್ದ ಸಂರಕ್ಷಣೆಯ ಸನದು ಇದಾಗಿದೆ. ಅವರನ್ನು ದೂರ ಸಾಗಲು ಯಾರೂ ಬಲಾತ್ಕಾರ ಮಾಡಬಾರದು ಮತ್ತು ಯುದ್ಧಕ್ಕೆ ಹೊರಡಲು ಒತ್ತಾಯಿಸಬಾರದು. ಮುಸ್ಲಿಮರು ಅವರ ರಕ್ಷಣೆಗಾಗಿ ಹೋರಾಡಬೇಕು. ಕ್ರಿಸ್ತೀಯ ಮಹಿಳೆಯನ್ನು ವಿವಾಹವಾಗ ಬಯಸುವ ಮುಸ್ಲಿಮ್ ಆಕೆಯ ಒಪ್ಪಿಗೆಯಿಲ್ಲದೆ ವಿವಾಹವಾಗಬಾರದು. ಅಂತಹ ಮಹಿಳೆ ವಿವಾಹದ ನಂತರ ಚರ್ಚ್‌ಗೆ ಹೋಗಲು ಬಯಸುವುದಾದರೆ ಅದಕ್ಕೆ ಅನುಮತಿಸಬೇಕು. ಅವರ ಚರ್ಚ್‌ಗಳನ್ನು ಗೌರವಭಾವದಿಂದ ಕಾಣಬೇಕು. ಅವುಗಳ ಜೀರ್ಣೋದ್ಧಾರವನ್ನು ತಡೆಯಬಾರದು. ಅವರೊಂದಿಗೆ ಮಾಡಿಕೊಂಡ ಒಪ್ಪಂದಗಳನ್ನು ಮುರಿಯಬಾರದು. ಪುನರುತ್ಥಾನದ ದಿನದ ತನಕ ಈ ಒಡಂಬಡಿಕೆಯನ್ನು ಮುಸ್ಲಿಮ್ ಸಮುದಾಯ ಪಾಲಿಸಿಕೊಂಡು ಹೋಗಬೇಕು." (ಈ ಪತ್ರದ ಮೂಲ ರೂಪವನ್ನು ನೋಡಿರಿ : <http://www.alhewar.com/labibkobti.html>)

ಈ ಒಡಂಬಡಿಕೆಯನ್ನು ಗಾಢವಾಗಿ ಅಧ್ಯಯನ ಮಾಡಬೇಕು. ಇಲ್ಲಿ ಕೇವಲ ಮುಸ್ಲಿಮ್ ರಾಜ್ಯಾಡಳಿತೆಗೆ ಅಧೀನರಾದ ಕ್ರೈಸ್ತರನ್ನು ಮಾತ್ರ ಉದ್ದೇಶಿಸಿಲ್ಲ. ಹತ್ತಿರ ಮತ್ತು ದೂರದ ಎಂದರೆ ಲೋಕದಾದ್ಯಂತ ಇರುವ ಎಲ್ಲಾ ಕ್ರೈಸ್ತರನ್ನು ಇಲ್ಲಿ ಸಂಬೋಧಿಸಲಾಗಿದೆ. ಕ್ರೈಸ್ತರನ್ನು ಸಂರಕ್ಷಿಸುವ ಮುಸ್ಲಿಮರನ್ನು "ಸೇವಕರು, ಸಹಾಯಕರು ಮತ್ತು ಅನುಯಾಯಿಗಳು" ಎಂದು ಹೆಸರಿಸಿದುದರಿಂದ ಎಲ್ಲಾ ಮುಸ್ಲಿಮರ ಹೊಣೆಗಾರಿಕೆಯನ್ನು ಸೂಚಿಸಲಾಗಿದೆ. ಇಲ್ಲಿ ಕ್ರೈಸ್ತ ಮಠಗಳ ನಿವಾಸಿಗಳನ್ನು ಪ್ರಜೆಗಳೆಂದು ಕರೆಯಲಾಗಿದೆ.

ಈ ಶಬ್ದದ ಗರ್ಭಿತಾರ್ಥವನ್ನು ಗಮನಿಸಬೇಕು, ಇಸ್ಲಾಮ್ ಧರ್ಮವನ್ನು ಅವಲಂಬಿಸದವರನ್ನು ಪ್ರಜೆಗಳೆಂದು ಕರೆದಿರುವುದರ ಇಂಗಿತಾರ್ಥವೇನೆಂದರೆ ಮುಸ್ಲಿಮ್ ದೇಶದಲ್ಲಿ ವಿಭಿನ್ನ ಧರ್ಮಗಳ ಅನುಯಾಯಿಗಳು ಶಾಂತಿಯುತವಾಗಿ ಜೀವಿಸಬಹುದು. ಪ್ರಜೆಯಾಗಿರುವುದು ಅಥವಾ ಪೌರತ್ವದ ಜವಾಬ್ದಾರಿ ಒಂದು ಪ್ರದೇಶದ ಅತ್ಯುನ್ನತ ಆಡಳಿತೆಗೆ ಬದ್ಧತೆಯಾಗಿದೆ. ಅದರ ಜೊತೆಗೆ ಸ್ವತಂತ್ರವಾದೊಂದು ಅಭಿಪ್ರಾಯವನ್ನು ಆಡಳಿತೆಯ ವಿಷಯದಲ್ಲಿ ಪ್ರಜೆಯು ಹೊಂದುವುದನ್ನು ಸಹ ಅದು ಸೂಚಿಸುತ್ತದೆ. ಮೇಲಿನ ಒಡಂಬಡಿಕೆಯಲ್ಲಿ ಈ ಅಂಶವು ಸ್ಪಷ್ಟವಾಗುತ್ತದೆ. ಆ ಒಡಂಬಡಿಕೆಯಲ್ಲಿ ಕ್ರೈಸ್ತರಿಗೆ ಸಂರಕ್ಷಣೆಗೊಳಪಟ್ಟವರೆಂಬ ಸ್ಥಾನ ನೀಡಲಾಗಿದೆ. ಅವರಿಗೆ ಅತೃಪ್ತಿ ಉಂಟಾಗುವುದನ್ನು ತಡೆಗಟ್ಟಲಾಗುವುದೆಂದು ಸೂಚಿಸಿ ಅವರ ದೂರುಗಳಿಗೆ ಗಮನ ನೀಡಲಾಗುವುದೆಂದು ಸ್ಪಷ್ಟಪಡಿಸಲಾಗಿದೆ. ಈ ಜವಾಬ್ದಾರಿಯನ್ನು ಸ್ಪಷ್ಟವಾಗಿ ಬರೆಯಲಾಗಿಲ್ಲವಾದರೂ "ದೇವನಾಣೆ" ಎಂದು ಹೇಳಿ ಇದನ್ನು ಎಲ್ಲಾ ಮುಸ್ಲಿಮರ ಜವಾಬ್ದಾರಿಯನ್ನಾಗಿ ಮಾಡಲಾಗಿದೆ.

ಪ್ರವಾದಿ ಮುಹಮ್ಮದ್‌ರವರು(ಸ) ಧರ್ಮದಲ್ಲಿ ಯಾವುದೇ ರೀತಿಯ

ಬಲಾತ್ಕಾರವಿಲ್ಲವೆಂಬ ಪವಿತ್ರ ಖುರ್‌ಆನಿನ ಉಪದೇಶವನ್ನು ಈ ಒಡಂಬಡಿಕೆಯಲ್ಲಿ ಸೂಚಿಸಿದ್ದಾರೆ. ಬಲಾತ್ಕಾರ ಸಂಭವಿಸಬಹುದಾದ ಕ್ರಮಗಳನ್ನು ವಿವರಿಸಿ ಅವುಗಳನ್ನು ತಡೆದಿದ್ದಾರೆ. ನ್ಯಾಯಾಧೀಶರನ್ನು ಕೆಲಸದಿಂದ ತೆಗೆದು ಹಾಕುವುದು, ಚರ್ಚ್‌ಗಳಿಗೆ ಹಾನಿಮಾಡುವುದು, ದೂರ ಸಾಗಲು ಅಥವಾ ಯುದ್ಧ ಮಾಡಲು ಬಲಾತ್ಕಾರ ಮಾಡುವುದು, ಕ್ರೈಸ್ತ ಮಹಿಳೆಯನ್ನು ಅವಳ ಒಪ್ಪಿಗೆ ಇಲ್ಲದೆ ಮದುವೆ ಆಗುವುದು ಮೊದಲಾದ ಬಲಾತ್ಕಾರ ಸಂಭವಿಸಬಹುದಾದ ಪ್ರಕರಣಗಳನ್ನು ನಿಷಿದ್ಧಗೊಳಿಸಿದ್ದಾರೆ. ಇಲ್ಲಿ ಸಹಿಷ್ಣುತೆಯನ್ನು ಸಾಮಾಜಿಕ ವ್ಯವಹಾರಗಳಿಗೆ ವಿಸ್ತರಿಸಲಾಗಿದೆ. ಸಂತ ಕೆಥರಿನ್ ಕ್ರೈಸ್ತ ಮಠದ ಸನ್ಯಾಸಿಗಳು ತಮ್ಮ ಒಪ್ಪಂದಗಳನ್ನು ಪಾಲಿಸುವವರಾದ ಕಾರಣ ಅವರನ್ನು ಶ್ಲಾಘಿಸಲಾಗಿದೆ. ಈ ಒಡಂಬಡಿಕೆಯ ಬಗ್ಗೆ ಮರ್ಮಡ್ಯೂಕ್ ಪಿಕ್‌ಥಾಲ್ ಹೀಗೆ ಹೇಳುತ್ತಾರೆ:

"ಸಿನಾಯಿಯ ಸನ್ಯಾಸಿ ಮಠದವರಿಗೆ ನೀಡಲಾದ ಸನದು ಈಗಲೂ ಬಾಕಿಯಾಗಿ ಉಳಿದಿದೆ. ನೀವು ಅದನ್ನು ಓದಿದರೆ ಅದರಲ್ಲಿ ಸಹಾನುಭೂತಿ ಮಾತ್ರವಲ್ಲ ನಿಜವಾದ ಪ್ರೀತಿಯು ಉಸಿರಾಡುವುದನ್ನು ಕಾಣಬಹುದು. ಮದೀನದ ಯಹೂದಿಯರು ಪ್ರವಾದಿಯವರಿಗೆ(ಸ) ಬದ್ಧರಾಗಿದ್ದ ತನಕ ಮುಸ್ಲಿಮರ ಜೊತೆ ಹೇಗೆ ವರ್ತಿಸಲಾಗುತ್ತಿತ್ತೋ ಹಾಗೆಯೇ ಅವರ ಜೊತೆಗೂ ವರ್ತಿಸಲಾಗುತ್ತಿತ್ತು. ಪ್ರವಾದಿಯವರು(ಸ) ಯಾರ ವಿರುದ್ಧವೂ ಆಕ್ರಮಣಗಾರನಾಗಿ ವರ್ತಿಸಲಿಲ್ಲ. ಅವರು ಯಾರಿಗೂ ವಿನಾ ಕಾರಣ ದಂಡ ಹೊರಿಸಲಿಲ್ಲ. ಕೇವಲ ಧಾರ್ಮಿಕ ನಂಬುಗೆಯ ವ್ಯತ್ಯಾಸದ ಕಾರಣದಿಂದ ಅವರು ಯಾರ ವಿರುದ್ಧವೂ ಯುದ್ಧ ಹೂಡಲಿಲ್ಲ. ಅವರು ಯುದ್ಧ ಹೂಡಿದುದು ಶತ್ರುಗಳ ಆಕ್ರಮಣಗಳನ್ನು ಎದುರಿಸಲಿಕ್ಕಾಗಿತ್ತು. ಕ್ರೈಸ್ತ ಮತ್ತು ಫಾರ್ಸೀ ಧರ್ಮಾನುಯಾಯಿಗಳು ಸಂದರ್ಶಿಸಲು ಬಂದಾಗ ಅವರನ್ನು ಪ್ರವಾದಿಯವರು(ಸ) ಸ್ವಾಗತಿಸಿದ ರೀತಿಯು ದಾಖಲಿಸಲ್ಪಟ್ಟಿದೆ. ಧಾರ್ಮಿಕ ಅಸಹಿಷ್ಣುತೆಯ ಯಾವುದೇ ಕುರುಹು ಇವುಗಳಲ್ಲಿ ಕಾಣಿಸಲಾರದು." (Tolerance in Islam)

ಪ್ರವಾದಿಯವರು(ಸ) ಬಳಸಿದ "ಒಡಂಬಡಿಕೆ" ಎಂಬ ಪದವು ಧಾರ್ಮಿಕ ಸಹಿಷ್ಣುತೆಯನ್ನು ಪ್ರತಿಬಿಂಬಿಸುತ್ತದೆ. ಕ್ರೈಸ್ತ ಸಹೋದರರಿಗೆ ನೀಡಬೇಕಾದ ಸವಲತ್ತುಗಳು ಮುಸ್ಲಿಮರ ಧಾರ್ಮಿಕ ಕರ್ತವ್ಯವೆಂದೂ ಅವುಗಳನ್ನು ಪಾಲಿಸಲು ದೈವಿಕ ನಿರ್ದೇಶವಿದೆಯೆಂದೂ ಸೂಚಿಸಲಾಗಿದೆ. ಮುಸ್ಲಿಮರ ಮತ್ತು ಕ್ರೈಸ್ತರ ಜೊತೆ ಮಾಡಿಕೊಂಡ ಒಡಂಬಡಿಕೆಗಳು ಸಮಾನ ಗೌರವಕ್ಕೆ ಅರ್ಹವೆಂದೂ ಅವುಗಳ ಈಡೇರುವಿಕೆಗೆ ದೈವಿಕ ಸಹಾಯ ದೊರಕುವುದೆಂದೂ ಪ್ರವಾದಿಯವರು(ಸ) ಭಾವಿಸಿದ್ದರು.

ಧಾರ್ಮಿಕ ಸಹಿಷ್ಣುತೆ ಇಸ್ಲಾಮ್ ಧರ್ಮದಲ್ಲಿ ಕೃತಿ ಶೀಲವಾಗಿರುವುದು ಈ ರೀತಿಯಾಗಿದೆ. ಮುಸ್ಲಿಮರು ಅನ್ಯ ಧರ್ಮೀಯರೊಂದಿಗೆ ಗೌರವ ಭಾವದಿಂದಲೂ ಸೌಹಾರ್ದದಿಂದಲೂ ವರ್ತಿಸಲು ದೈವಿಕ ಸಹಾಯವನ್ನು ಕೋರಿ ಅದನ್ನು ಒಂದು ವ್ಯಾವಹಾರಿಕ ಆವಶ್ಯಕತೆಯ ಮಟ್ಟದಿಂದ ಉನ್ನತ ಧಾರ್ಮಿಕ ಸ್ವಭಾವ ಗುಣದ ಮಟ್ಟಕ್ಕೆ ಒಯ್ಯಲಾಗಿದೆ. ಈ ರೀತಿ ಅರ್ಥ ಮಾಡಿಕೊಂಡರೆ ಜಿಹಾದನ್ನು "ಪವಿತ್ರ ಯುದ್ಧ" ಎಂದೂ "ಬಲಾತ್ಕಾರದ ಧರ್ಮ ಪರಿವರ್ತನೆ" ಎಂದೂ ವಿದ್ವಾಂಸರು ಅರ್ಥವಿಸುವುದು ಸಂಶಯಾಸ್ಪದವಾಗುವುದು.

ಕ್ರಿಸ್ತಶಕ 632ರಲ್ಲಿ ಹಝ್ರತ್ ಪ್ರವಾದಿಯವರು(ಸ) ಹತ್ತು ಸಾವಿರ ಅನುಯಾಯಿಗಳನ್ನು ಸಂಬೋಧಿಸಿ ಹಜ್ಜತುಲ್ ವಿದಾ (ಕೊನೆಯ ಹಜ್ಜ್) ಸಂದರ್ಭದಲ್ಲಿ ಮಾಡಿದ ಪ್ರವಚನವು ಧಾರ್ಮಿಕ ಸಹಿಷ್ಣುತೆಯ ಇನ್ನಷ್ಟು ವಿಧಾನಗಳನ್ನು ಸ್ಪಷ್ಟಪಡಿಸುತ್ತದೆ. ಅವರು ಹೇಳಿದರು:

**"ಮಾನವರೆಲ್ಲರೂ ಆದಮ್ ಮತ್ತು ಹವ್ವರವರ ಸಂತಾನಕ್ಕೆ ಸೇರಿದವರಾಗಿದ್ದಾರೆ. ಅರಬಿಗೆ ಅರಬಿಯೇತರನ ಮೇಲೆ ಶ್ರೇಷ್ಠತೆಯಿಲ್ಲ. ಶ್ವೇತ ವರ್ಣೀಯನಿಗೆ ಕಪ್ಪು ವರ್ಣೀಯನ ಮೇಲೆ ಶ್ರೇಷ್ಠತೆಯಿಲ್ಲ. ಕಪ್ಪುವರ್ಣೀಯನಿಗೆ ಶ್ವೇತ ವರ್ಣೀಯನ ಮೇಲೆಯೂ ಶ್ರೇಷ್ಠತೆ ಇಲ್ಲ. ದೇವ ಭಕ್ತಿ ಮತ್ತು ಉತ್ತಮ ನಡೆಳಿಕೆಯುಳ್ಳವರೇ ಶ್ರೇಷ್ಠರು. ಪ್ರತಿಯೊಬ್ಬ ಮುಸ್ಲಿಮ್ ಇನ್ನೊಬ್ಬ ಮುಸ್ಲಿಮನ ಸಹೋದರನಾಗಿದ್ದಾನೆ. ಮುಸ್ಲಿಮರೆಲ್ಲರೂ ಒಂದೇ ಭ್ರಾತೃ ಸಂಘಕ್ಕೆ ಸೇರಿದವರು. ಒಂದು ವಸ್ತುವನ್ನು ಸ್ವಇಚ್ಛೆಯಿಂದ ಮತ್ತು ಒತ್ತಡಕ್ಕೆ ಪಾತ್ರನಾಗದೆ ಇರುವಾಗ ಕೊಟ್ಟದ್ದು ಮಾತ್ರ ಇನ್ನೊಬ್ಬನಿಗೆ ಪಡೆಯಲು ಹಕ್ಕು ಸಿಗುವುದು. ನೀವು ನಿಮ್ಮ ವಿರುದ್ಧವೇ ಅನ್ಯಾಯ ಮಾಡಬೇಡಿರಿ. ನೀವು ಒಂದು ದಿವಸ ನಿಮ್ಮ ಸೃಷ್ಟಿಕರ್ತನ ಮುಂದೆ ಹಾಜರಾಗುವಿರಿ ಮತ್ತು ನಿಮ್ಮ ಕೆಲಸಗಳ ಕುರಿತು ಪ್ರಶ್ನಿಸಲ್ಪಡುವಿರಿ ಎಂಬುದನ್ನು ನೆನಪಿಡಿರಿ."**

ಧಾರ್ಮಿಕ ಸಹಿಷ್ಣುತೆಯು ಜಾರಿಯಾಗಲು ಸಾಮಾಜಿಕ ಸಮಾನತೆಯನ್ನು ಅಂಗೀಕರಿಸಿ ಅದಕ್ಕೆ ಬದ್ಧತೆಯನ್ನು ಸೂಚಿಸುವುದು ಆವಶ್ಯಕವೆಂದು ಹಝ್ರತ್ ಪ್ರವಾದಿಯವರು(ಸ) ಈ ಪ್ರವಚನದಲ್ಲಿ ಸೂಚಿಸಿದ್ದಾರೆ. ಕುಲ ಸಂಬಂಧವಾದ ಮತ್ತು ಜನಾಂಗ ಸಂಬಂಧವಾದ ಸಮಾನತೆಯನ್ನು ಪ್ರತಿಪಾದಿಸಿ ಮುಸ್ಲಿಮ್ ರಾಜ್ಯದಲ್ಲಿ ಜನರೆಲ್ಲರನ್ನು ಸಮಾನ ದೃಷ್ಟಿಕೋಣದಿಂದ ಕಾಣುವ ಆವಶ್ಯಕತೆಯನ್ನು ಅವರು ಒತ್ತಿ ಹೇಳಿದ್ದಾರೆ. ಒಂದು ದೇಶದಲ್ಲಿ ವಿವಿಧ ಗುಂಪುಗಳಿಗೆ ಸೇರಿದವರಿರಬಹುದಾದ ಸಂಭಾವ್ಯತೆಯನ್ನು ಅವರು ಸೂಚಿಸಿದ್ದಾರೆ. ಆದರೆ ಎಲ್ಲಾ ಮಾನವರು ಆದಮ್ ಮತ್ತು ಹವ್ವರವರ ಸಂತಾನಕ್ಕೆ ಸೇರಿದವರೆಂದು ಘೋಷಿಸಿ ಅವರು ಧರ್ಮ ಮತ್ತು ಸಮಾನತೆಗೆ ಇರುವ ನಿಕಟ ಸಂಬಂಧವನ್ನು ಪ್ರತಿಪಾದಿಸಿದ್ದಾರೆ. ಮನುಷ್ಯರು ಆದಮ್ ಮತ್ತು ಹವ್ವರವರ ಸಂತಾನಕ್ಕೆ ಸೇರಿದವರೆಂಬ ಮೂಲಭೂತ ಧಾರ್ಮಿಕ ತತ್ವದಿಂದಲೇ ಸಮಾನತೆ ಎಂಬ ಭಾವನೆಯು ಹೊರಹರಿಯುತ್ತದೆ.

ಯಾವುದೇ ಧರ್ಮದೊಂದಿಗೆ ಸಂಬಂಧ ಸ್ಥಾಪಿಸುವುದರಿಂದ ಶ್ರೇಷ್ಠತೆ ಲಭಿಸಲಾರದೆಂದೂ ಅದು ದೇವ ಭಕ್ತಿ ಮತ್ತು ಸತ್ಕಾರ್ಯಗಳಿಂದ ದೊರಕುವುದೆಂದೂ ಹಝ್ರತ್ ಪ್ರವಾದಿಯವರು(ಸ) ಹೇಳಿರುವರು.

ಮುಸ್ಲಿಮರ ಭ್ರಾತೃ ಸಂಘದ ಕುರಿತು ತಪ್ಪು ಗ್ರಹಿಕೆ ಮಾಡಬಾರದು ಮತ್ತು ಇತರ ಧಾರ್ಮಿಕ ಗುಂಪುಗಳ ವಿರುದ್ಧ ಅಸಹಿಷ್ಣುತೆಯನ್ನು ಸೂಚಿಸಲಾಗಿದೆ ಎಂದು ಭಾವಿಸಬಾರದು. ಇದು ಮುಸ್ಲಿಮರ ಐಕ್ಯತೆಯನ್ನು ಕಾಪಾಡಲಿಕ್ಕಾಗಿದೆ. ಮುಸ್ಲಿಮರು ಮುಸ್ಲಿಮೇತರರ ವಿರುದ್ಧ ಬಲಾತ್ಕಾರ

(16ನೇ ಪುಟಕ್ಕೆ)

# ಪ್ರವಾದಿಗಳು ಮತ್ತು ಅವರ ಶತ್ರುಗಳು

★ ಮೌಲಾನಾ ಬಿ. ಅಬ್ದುಲ್ಲಾ H. A.

ಅಹ್ಮದಿಯಾ ಜಮಾಅತ್ ಅದರ ಪ್ರಾರಂಭ ಘಟ್ಟದಿಂದಲೇ ಕಟು ಆಕ್ಷೇಪಗಳಿಗೂ ಭೀಕರ ವಿರೋಧಕ್ಕೂ ಗುರಿಯಾಗಿದೆ. ಎಲ್ಲಾ ಮುಸ್ಲಿಂ ಪಂಗಡಗಳು ಒಟ್ಟುಗೂಡಿ ಅದರ ನಿರ್ಮೂಲ ನಾಶಕ್ಕಾಗಿ ಟೊಂಕಕಟ್ಟಿ ಶ್ರಮಿಸಿದವು. ಪ್ರಥಮವಾಗಿ 200ಕ್ಕೆ ಮಿಕ್ಕಿದ ಪ್ರಸಿದ್ಧ ಮುಸ್ಲಿಂ ಮತಪಂಡಿತರು ಭಯಾನಕವಾದೊಂದು "ಕುಫ್ರ್ ಫತ್ವಾ"(ಮತಭ್ರಷ್ಟ ವಿಧಿ)ವನ್ನು ಅದಕ್ಕೆದುರಾಗಿ ಪ್ರಕಟಿಸಿದರು. ಆ ಫತ್ವಾದಲ್ಲಿ ಅಹ್ಮದಿಯಾ ಜಮಾತಿನ ಸ್ಥಾಪಕರನ್ನು ಅಸಭ್ಯ ಭಾಷೆಯಲ್ಲಿ ಆಕ್ಷೇಪಿಸಿ, ಆ ಮಹಾಪುರುಷ ಮತ್ತು ಅವರ ಶಿಷ್ಯಗಣ ಇಸ್ಲಾಮಿನ ವೈರಿಗಳಿಗಿಂತಲೂ ಕಟುಕಾಫಿರರೆಂದೂ ಅವರ ಕುಫ್ರ್‌ನಲ್ಲಿ ಸಂಶಯಪಡುವವರು ಸಹ ಕಾಫಿರರೆಂದೂ ಅವರನ್ನು ಎಲ್ಲಾ ವಿಧದಲ್ಲೂ ಬಹಿಷ್ಕರಿಸಬೇಕೆಂದೂ ಅವರ ಪತ್ನಿಯರನ್ನು ಬೇರೆಯವರು ವಿವಾಹ ಮಾಡಿಕೊಳ್ಳಬಹುದೆಂದೂ ಅವರು ಮುರ್ತದ್ (ಮತತ್ಯಾಗಿ)ಗಳಾದುದರಿಂದ ವಧಾರ್ಹರೆಂದೂ ಇತ್ಯಾದಿಯಾಗಿ ಪ್ರಸ್ತಾಪಿಸಲಾಗಿತ್ತು. ಬೇರೆ ಯಾವುದೇ ಸಂಘಟನೆಗೆದುರಾಗಿ ಕಂಡು ಬಾರದಷ್ಟು ಭಯಾನಕವಾದ ವಿದ್ವೇಷವೂ ವಿರೋಧವೂ ಅಹ್ಮದಿಯತಿಗೆದುರಾಗಿ ಸ್ಫೋಟಗೊಂಡಿತ್ತು. ಆ ವಿರೋಧ ಭಾವನೆ ಈಗಲೂ ಕಮ್ಮಿಯಾಗಿಲ್ಲ. ಎಲ್ಲಾ ಮುಸ್ಲಿಂ ಪಂಗಡಗಳಿಗೆ ಸೇರಿದವರು ಅವರ ಮತಪಂಡಿತರ ಮತ್ತು ಅವರ ಮುಖಂಡರ ಹಿಂದೆ ಅಣಿನೆರೆದು ಇಂದು ಸಹ ಅದನ್ನು ವಿರೋಧಿಸುತ್ತಿದ್ದಾರೆ.

ಉತ್ತರ ಭಾರತದಲ್ಲಿ ಅಹ್ಮದಿಯಾ ವಿರುದ್ಧ ಒಂದು ಪ್ರಧಾನ ಪಾತ್ರವಹಿಸಿದ ಪಂಗಡ ಅಹ್ರಾರಿ ಸಂಘಟನೆಯಾಗಿತ್ತು. ತಾವು ಭಾರತದಲ್ಲಿ ಹತ್ತು ಕೋಟಿ ಮುಸ್ಲಿಮರ ಪ್ರಾತಿನಿಧ್ಯ ವಹಿಸುವವರೆಂದು ವಾದಿಸುತ್ತಾ ಅಹ್ಮದಿಯಾ ಸಂಘಟನೆಯನ್ನು ಭೂಮುಖದಿಂದ ನಿರ್ಮೂಲನ ಮಾಡಲಿಕ್ಕಾಗಿ 1934 ರಿಂದ ಅವರು ತಮ್ಮ ತೀವ್ರ ಪರಿಶ್ರಮವನ್ನು ಆರಂಭಿಸಿದರು. ಅಕ್ರಮ ಮತ್ತು ಅನ್ಯಾಯಕರವಾದ ಎಲ್ಲಾ ಕ್ರಮಗಳನ್ನು ಅವರು ಅದಕ್ಕಾಗಿ ಪ್ರಯೋಗಿಸಿದರು. ಅವಿಭಕ್ತ ಭಾರತದಲ್ಲಿ ಮಾತ್ರವಲ್ಲ, ಪಾಕಿಸ್ತಾನದಲ್ಲಿ ಆಶ್ರಯ ಪಡೆದ ಬಳಿಕ ಅಲ್ಲಿಯೂ ಅವರು ಈ ಭಯಂಕರವಾದ ವಿದ್ವೇಷವನ್ನೇ ಮುಂದುವರಿಸಿದರು. ಆದರೆ ಅಲ್ಲಾಹನ ಸಹಾಯ ಮತ್ತು ಅನುಗ್ರಹ ನಿಮಿತ್ತ ಅಹ್ಮದಿಯಾ ಸಂಘಟನೆ ದಿನೇ ದಿನೇ ಪ್ರಗತಿ ಗಳಿಸಿತು. ಅಹ್ರಾರಿಗಳು ತಮ್ಮ ಗುರಿ ತಲುಪದೆ ಸಂಪೂರ್ಣ ಪರಾಜಿತರಾದರು. ಇಂದು ಅಹ್ರಾರಿಗಳ ಸಂಘಟನೆ ನಾಮಾವಶೇಷವಾಗಿದೆ.

ಅಹ್ಮದಿಯತನ್ನು ನಾಶಪಡಿಸಲಿಕ್ಕಾಗಿ ಎಲ್ಲಾ ಕ್ರಮಗಳನ್ನು ಪ್ರಯೋಗಿಸಿಕೊಂಡು ನಾನಾ ತರದ ಶತ್ರುಗಳು ಯತ್ನಿಸಿದ್ದು ಹಾಗೂ ಈಗಲೂ ಅದೇ ಕ್ರಮ ಮುಂದುವರಿಯುತ್ತಿರುವುದು ಅದೊಂದು ದೈವಿಕವಾದ ಸತ್ಯ ಸಂಘಟನೆಯೆಂಬುದಕ್ಕೆ ಸ್ಪಷ್ಟ ಪುರಾವೆಯಾಗಿದೆ. ಈ ರೀತಿಯ ವಿರೋಧ ಒಬ್ಬ ಮಿಥ್ಯವಾದಿಯ ಹಾಗೂ ಆತನ ಸಂಘಟನೆಯ ಎದುರಾಗಿ ಎಂದೂ ಉಂಟಾಗಿಲ್ಲ. ತದ್ವಿರುದ್ಧವಾಗಿ, ದೇವನಿಯುಕ್ತರಾದ ಸತ್ಯ ಪ್ರವಾದಿಗಳ ಮತ್ತು ಅವರ ಅನುಯಾಯಿಗಳ ಎದುರಾಗಿ ಮಾತ್ರ ಇಂತಹ ವಿದ್ವೇಷವೂ ವಿರೋಧವೂ ಯಾವಾಗಲೂ ಪ್ರಕಟಗೊಳ್ಳುತ್ತಲಿತ್ತು. ಇದು ಪವಿತ್ರ ಖುರ್‌ಆನನ್ನು ಒಮ್ಮೆಯಾದರೂ ಅರ್ಥಗ್ರಹಿಸಿಕೊಂಡು ಓದುವ ಯಾರಿಗೂ ಸುಲಭವಾಗಿ ಮನವರಿಕೆಯಾಗುವ ಒಂದು ವಾಸ್ತವಾಂಶವಾಗಿದೆ. ಅಲ್ಲಾಹು ನಿಯೋಗಿಸಿದ ಎಲ್ಲಾ ಪ್ರವಾದಿಗಳನ್ನು ಸಹ ಕೇವಲ ಕೆಲವರು ಮಾತ್ರ ಅಂಗೀಕರಿಸುತ್ತಿದ್ದರು. ಬಹುಸಂಖ್ಯಾತ ಜನರು ಅವರನ್ನು ಕಳ್ಳವಾದಿಯೆಂದು ಕರೆದು ತಿರಸ್ಕರಿಸುತ್ತಲೂ ಅವರ ಸಂಘಟನೆಯನ್ನು ನಿರ್ಮೂಲನ ಮಾಡಲಿಕ್ಕೆ ಟೊಂಕಕಟ್ಟಿ ಶ್ರಮವಹಿಸುತ್ತಲೂ ಅವರನ್ನು ಹಲವು ವಿಧ ಕಷ್ಟಗಳಿಗೂ ಯಾತನೆಗಳಿಗೂ ಗುರಿಪಡಿಸುತ್ತಲೂ ಅವರ ಮೇಲೆ ಸುಳ್ಳು ಆರೋಪಗಳನ್ನು ಹೊರಿಸುತ್ತಲೂ ಇದ್ದರು. ಈ ಸಂಗತಿಯನ್ನು ಪವಿತ್ರ ಖುರ್‌ಆನ್‌ನಲ್ಲಿ ಹಲವೆಡೆಗಳಲ್ಲಿ ಪದೇ ಪದೇ ಪ್ರಸ್ತಾಪಿಸಲಾಗಿದೆ. ಇತರ ಪ್ರವಾದಿಗಳಿಗೆ ಮಾತ್ರವಲ್ಲ, ಪ್ರವಾದಿ ಶ್ರೇಷ್ಠರಾದ ಮುಹಮ್ಮದ್ ಪೈಗಂಬರರಿಗೆ<sup>ಸ</sup> ಅನುಭವವಾದದ್ದು ಸಹ ಇದೇ ಆಗಿತ್ತು. ಆದರೆ ಈ ರೀತಿಯ ವಿರೋಧ ಒಬ್ಬ ಮಿಥ್ಯವಾದಿಯ ಎದುರಾಗಿ ಉಂಟಾದುದು ಖುರ್‌ಆನ್‌ನಿಂದಾಗಲೀ ಧಾರ್ಮಿಕ ಚರಿತ್ರೆಯಿಂದಾಗಲಿ ಸಾಬೀತಾಗುವುದಿಲ್ಲ. ಆದ್ದರಿಂದಲೇ ದೇವನಿಯೋಗವಾದಿಗಳ ಸಂಘಟನೆ ಅಭಿವೃದ್ಧಿಗೊಳ್ಳುತ್ತಿರುವುದು ಅವರ ವಾದ ಸತ್ಯವೆಂಬುದಕ್ಕೆ ಸಾಕ್ಷ್ಯವೆಂದು ಖುರ್‌ಆನ್ ಪದೇ ಪದೇ ಹೇಳಿದೆ.

## ಮಿಥ್ಯ ಪ್ರವಾದಿಗಳು ವಿರೋಧಿಸಲ್ಪಡುವುದಿಲ್ಲ

ಲೋಕದಲ್ಲಿ ಹಲವು ಕಾಲ ಘಟ್ಟಗಳಲ್ಲಿ ಸುಳ್ಳುವಾದಿಗಳು ಆಗಮಿಸಿದ್ದಾರೆ. ಆದರೆ ಅವರಲ್ಲಿ ಯಾರೂ ಸಹ ದೇವನಿಯುಕ್ತರಾದ ಸತ್ಯವಾದಿಗಳಂತೆ ವಿರೋಧಿಸಲ್ಪಡಲಿಲ್ಲ ಹಾಗೂ ಆಕ್ಷೇಪಿಸಲ್ಪಡಲಿಲ್ಲ. ಅವರನ್ನು ಸುಳ್ಳುವಾದಿಗಳೆಂದು ಸಮರ್ಥಿಸಲಿಕ್ಕಾಗಿ ಅವರಿಗೆದುರಾಗಿ ಮಿಥ್ಯವೂ ವಂಚನಾತ್ಮಕವೂ ಆದ ಆಕ್ಷೇಪಗಳೂ ಆರೋಪಗಳೂ ಎಲ್ಲೆಲ್ಲೂ ಪ್ರಚರಿಸಲ್ಪಟ್ಟಿರಲಿಲ್ಲ. ತದ್ವಿರುದ್ಧವಾಗಿ ಆ ಸುಳ್ಳುವಾದಿಗಳಲ್ಲಿ ಕೆಲವರಿಗೆ ಅಲ್ಪ ಕಾಲದಲ್ಲೇ ಅಸಾಮಾನ್ಯ ರೀತಿಯ ವಿಜಯ ಪ್ರಾಪ್ತಿಯಾಗಿತ್ತು. ಆದರೆ ನೀರ್ಗುಳ್ಳೆಗಳಂತೆ ಶೀಘ್ರವಾಗಿ ಅವರು ನಾಶಗೊಂಡು ಅವರ ಸಂಘಟನೆಗಳು ನಾಮಾವಶೇಷವಾದವು. ಹಾಗೆ ಅಲ್ಲಾಹನ ಹೆಸರಿನಲ್ಲಿ ಸುಳ್ಳು ಹೇಳಿ ಮಿಥ್ಯವಾದ ಹೂಡಿದವರನ್ನು ಅಲ್ಲಾಹನು ನಾಶಪಡಿಸುವನೆಂಬ ಅವನ ಅನುಲ್ಲಂಘನೀಯ ನಿಯಮಕ್ಕೆ ಅವರು ಗುರಿಯಾಗಿ, ಅವರ ಪರ್ಯವಸಾನ ಅವರು ಸುಳ್ಳುವಾದಿಗಳೆಂಬುದಕ್ಕೆ ಕುರುಹಾಯಿತು.

ಅವರ ಪೈಕಿ ಕೆಲವರು ಸ್ಥಾಪಿತ ಆಡಳಿತೆಯನ್ನು ಬುಡಮೇಲು ಮಾಡಿ ಅಧಿಕಾರವನ್ನು ಕಸಿಯಲು ಯತ್ನಿಸಿದ್ದರು. ಅಂಥವರು ಸರಕಾರದ ಕೈಯಿಂದ ನಾಶಗೊಂಡರು. ಪೈಗಂಬರರ ಕಾಲದಲ್ಲಿ ವಾದಿಸಿದ ಮುಸೈಲಿಮತ್ ಮತ್ತು ಇತ್ತೀಚಿಗಿನ ಕಾಲದಲ್ಲಿ ವಾದಿಸಿದ ಅಲಿ ಮುಹಮ್ಮದ್ ಬಾಬ್ ಇವರಿಬ್ಬರ ಪರ್ಯಾವಸಾನ ಈ ಯಥಾರ್ಥತ್ವವನ್ನು ಮನದಟ್ಟು ಮಾಡಿಕೊಡುತ್ತದೆ.

ಹೀಗೆ, ಸತ್ಯವಾದಿಗಳು ಭಯಾನಕ ವಿರೋಧಗಳಿಗೆ ಗುರಿಯಾಗುತ್ತಲೂ ನಾನಾ ತರದ ಶತ್ರುಗಳು ಅವರನ್ನೂ ಅವರ ಸಂಘಟನೆಯನ್ನೂ ನಿರ್ಮೂಲನ ಮಾಡಲು ಯತ್ನಿಸುತ್ತಲೂ ಇರುತ್ತಾರೆ. ಆದರೆ ಆ ಸತ್ಯಾತ್ಮರಂತೆ ಅವರ ಸಂಘಟನೆಗಳೂ ದಿನೇ ದಿನೇ ಅಭಿವೃದ್ಧಿ ಪಡೆದು ಮುನ್ನುಗ್ಗುತ್ತವೆ. ಕಾರಣವೇನೆಂದರೆ, ಅಲ್ಲಾಹುವಿನ ವಿಶೇಷವಾದ ಬೆಂಬಲ ಅವರಿಗಿರುತ್ತದೆ. ಅವನ ಬಲಿಷ್ಠ ಕೈ ಅವರನ್ನು ಆಧರಿಸಿರುತ್ತದೆ. ಆದ್ದರಿಂದಲೇ ಅಲ್ಲಾಹನು ಪವಿತ್ರ ಖುರ್‌ಆನಿನ ಹಲವೆಡೆಗಳಲ್ಲಿ ಸತ್ಯವಾದಿಗಳಿಗೆ ಎಂತಹ ವಿರೋಧವಿದ್ದರೂ ಅವರು ಜಯಿಸಿಕೊಂಡೇ ಹೋಗುವರೆಂದೂ ಆ ವಿಜಯ ಅವರ ಸತ್ಯತೆಗೆ ಸಾಕ್ಷ್ಯವೆಂದೂ ಹಲವು ರೀತಿಯಲ್ಲಿ ಪುನಃ ಪುನಃ ಪ್ರಸ್ತಾಪಿಸಿದ್ದಾನೆ.

ಅದೇ ಪ್ರಕಾರ ಅಲ್ಲಾಹನ ಪ್ರವಾದಿಗಳೆಲ್ಲರನ್ನೂ ನಂಬಬೇಕಾಗಿದೆಯೆಂದೂ ಅವರ ಪೈಕಿ ಯಾರನ್ನೂ ತಿರಸ್ಕರಿಸಬಾರದೆಂದೂ ಯಾವೊಬ್ಬ ಪ್ರವಾದಿಯನ್ನಾಗಲಿ ನಿರಾಕರಿಸುವುದು ಎಲ್ಲಾ ಪ್ರವಾದಿಗಳನ್ನೂ ನಿರಾಕರಿಸುವುದಕ್ಕೆ ತುಲ್ಯವೆಂದೂ ಅವರಿಗೆ (ತಿರಸ್ಕರಿಸುವವರಿಗೆ) ಇಹದಲ್ಲೂ ಪರದಲ್ಲೂ ಭಯಂಕರ ದೈವಿಕ ಶಿಕ್ಷೆ ಎರಗುವುದೆಂದೂ ಖುರ್‌ಆನ್ ಸ್ಪಷ್ಟವಾಗಿ ಕಲಿಸುತ್ತದೆ. ತದ್ವಿರುದ್ಧವಾಗಿ, ನೀವು ಸುಳ್ಳುವಾದಿಗಳನ್ನು ನಂಬಿದರೆ ಇಹದಲ್ಲೂ ಪರದಲ್ಲೂ ಶಿಕ್ಷೆಯಾಗುವುದೆಂದೂ ಅವರನ್ನು ವಿರೋಧಿಸಿ ನಾಶಪಡಿಸಲು ಸತ್ಯವಿಶ್ವಾಸಿಗಳು ಬದ್ಧರಾಗಬೇಕೆಂದೂ ಖುರ್‌ಆನ್ ಹೇಳುವುದಿಲ್ಲ.

ಮುಸ್ಲಿಂ ಧರ್ಮಪಂಡಿತರೂ ಪಂಗಡಗಳೂ ಅಹ್ಮದಿಯತನ್ನು ಮಿಥ್ಯ ಸಂಘಟನೆಯೆಂದು ಸಾರಲಿಕ್ಕಾಗಿಯೂ ಅದನ್ನು ನಾಶಪಡಿಸಲಿಕ್ಕಾಗಿಯೂ ಬದ್ಧಕಂಕಣರಾಗಲೇ ಬೇಕಾಗಿದೆ. ಅವರ ಈ ಪರಿಶ್ರಮ ಅಹ್ಮದಿಯತಿನ ಸ್ಥಾಪಕರು ಸತ್ಯವಾದಿಯೆಂಬುದಕ್ಕೆ ಸ್ಪಷ್ಟವಾದ ಪುರಾವೆಯೆಂದು ಪವಿತ್ರ ಖುರ್‌ಆನಿನ ಪಾಠಗಳೂ ಅದರಲ್ಲಿ ಪ್ರಸ್ತಾಪಿಸಲಾದ ಪ್ರವಾದಿಗಳ ವೃತ್ತಾಂತಗಳೂ ಸ್ಪಷ್ಟಪಡಿಸುತ್ತವೆ. ಉದಾಹರಣೆಗೆ ಖುರ್‌ಆನಿನಲ್ಲಿ ಹೇಳಲಾದ ಪ್ರವಾದಿಗಳಲ್ಲಿ ಕೆಲವರ ವೃತ್ತಾಂತಗಳನ್ನು ಸಂಕ್ಷಿಪ್ತವಾಗಿ ವಿವರಿಸಬಹುದು.

## ನೂಹ್ ನಬಿ (ಪ್ರವಾದಿ ನೋಹಾ)

ಹಝ್ರತ್ ನೂಹ್ ನಬಿಯನ್ನು(ಅ) ಅವರ ಜನಾಂಗ ಕಟುವಾಗಿ ವಿರೋಧಿಸಿದರು. ಅವರ ಮುಖ ನೋಡಿ ಆ ಎದುರಾಳಿಗಳು ಹೇಳಿದುದಾಗಿ ಖುರ್‌ಆನ್ ಹೀಗೆ ಪ್ರಸ್ತಾಪಿಸುತ್ತದೆ: "ಖಂಡಿತವಾಗಿಯೂ ನಿನ್ನನ್ನು ನಾವು ಸ್ಪಷ್ಟವಾದ ತಪ್ಪುದಾರಿಯಲ್ಲಿ ಕಾಣುತ್ತಿದ್ದೇವೆ." (7 : 61). "ನೀನು ನಮ್ಮಂತಹ ಒಬ್ಬ ಮನುಷ್ಯ ಮಾತ್ರ. ನಿನ್ನನ್ನು ಅನುಸರಿಸಿದವರು ನಮ್ಮ ಪೈಕಿಯ ಅವಿವೇಕಿಗಳಾದ ಕೀಳುಜನರಾಗಿದ್ದಾರೆ. ನಮಗಿಂತ ಯಾವ ಶ್ರೇಷ್ಠತೆಯೂ ನಿಮಗಿರುವುದು ನಮಗೆ ಕಾಣುವುದಿಲ್ಲ. ಮಾತ್ರವಲ್ಲ, ನೀವು ಸುಳ್ಳು ಹೇಳುವವರೆಂದು ನಾವು ಭಾವಿಸುತ್ತೇವೆ." "ಓ ನೂಹ್, ನೀನು ನಮ್ಮೊಡನೆ ತುಂಬಾ ವಾದಿಸಿದೆಯಷ್ಟೇ. ನೀನು ಸತ್ಯವಂತನೆಂದಾದರೆ ನಮಗೆ ಮುನ್ನೆಚ್ಚರಿಕೆಯಿತ್ತು ಭಯಪಡಿಸುವುದನ್ನು (ಶಿಕ್ಷೆ) ತಾ." "ಅವರು (ನೂಹ್ ನಬಿ) ನಾವೆಯನ್ನು ನಿರ್ಮಿಸುತ್ತಿದ್ದಾಗ ಅವರ ಎದುರಿನಿಂದ ದಾಟಿ ಹೋಗುತ್ತಿದ್ದ ಅವರ ಜನಾಂಗದ ಮುಖಂಡರು ಅವರನ್ನು ಅಪಹಾಸ್ಯ ಮಾಡುತ್ತಿದ್ದರು." (11 :28, 33, 39). ವಿರೋಧಿಗಳು ಪರಸ್ಪರ ಹೇಳಿದರು: "ಇವನು ನಿಮ್ಮಂತಹ ಒಬ್ಬ ಮನುಷ್ಯ ಮಾತ್ರ; ಇವನು ನಿಮಗಿಂತ ಶ್ರೇಷ್ಠನಾಗಲಿಕ್ಕೆ ಇಚ್ಛಿಸುತ್ತಾನೆ; ಅಲ್ಲಾಹನು ಇಚ್ಛಿಸಿದ್ದರೆ ದೇವದೂತರನ್ನು ಕಳುಹಿಸುತ್ತಿದ್ದನು. ನಮ್ಮ ಪೂರ್ವಜರಲ್ಲಿ ಇದು (ಈ ತರದ ವಾದ) ನಾವು ಕೇಳಿರಲಿಲ್ಲ. ಇವನು ಹುಚ್ಚು ಹಿಡಿದ ಒಬ್ಬ ಮನುಷ್ಯನೇ ಆಗಿದ್ದಾನೆ. ಇವನ ಸ್ಥಿತಿ ಏನಾಗುವುದೆಂದು ತಿಳಿಯಲು ಸ್ವಲ್ಪ ಕಾಲ ಕಾಯಿರಿ."(23 : 25, 26).

"ಅವರು (ವಿರೋಧಿಗಳು) ಹೇಳಿದರು: ನಾವು ನಿನ್ನನ್ನು ಅನುಸರಿಸಬೇಕೇ? ನೀಚರಲ್ಲವೇ ನಿನ್ನನ್ನು ಅನುಸರಿಸಿದವರು?" "ನೂಹ್, ನೀನು ನಿನ್ನ ವಾದವನ್ನು ಹಿಂತೆಗೆಯದಿದ್ದ ಪಕ್ಷದಲ್ಲಿ ಖಂಡಿತವಾಗಿಯೂ ನಿನ್ನನ್ನು ಕಲ್ಲೆಸೆದು ಕೊಲ್ಲಲಾಗುವುದು." (26 : 112, 117). "ಅವರು (ನೂಹ್ ನಬಿ) ತನ್ನ ಪ್ರಭುವಿನೊಡನೆ ಪ್ರಾರ್ಥಿಸಿದರು: ನಾನಿದೋ ಪರಾಜಿತನಾಗಿದ್ದೇನೆ; ನೀನು ನನಗೆ ಸಹಾಯ ನೀಡಬೇಕು." (54 : 11). "ನಾನು ನನ್ನ ಜನರನ್ನು ರಾತ್ರಿಯೂ ಹಗಲೂ (ಸತ್ಯದೆಡೆಗೆ) ಕರೆದೆನು. ಆದರೆ ನನ್ನ ಕರೆ ನಿಮಿತ್ತ ಅವರು ಇನ್ನೂ ದೂರಕ್ಕೆ ಅಗಲಿ ಓಡಿದರು. ನೀನು ಅವರನ್ನು ಕ್ಷಮಿಸಲಿಕ್ಕಾಗಿ ನಾನು ಅವರನ್ನು ಕರೆದಾಗಲೆಲ್ಲಾ (ಅದು ಕೇಳದಿರಲಿಕ್ಕಾಗಿ) ಅವರು ತಮ್ಮ ಕೈಬೆರಳುಗಳಿಂದ ಕಿವಿಮುಚ್ಚಿ, ತಮ್ಮ ವಸ್ತ್ರಗಳಿಂದ ಮುಖ ಮುಚ್ಚಿ, ಹಟ ಹಿಡಿದು ಅತಿಯಾಗಿ ಅಹಂಕಾರ ತೋರ್ಪಡಿಸಿದರು." (71 : 6-8). ತನ್ನ ಜನತೆಯ ಹೃದಯ ಕಾಠಿಣ್ಯ ಹಾಗೂ ಧಿಕ್ಕಾರಪೂರ್ವಕವಾದ ತಿರಸ್ಕಾರ ನಿಮಿತ್ತ ಅವರು ಅಲ್ಲಾಹುವಿನೊಡನೆ ಹೀಗೆ ಪ್ರಾರ್ಥಿಸಿದರು: "ನನ್ನ ಪ್ರಭೂ, ಅವಿಶ್ವಾಸಿಗಳಲ್ಲಿ ಯಾರನ್ನೂ ಈ ಭೂಮಿಯಲ್ಲಿ ವಾಸಮಾಡಲು ಬಿಡಬೇಡ; ಏಕೆಂದರೆ ನೀನು ಅವರನ್ನು ಬಿಟ್ಟರೆ ಖಂಡಿತವಾಗಿಯೂ ನಿನ್ನ ದಾಸರನ್ನು ಅವರು ತಪ್ಪುಹಾದಿಗೆಳೆಯುವರು. ಅವರು ನೀಚ ಹಾಗೂ ಕೃತಘ್ನ ಸಂತತಿಗಳನ್ನು ಮಾತ್ರವೇ ಹುಟ್ಟಿಸುವರು." (71 : 27, 28). "ಅಲ್ಲಾಹನು ನೂಹಿಗೆ ಹೀಗೆ ತಿಳಿಸಿದನು: ನಿನ್ನ ಜನರಲ್ಲಿ ಈ ತನಕ ನಂಬಿದವರ ಹೊರತು ಇನ್ನು ಯಾರೂ ನಂಬಲಾರರೆಂಬುದು ಖಂಡಿತ..... ಕೆಲವರು ಮಾತ್ರವೇ ನಂಬಿ ಅವರ ಜೊತೆಯಲ್ಲಿದ್ದರು." (11 : 37, 41).

## ಇಬ್ರಾಹೀಂ ನಬಿ (ಪ್ರವಾದಿ ಅಬ್ರಹಾಂ)

ಹಝ್ರತ್ ಇಬ್ರಾಹೀಂ ನಬಿಯನ್ನು(ಅ) ಸಹ ಅವರ ಜನರು ತಿರಸ್ಕರಿಸುತ್ತಲೂ ಕೊಲ್ಲಲ್ಲಿಕ್ಕೆ ಯತ್ನಿಸುತ್ತಲೂ ಇದ್ದರು. ಕೊನೆಗೆ ತನ್ನ ಸ್ವದೇಶವಾದ ಇರಾಕಿನಿಂದ ಬಹಳ ದೂರವಿರುವ ಶಾಂ ಎಂಬಲ್ಲಿಗೆ ಹೋಗಿ ಅವರು ಆಶ್ರಯಪಡೆಯಬೇಕಾಯಿತು. ಅವರ ಪಿತ ಅವರೊಡನೆ ಹೇಳಿದ್ದು: "ನೀನು ಸಾಕುಮಾಡದಿದ್ದರೆ ಖಂಡಿತವಾಗಿಯೂ ನಿನ್ನನ್ನು ನಾನು ಕಲ್ಲೆಸೆದು ಕೊಲ್ಲುವೆನು" ಎಂದಾಗಿತ್ತು. (ಖುರ್‌ಆನ್ 19 : 47) ಅವರ ಜನರು ಹೀಗೆ ಹೇಳಿದರು: "ನೀನು ನಮ್ಮ ಬಳಿಗೆ ಸತ್ಯವನ್ನು ತಂದಿದ್ದೀಯೇ? ಅಥವಾ ಅಪಹಾಸ್ಯ ಮಾಡುತ್ತೀಯೇ?" "ಅವರು ಹೇಳಿದರು: ನೀವು (ಆತನ ವಿಷಯದಲ್ಲಿ) ಏನಾದರೂ ಮಾಡಲು ಉದ್ದೇಶಿಸುವುದಾದರೆ, ಆತನನ್ನು (ಅಗ್ನಿಯಲ್ಲಿ ಹಾಕಿ) ಸುಡಿರಿ; ತನ್ಮೂಲಕ ನಿಮ್ಮ ದೇವರುಗಳಿಗೆ ನೆರವಾಗಿರಿ" (21 : 56, 69). "ಅವರು ಹೇಳಿದರು:ನೀವು ಅವನನ್ನು (ಬೆಂಕಿಯಲ್ಲಿ ಹಾಕಿ ಸುಡಲಿಕ್ಕಾಗಿ) ಒಂದು ಅಗ್ನಿಕುಂಡವನ್ನು ನಿರ್ಮಿಸಿರಿ; ಮತ್ತೆ ಅವನನ್ನು

ಜ್ವಲಿಸುವ ಬೆಂಕಿಯಲ್ಲಿ ಹಾಕಿರಿ" (37 : 98). "ಅವರ (ಉಪದೇಶಕ್ಕೆ) ಜನರಿಂದ ಲಭಿಸಿದ ಉತ್ತರ ಇಷ್ಟು ಮಾತ್ರವಾಗಿತ್ತು: ನೀವು ಅವನನ್ನು (ಇಬ್ರಾಹಿಂ ನಬಿಯನ್ನು) ಕೊಲ್ಲಿರಿ ಅಥವಾ ಬೆಂಕಿಯಲ್ಲಿ ಹಾಕಿ ಸುಡಿರಿ" (29 : 25). "ಅವರ ಪೈಕಿ ಬಹುಸಂಖ್ಯಾತರು ಅವರನ್ನು ನಂಬಿರಲಿಲ್ಲ" (26 : 104). ತನ್ನ ಜನರ ತಿರಸ್ಕಾರವನ್ನೂ ಅಕ್ರಮಕರವಾದ ವರ್ತನೆಯನ್ನೂ ಕಂಡು ಅವರು ಹೀಗೆ ಹೇಳುತ್ತಾ ತನ್ನ ರಾಜ್ಯವನ್ನು ತ್ಯಜಿಸಬೇಕಾಯಿತು: "ನಾನು ನನ್ನ ಪ್ರಭುವಿನ ಅಭಯ ಕೋರಿ ವಲಸೆ ಹೋಗುತ್ತೇನೆ. ಖಂಡಿತವಾಗಿಯೂ ಅವನು ಪ್ರತಾಪಶಾಲಿಯೂ ಸುಜ್ಞಾನಿಯೂ ಆಗಿದ್ದಾನೆ."(29 : 27)

## ಪ್ರವಾದಿ ಹೂದ್

ಹಝ್ರತ್ ಹೂದ್ ನಬಿಯನ್ನೂ[ಅ] ಅವರ ಜನರು ನಿರಾಕರಿಸಿದರು. ಅವರಲ್ಲಿ ಮುಖಂಡರು ಹೂದ್ ನಬಿಯೊಡನೆ ಹೇಳಿದರು: "ದಿಟವಾಗಿಯೂ ನಿನ್ನನ್ನು ಮೂರ್ಖ ಶಿಖಾಮಣಿಯೆಂದು ನಾವು ತಿಳಿದುಕೊಂಡಿದ್ದೇವೆ, ನೀನು ಸುಳ್ಳು ಹೇಳುತ್ತೀಯೆಂದು ನಾವು ಎಣಿಸುತ್ತೇವೆ." (7 : 67). ಅವರು ಹೇಳಿದರು: "ಓ ಹೂದ್, ನೀನು ನಮಗೆ ಸ್ಪಷ್ಟವಾದ ಯಾವ ಪುರಾವೆಯನ್ನೂ ನೀಡಲಿಲ್ಲ. ನೀನು ಹೇಳುವುದರಿಂದ ಮಾತ್ರ ನಾವು ನಮ್ಮ ದೇವರುಗಳನ್ನು ವರ್ಜಿಸಿ ನಿನ್ನನ್ನು ನಂಬಲಾರೆವು. ನಮ್ಮ ಕೆಲವು ದೇವರುಗಳು ನಿನಗೆ ಕೆಡುಕನ್ನುಂಟುಮಾಡಿವೆಯೆಂದು ಮಾತ್ರ ನಾವು ಹೇಳಬಲ್ಲೆವು." (11 : 54, 55). ಎಂದರೆ, ಅವರ ವಿಗ್ರಹಗಳನ್ನು ಹೂದ್ ನಬಿ ಆಕ್ಷೇಪಿಸಿದ ಕಾರಣದಿಂದ ಅವರಿಗೆ ಆ ದೇವರುಗಳಿಂದ ಕೆಡುಕುಂಟಾಗುವುದರ ಪರಿಣಾಮವಾಗಿ ಅವರಿಗೆ ಮತಿಭ್ರಮೆಯಾಗಿ ಹೀಗೆ ಏನೆಲ್ಲಾ ಹೇಳುತ್ತಿದ್ದಾರೆಂದು ತಾತ್ಪರ್ಯ. ಆ ವಿರೋಧಿಗಳು ಇನ್ನೂ ಹೇಳಿದರು: "ನೀನು ಉಪದೇಶಿಸುವುದೂ ಉಪದೇಶಿಸದೆ ಇರುವುದೂ ನಮಗೆ ಸಮಾನ (ನಿಷ್ಪ್ರಯೋಜಕವೆಂದು ತಾತ್ಪರ್ಯ). ನಿಶ್ಚಯವಾಗಿಯೂ ಇದು ಪೂರ್ವಿಕರ ನಡವಳಿಕೆಯಾಗಿದೆ." (26 : 137, 138). ಎಂದರೆ, ಮೊದಲೂ ಸಹ ಇಂತಹ ಹಲವು ಸುಳ್ಳುವಾದಿಗಳು ಆಗಮಿಸಿದ್ದರು. ಅದೇ ರೀತಿ ನೀನೂ ಸಹ ಒಬ್ಬ ಮಿಥ್ಯವಾದಿ. "ಅವರಲ್ಲಿ (ಹೂದ್ ನಬಿಯ ಜನರಲ್ಲಿ) ಬಹುಸಂಖ್ಯಾತರು ನಂಬಿರಲಿಲ್ಲ." (26 : 140).

## ಪ್ರವಾದಿ ಶುಐಬ್

ಹಝ್ರತ್ ಶುಐಬ್ ನಬಿಯ[ಅ] ವೃತ್ತಾಂತವನ್ನು ಖುರ್‌ಆನ್ ಹೀಗೆ ಮನವರಿಕೆ ಮಾಡಿಕೊಡುತ್ತದೆ: "ಅವರ ಪೈಕಿಯ ಅಹಂಕಾರಿಗಳಾದ ಮುಖಂಡರು ಹೇಳಿದರು: ಓ ಶುಐಬ್, ಖಂಡಿತವಾಗಿಯೂ ನಿನ್ನನ್ನೂ ನಿನ್ನಲ್ಲಿ ವಿಶ್ವಾಸವಿರಿಸಿದವರನ್ನೂ ನಮ್ಮ ರಾಜ್ಯದಿಂದ ನಾವು ಹೊರಹಾಕುತ್ತೇವೆ. ಅಲ್ಲವಾದರೆ ನೀವೆಲ್ಲ ನಮ್ಮ ಧರ್ಮಕ್ಕೆ ಮರಳಿ ಬರಲೇಬೇಕು." (ಆ ಮುಖಂಡರು ಶುಐಬ್ ನಬಿಯ ಅನುಯಾಯಿಗಳೊಡನೆ ಹೀಗೆ ಹೇಳಿದ್ದರು): " ನೀವು ಶುಐಬನ್ನು ಅನುಸರಿಸಿದರೆ ನಿಶ್ಚಯವಾಗಿಯೂ ನೀವು ನಷ್ಟ ಅನುಭವಿಸುವಿರಿ" (7: 89, 91). ಅವರು ಹೇಳಿದರು: "ಓ ಶುಐಬ್, ನೀನು ಹೇಳುವ ಅಧಿಕಾಂಶ ಸಂಗತಿಗಳು ನಮಗೆ ಮನವರಿಕೆಯಾಗುವುದಿಲ್ಲ; ನಿರ್ಬಲನಾದ ಒಬ್ಬನಂತೆ ನಿನ್ನನ್ನು ನಾವು ಕಾಣುತ್ತೇವೆ; ನಿನ್ನ ಗೋತ್ರದವರಿಲ್ಲದಿರುತ್ತಿದ್ದರೆ ಖಂಡಿತವಾಗಿಯೂ ನಾವು ನಿನ್ನನ್ನು ಕಲ್ಲೆಸೆದು ಕೊಲ್ಲುತ್ತಿದ್ದೆವು; ನೀನು ನಮ್ಮ ದೃಷ್ಟಿಯಲ್ಲಿ ಒಬ್ಬ ಮಾನ್ಯ ಮನುಷ್ಯನಲ್ಲ" (11 : 92). "ಅವರು ಹೇಳಿದರು: ಓ ಶುಐಬ್ , ನಮ್ಮ ಪೂರ್ವಿಕರು ಆರಾಧಿಸುತ್ತಿರುವುದನ್ನು ನಾವು ಬಿಟ್ಟುಬಿಡಬೇಕೆಂದೂ ನಮ್ಮ ಧನದಿಂದ ನಾವು ಇಷ್ಟ ಪ್ರಕಾರ ಖರ್ಚು ಮಾಡಬಾರದೆಂದೂ ಅಲ್ಲವೇ ನಿನ್ನ ಪ್ರಾರ್ಥನೆ ಆಜ್ಞಾಪಿಸುವುದು! ದಿಟವಾಗಿಯೂ ನೀನು ಸಮರ್ಥನೂ ವಿವೇಕಿಯೂ ಆಗಿರುವೆ" (11 : 88). ಹೀಗೆ ಅವರು ಹೇಳಿದ್ದು ಅಪಹಾಸ್ಯ ಸ್ವರದಲ್ಲಾಗಿತ್ತು. ಅವರು ಇನ್ನೂ ಹೇಳಿದರು: "ನಿಶ್ಚಯವಾಗಿಯೂ ನಿನಗೆ ಮಾಟ ಮಾಡಲಾಗಿದೆ. (ತನ್ನಿಮಿತ್ತ ಮತಿಭ್ರಮಣೆಯುಂಟಾಗಿದೆ). ನೀನು ನಮ್ಮ ಹಾಗೆಯೇ ಒಬ್ಬ ಮನುಷ್ಯ ಮಾತ್ರ. ನೀನು ಸುಳ್ಳು ಹೇಳುವವನೆಂದು ನಾವು ಭಾವಿಸುತ್ತೇವೆ. ನೀನು ಸತ್ಯವಂತನೆಂದಾದರೆ ಆಕಾಶದಿಂದ ನಮ್ಮ ಮೇಲೆ ಶಿಕ್ಷೆ ಎರಗಲಿ" (26 : 186, 187, 188). "ಅವರ ಜನರಲ್ಲಿ ಬಹುಸಂಖ್ಯಾತರು ನಂಬಿರಲಿಲ್ಲ." (26 : 191).

## ಮೂಸಾ ನಬಿ (ಪ್ರವಾದಿ ಮೋಸೆ)

ಇದೇ ಪ್ರಕಾರ ಮೂಸಾ ನಬಿಯನ್ನು[ಅ] ಆಕ್ಷೇಪಿಸಿ ಮಿಥ್ಯವಾದಿಯೆಂದು ವಿಧಿಸಲಾಗಿತ್ತು. ಖುರ್‌ಆನ್ ಹೀಗೆ ಹೇಳುತ್ತದೆ: "ಫಿರ್‌ಔನನ (ಫರೋಹನ) ಜನರ ಪೈಕಿಯ ಮುಖಂಡರು ಹೇಳಿದರು: ಖಂಡಿತವಾಗಿಯೂ ಇವನೊಬ್ಬ ನಿಪುಣ ಮಾಂತ್ರಿಕನಾಗಿದ್ದಾನೆ. ನಿಮ್ಮನ್ನು ನಿಮ್ಮ ಊರಿನಿಂದ ಹೊರಹಾಕಲಿಕ್ಕಾಗಿ ಇವನು ಬಯಸುತ್ತಾನೆ" (7 : 110, 111). ಮೂಸಾ ನಬಿಯನ್ನು ನಂಬಿದವರೊಡನೆ "ಫಿರ್‌ಔನ್ ಹೇಳಿದನು: ನಿಮಗೆ ನಾನು ಅನುಮತಿ ನೀಡುವ ಮೊದಲೇ ನೀವು ಅವನನ್ನು ನಂಬಿದ್ದೀರೋ? ನಿಶ್ಚಯವಾಗಿಯೂ ಇದು ಈ ನಗರದಿಂದ ಇಲ್ಲಿನ ನಿವಾಸಿಗಳನ್ನು ಹೊರಹಾಕಲಿಕ್ಕಾಗಿ ನೀವು ಹೂಡಿದ ತಂತ್ರವಾಗಿದೆ. ಅದರ ಫಲಶ್ರುತಿ ದಿಟವಾಗಿಯೂ ನೀವು ತಿಳಿಯುವಿರಿ. ನಾನು ನಿಮ್ಮ ಕೈ ಕಾಲುಗಳನ್ನು ತುಂಡರಿಸಿದ ಬಳಿಕ ನಿಮ್ಮನ್ನೆಲ್ಲಾ ಶಿಲುಬೆಗೇರಿಸಿ ಕೊಲ್ಲುವೆನು" (7 : 124, 125). "ಫಿರ್‌ಔನನ ಜನತೆಯ ಮುಖಂಡರು (ಫಿರ್‌ಔನನೊಡನೆ) ಹೇಳಿದರು: ನೀನು ಮೂಸಾನನ್ನೂ ಅವನ ಅನುಯಾಯಿಗಳನ್ನೂ ರಾಜ್ಯದಲ್ಲಿ ಕಲಹವನ್ನುಂಟುಮಾಡಲಿಕ್ಕೂ ನಿನ್ನನ್ನು ಮತ್ತು ನಿನ್ನ ದೇವರುಗಳನ್ನು ತೊರೆಯಲಿಕ್ಕೂ ಬಿಡುವೆಯಾ? ಫಿರ್‌ಔನ್ ಹೇಳಿದನು: ಅವರ ಗಂಡು ಸಂತಾನಗಳನ್ನು ನಾವು ಕೊಂದು ಸ್ತ್ರೀಯರನ್ನು ಮಾತ್ರ ಬಾಕಿಯುಳಿಸುವೆವು. ನಿಶ್ಚಯವಾಗಿಯೂ ನಾವು ಅವರ ಮೇಲಧಿಕಾರಸ್ಥರು" (7 : 128). "ಅವರಿಗೆ ಆಪತ್ತೇನಾದರೂ ಬಂದರೆ ಅದು ಮೂಸಾ ಮತ್ತು ಆತನ ಸಂಗಡಿಗರ ಕಾರಣದಿಂದ ಆಯಿತೆಂದು ಅವರು ಹೇಳುತ್ತಿದ್ದರು" (7 : 132). "ಅವರು ಹೇಳಿದರು: ನೀನು ನಮ್ಮನ್ನು ವಶೀಕರಿಸಲಿಕ್ಕಾಗಿ ಯಾವ ಸೂಚಕಕಾರ್ಯವನ್ನು ತೋರಿಸಿದರೂ ನಾವು ನಿನ್ನನ್ನು ನಂಬಲಾರೆವು" (7 : 133). "ಇದು ಸ್ಪಷ್ಟವಾದ ಮಾಯಾಜಾಲವಾಗಿದೆ... ನಮ್ಮ ಪೂರ್ವಿಕರನ್ನು ಯಾವ ರೀತಿಯಲ್ಲಿ ನಾವು ಕಂಡಿದ್ದೇವೋ ಅದರಿಂದ ನಮ್ಮನ್ನು ವಿಮುಖರನ್ನಾಗಿ ಮಾಡಲಿಕ್ಕೂ ನಿಮಗೀರ್ವರಿಗೆ (ಮೂಸಾ, ಹಾರೂನ್) ರಾಜ್ಯದಲ್ಲಿ ನಾಯಕತ್ವ ಲಭಿಸಲಿಕ್ಕೂ

ಅಲ್ಲವೇ ನೀವು ನಮ್ಮ ಬಳಿಗೆ ಬಂದಿರುವುದು. ನಿಮ್ಮಿಬ್ಬರನ್ನೂ ನಾವು ನಂಬಲಿಕ್ಕಿಲ್ಲ." (10 : 77, 79). "ಫಿರ್‌ಔನ್ ಹೇಳಿದನು: ಓ ಮೂಸಾ, ಖಂಡಿತವಾಗಿಯೂ ನಿನಗೆ ಮಾಟಮಾಡಲಾಗಿದೆಯೆಂದು ನಾನು ಎಣಿಸುತ್ತೇನೆ" (17 : 102) -ಅಂದರೆ, ಬುದ್ಧಿಭ್ರಮೆಯಾಗಿದೆಯೆಂದು. "ಅವರು (ವಿರೋಧಿಗಳು) ಹೇಳಿದರು: ಮೂಸಾ ಮಾಂತ್ರಿಕನೂ ಮಹಾಸುಳ್ಳುಗಾರನೂ ಆಗಿದ್ದಾನೆ" (40 : 25). "ಅವರು (ಎದುರಾಳಿಗಳು) ಹೇಳಿದರು: ಅವನ ಜೊತೆಗಿರುವ ವಿಶ್ವಾಸಿಗಳ ಪುತ್ರರನ್ನು ಕೊಂದು ಅವರ ಸ್ತ್ರೀಯರನ್ನು ಮಾತ್ರ ಸಜೀವ ಬಿಡಿರಿ... ಫಿರ್‌ಔನ್ ಹೇಳಿದನು: ಮೂಸಾನನ್ನು ಕೊಲ್ಲಲಿಕ್ಕಾಗಿ ನೀವು ನನ್ನನ್ನು ಬಿಡಿರಿ, ಅವನು ತನ್ನ ದೇವನೊಡನೆ ಪ್ರಾರ್ಥಿಸಲಿ, ಅವನು ನಿಮ್ಮ ಧರ್ಮವನ್ನು ಪರಿವರ್ತಿಸುವನು ಅಥವಾ ರಾಜ್ಯದಲ್ಲಿ ಕಲಹವನ್ನುಂಟುಮಾಡುವನೆಂದು ನಾನು ಭಯಪಡುತ್ತೇನೆ". (40 : 26, 27). "ಅವನು (ಫಿರ್‌ಔನ್) ಹೇಳಿದನು: ಮೂಸಾ ಒಂದೋ ಮಾಂತ್ರಿಕನು ಅಥವಾ ಹುಚ್ಚನು" (51 : 40). "ಅವರು (ಮೂಸಾ) ಅವರ ಬಳಿಗೆ ನಮ್ಮ ಕುರುಹುಗಳ ಸಹಿತ ಹೋದಾಗ ಅವರು ನಗೆಯಾಡಿದರು" (43 : 48). (ಫಿರ್‌ಔನ್ ಹೇಳಿದನು:) "ನೀಚನೂ ಸರಿಯಾಗಿ ಮಾತನಾಡಲು ಅಶಕ್ತನೂ ಆದ ಇವನಿಗಿಂತ ಉತ್ತಮನು ನಾನಲ್ಲವೇ?" (43 : 53). ಫಿರ್‌ಔನ್ ಮತ್ತು ಜನರ ಅಕ್ರಮಕರವಾದ ಈ ಸ್ಥಿತಿಯನ್ನು ಕಂಡಾಗ ಮೂಸಾ[ಅ] ಅವರೊಡನೆ ಹೇಗೆ ಹೇಳಿದರು: "ನಾನು ನನ್ನ ಮತ್ತು ನಿಮ್ಮ ಪ್ರಭುವಿನೊಡನೆ, ನೀವು ನನ್ನನ್ನು ಕಲ್ಲೆಸೆದು ಕೊಲ್ಲುವುದರಿಂದ ಅಭಯ ಬೇಡುತ್ತೇನೆ. ನೀವು ನನ್ನನ್ನು ನಂಬುವುದಿಲ್ಲವಾದರೆ ನನ್ನಿಂದ ದೂರವಿದ್ದುಕೊಳ್ಳಿರಿ" (44 : 21, 22). ಮೂಸಾನಬಿ ತನ್ನ ಕೈಲಾದಷ್ಟು ಪ್ರಬೋಧಿಸಿದರು; ಜನರನ್ನು ಸತ್ಯದೆಡೆಗೆ ಕರೆದರು. ಆದರೂ ಸಹ, ಕೆಲವರು ಮಾತ್ರ ಅವರನ್ನು ಅಂಗೀಕರಿಸಿದರು, ಖುರ್‌ಆನ್ ಹೇಳುತ್ತದೆ: "ಮೂಸಾರನ್ನು ಅವರ ಜನರ ಪೈಕಿ ಕೆಲವು ಯೌವನಸ್ಥರು ಮಾತ್ರ ನಂಬಿದರು; ಫಿರ್‌ಔನ್ ಮತ್ತು ಮುಖಂಡರು ಅವರನ್ನು ಉಪದ್ರವಿಸುವರೆಂದು ಅವರು ಹೆದರಿಕೊಂಡಿದ್ದರು (10 : 84). "ಅವರ ಪೈಕಿ ಅಧಿಕಾಂಶ ಜನರು ನಂಬಿರಲಿಲ್ಲ" (26 : 68).

## ಈಸಾನಬಿ (ಪ್ರವಾದಿ ಯೇಸು)

ಇಸ್ರಾಯೇಲರಿಗೆ ಪ್ರವಾದಿಯಾಗಿ ಆಗಮಿಸಿದ ಹಝ್ರತ್ ಈಸಾನಬಿಯನ್ನು[ಅ] ಅವರ ಜನರಾದ ಯಹೂದ್ಯರಲ್ಲಿ ಕೆಲವರು ಮಾತ್ರ ನಂಬಿದ್ದರೆಂಬುದು ಐತಿಹಾಸಿಕ ಸತ್ಯವಾಗಿದೆ. ಬಹುಸಂಖ್ಯಾತ ಜನರು ಮತ್ತು ಅವರ ಪಂಡಿತರು ಈಸಾನಬಿಯನ್ನು ವ್ಯಭಿಚಾರ ಪುತ್ರನೆಂದೂ ಸುಳ್ಳು ಪ್ರವಾದಿಯೆಂದೂ ವಿಧಿಸಿ ಅವರು ದೇವಶಾಪಕ್ಕೆ ತುತ್ತಾದ ಒಬ್ಬ ಮಿಥ್ಯವಾದಿಯೆಂದು ಸಾಧಿಸಲಿಕ್ಕಾಗಿ ಅವರನ್ನು ಶಿಲುಬೆಗೆ ಜಡಿದು ಕೊಲ್ಲಲು ಯತ್ನಿಸಿದರು. ಆದರೆ ಅಲ್ಲಾಹನು ತನ್ನ ವಿಶೇಷವಾದ ಅನುಗ್ರಹದಿಂದ ಅವರೊಡನೆ ಮಾಡಿದ ವಾಗ್ದಾನವನ್ನನುಸರಿಸಿ ಶಿಲುಬೆಯ ಮೇಲಿನ ಮರಣದಿಂದ ಅವರನ್ನು ರಕ್ಷಿಸಿದನು.

ಖುರ್‌ಆನ್ ಹೇಳುತ್ತದೆ: " ಅವರ (ಯಹೂದ್ಯರ) ಅವಿಶ್ವಾಸ ನಿಮಿತ್ತ, ಅವರು ಮರ್‌ಯಮ್ ಹೆಸರಿನಲ್ಲಿ ಘೋರ ಅಪರಾಧವನ್ನು ಹೊರಿಸಿದ ನಿಮಿತ್ತ ಮತ್ತು ದೇವಸಂದೇಶವಾಹಕನಾದ ಮಸೀಹ್ ಈಸಬ್ನು ಮರ್‌ಯಮನ್ನು (ಪ್ರವಾದಿ ಯೇಸುವನ್ನು) ತಾವು ಕೊಂದೆವು ಎಂದು ಅವರು ಹೇಳಿದ ನಿಮಿತ್ತ ನಾವು ಅವರನ್ನು ಶಪಿಸಿರುವೆವು" (4 : 157, 158). ಯಹೂದ್ಯರು ಅವರನ್ನು ಮಸೀಹ್ ಮತ್ತು ದೇವಸಂದೇಶವಾಹಕ ಎಂದು ಹೇಳಿದ್ದು ಅಪಹಾಸ್ಯ ಸ್ವರದಲ್ಲಾಗಿತ್ತು. ಖುರ್‌ಆನ್ ಇನ್ನೊಂದೆಡೆಯಲ್ಲಿ ಹೀಗೆ ಹೇಳುತ್ತದೆ: "ಅವರು (ಯಹೂದ್ಯರು) ಗೂಢ ತಂತ್ರ ಪ್ರಯೋಗಿಸಿದರು (ಈಸಾನಬಿಯನ್ನು ವಧಿಸಲಿಕ್ಕಾಗಿ). ಅಲ್ಲಾಹನು ಸಹ ಪ್ರತಿ ತಂತ್ರ ಪ್ರಯೋಗಿಸಿದನು" (3 : 55). ಅಂದರೆ, ಯಹೂದ್ಯರ ಮೋಸವನ್ನು ಅಲ್ಲಾಹನು ವಿಫಲಗೊಳಿಸಿ ಈಸಾನಬಿಯನ್ನು ರಕ್ಷಿಸಿದನು. ಅವರ ತಿರಸ್ಕಾರ ಭಾವನೆಯನ್ನು ಈಸಾನಬಿ ಮನವರಿತಾಗ ಹೀಗೆ ಕೇಳಿದರು: "ದೇವ ಮಾರ್ಗದಲ್ಲಿ ನನಗೆ ಸಹಾಯಕರು ಯಾರು?" (3 : 53). "ಇದರ ಸಂಬಂಧಿಸಿ ಈಸಾನಬಿಯೊಡನೆ ಅಲ್ಲಾಹು ಹೇಳುತ್ತಾನೆ: ಇಸ್ರಾಯೇಲ್ ಸಂತತಿಗಳಿಂದ ನಾನು ನಿನ್ನನ್ನು ರಕ್ಷಿಸಿದ್ದನ್ನು ಜ್ಞಾಪಿಸು; ನೀನು ಅವರ ಬಳಿಗೆ ಸ್ಪಷ್ಟವಾದ ಪುರಾವೆಗಳ ಸಹಿತ ಹೋದಾಗ ಅವರ ಪೈಕಿ ನಿರಾಕರಿಸಿದವರು ಹೇಳಿದರು: ಖಂಡಿತವಾಗಿಯೂ ಇದು ಸ್ಪಷ್ಟವಾದ ಮೋಸಗಾರಿಕೆಯಾಗಿದೆ" (5 : 111). ಯಹೂದ್ಯರು ಅವರನ್ನು ಆಕ್ಷೇಪಿಸುತ್ತಾ ವಧಿಸಲಿಕ್ಕೆ ಪ್ರಯತ್ನಿಸಿದಾಗ ಸ್ವದೇಶ ಬಿಡಲು ಅವರು ನಿರ್ಬಂಧಿತರಾದರು; ಅಲ್ಲಾಹು ಅವರನ್ನು ರಕ್ಷಿಸಿದನು. ಹಾಗೆ ಅವರು ಫೆಲಸ್ತೀನದಿಂದ ಪಲಾಯನ ಮಾಡಿ ಪೂರ್ವ ದೇಶಗಳ ಕಡೆಗೆ ಯಾತ್ರೆ ಹೊರಟರು. ಅದರ ಕುರಿತು ಅಲ್ಲಾಹು ಹೀಗೆ ಹೇಳುತ್ತಾನೆ: "ನಾವು ಇಬ್ನು ಮರ್‌ಯಮನ್ನೂ (ಈಸಾನಬಿಯನ್ನು) ಅವರ ಮಾತೆಯನ್ನೂ ಒಂದು ಕುರುಹನ್ನಾಗಿ ಮಾಡಿ ಅವರೀರ್ವರಿಗೂ ವಾಸಯೋಗ್ಯ ಹಾಗೂ ಶುದ್ಧಜಲದಿಂದ ಕೂಡಿದ ಒಂದು ಉನ್ನತ ಪ್ರದೇಶದಲ್ಲಿ ಅಭಯ ನೀಡಿದೆವು" (23 : 51). ಇದರಲ್ಲಿ ಹೇಳಿದ ಉನ್ನತ ಪ್ರದೇಶ (ರಬುವತ್) ಕಾಶ್ಮೀರವೆಂದು ಇಂದು ಸಾಬೀತಾದ ಒಂದು ಸತ್ಯಸಂಗತಿಯಾಗಿದೆ. ಈಸಾನಬಿ ಪ್ರಬೋಧಿಸಬೇಕಾಗಿದ್ದ ಬನೀ ಇಸ್ರಾಯೀಲ್ ಜನಾಂಗದ ಒಂದು ದೊಡ್ಡ ಪಾಲು ಜನರು ಈಸಾನಬಿ ಆವಿರ್ಭವಿಸುವುದಕ್ಕಿಂತ ಕೆಲವು ನೂರು ವರ್ಷಗಳ ಮೊದಲು ಕಾಶ್ಮೀರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಂದು ನೆಲೆಸಿದ್ದರೆಂದು ಚರಿತ್ರೆಯಿಂದ ತಿಳಿದು ಬರುತ್ತದೆ. ಅವರೀರ್ವರಿಗೂ ಅಭಯ ನೀಡಲಾಯಿತೆಂದು ಖುರ್‌ಆನಿನಲ್ಲಿ ಹೇಳಿರುವುದರಿಂದ ಅವರಿಗೆ ಆಪತ್ಕರವಾದ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿತ್ತೆಂದೂ ಅದರಿಂದ ಅವರನ್ನು ರಕ್ಷಿಸಿ ಈ ಅಭಯ ನೀಡಲಾಗಿತ್ತೆಂದೂ ವ್ಯಕ್ತವಾಗುತ್ತದೆ. ಪುತ್ರನಿಗೆ ಎದುರಿಸಬೇಕಾಗಿ ಬಂದಿದ್ದ ವಿಪತ್ತು ಮಾತೆಗೂ ವಿಪತ್ತೆಂಬುದು ಸ್ಪಷ್ಟವಷ್ಟೇ. ಆ ವಿಪತ್ತು, ಈಸಾನಬಿಯನ್ನು ಶಿಲುಬೆಗೇರಿಸಿ ಕೊಲ್ಲಲು ಯಹೂದ್ಯರು ಯತ್ನಿಸಿದ, ಮೇಲೆ ಹೇಳಿದ ಸಂಚು ಅಲ್ಲದೆ ಬೇರೇನೂ ಅಲ್ಲ.

ಕ್ರೈಸ್ತರ ಸುವಾರ್ತೆಗಳು ಸಹ ಈ ವಸ್ತುಸ್ಥಿತಿಯನ್ನು ಮನದಟ್ಟು ಮಾಡಿಕೊಡುತ್ತವೆ. ಯಹೂದ್ಯರಲ್ಲಿ ಹೆಚ್ಚಿನವರು ಅವರನ್ನು ಜರೆದು ಸುಳ್ಳುವಾದಿಯೆಂದು ಸಮರ್ಥಿಸಲಿಕ್ಕೆ ಯತ್ನಿಸಿದ್ದರು; ಮಾತ್ರವಲ್ಲ, ಅವರನ್ನು ಶಿಲುಬೆಗೇರಿಸಿ ಕೊಲ್ಲಲಿಕ್ಕೂ ಆ ಮೂಲಕ ಅವರನ್ನು ಶಾಪಗ್ರಸ್ತನೆಂದು ರುಜುಪಡಿಸಲಿಕ್ಕೂ ಹಲವು ರೀತಿಯಲ್ಲಿ ಪ್ರಯತ್ನಿಸಿದ್ದರು. ಅವರ ತಲೆಯ ಮೇಲೆ ಮುಳ್ಳಿನ ಕಿರೀಟವನ್ನಿಟ್ಟು ಯಹೂದ್ಯರ ರಾಜನೆಂದು ಆರ್ಭಟಿಸಿ

ಅಪಹಾಸ್ಯ ಮಾಡಿದರು. ಇತರರನ್ನು ರಕ್ಷಿಸಲಿಕ್ಕೆ ಬಂದ ನಿನಗೆ ಸ್ವಯಂ ರಕ್ಷೆ ಹೊಂದಲು ಸಾಧ್ಯವಾಗುವುದಿಲ್ಲ ಅಲ್ಲವೇ ಎಂದು ಹೀನೈಸಿದರು. ಅವರನ್ನು ನಂಬಿದವರ ಕುರಿತು ಯಹೂದ್ಯ ಮತಪಂಡಿತರು ಹೇಳಿದ್ದು ಅವರು ಧರ್ಮದ ಕುರಿತು ಪರಿಜ್ಞಾನವಿಲ್ಲದವರೂ ಶಾಪಗ್ರಸ್ತರೆಂದೂ ಆಗಿತ್ತು. ಅವರು ಹೇಳಿದರು: "ನೀವೂ ಮರುಳಾದಿರಾ? ಹಿರೀಸಭೆಯವರಲ್ಲಿಯಾಗಲಿ ಫರಿಸಾಯರಲ್ಲಿಯಾಗಲಿ ಯಾರಾದರೂ ಅವನನ್ನು ನಂಬಿದ್ದಾರೋ? ಧರ್ಮಶಾಸ್ತ್ರವನ್ನರಿಯದಂಥ ಈ ಹಿಂಡು ಶಾಪಗ್ರಸ್ತವಾದದ್ದೇ" (ಯೋಹಾನ 7 : 48, 49).

ಮಾತ್ರವಲ್ಲ, ಈಸಾನಬಿಯ ಅನುಯಾಯಿಗಳನ್ನು ಪ್ರಾರ್ಥನಾಲಯದಲ್ಲಿ ಪ್ರಾರ್ಥನೆ ನಡೆಸಲಿಕ್ಕೆ ಯೆಹೂದ್ಯ ಮತಪಂಡಿತರೂ ಅವರ ಸಿಬ್ಬಂದಿಗಳೂ ಅನುಮತಿಸುತ್ತಿರಲಿಲ್ಲ. ಸುವಾರ್ತೆ ಹೇಳುತ್ತದೆ: "ಯಾರಾದರೂ ಯೇಸುವನ್ನು (ಈಸಾನಬಿಯನ್ನು) ಕ್ರಿಸ್ತ (ಮಸೀಹ್) ನೆಂದು ಒಪ್ಪಿಕೊಂಡು ಹೇಳಿದರೆ ಅಂಥವನಿಗೆ ಬಹಿಷ್ಕಾರ ಹಾಕಬೇಕೆಂದು ಯೆಹೂದ್ಯರು ಅದಕ್ಕೆ ಮುಂಚೆ ಗೊತ್ತು ಮಾಡಿಕೊಂಡಿದ್ದರು." (ಯೋಹಾನ 9 : 23).

ಇಷ್ಟು ಮಾತ್ರವಲ್ಲ, ಯಹೂದ್ಯ ಪಂಡಿತರೂ ಪುರೋಹಿತರೂ ಒಂದು ಕಡೆ ಈಸಾನಬಿಯ ಕುರಿತು ಅವರು ಅಂದಿನ ಆಡಳಿತೆಯ ಶತ್ರುವೆಂದು ಹೇಳಿಕೊಂಡು ಆಡಳಿತಾಧಿಕಾರಿಗಳು ಅವರ ವಿರುದ್ಧವಾಗಿ ಕ್ರಮ ಕೈಗೊಳ್ಳುವಂತೆ ಹಲವು ರೀತಿಯಲ್ಲಿ ಪ್ರಯತ್ನಿಸಿದರೆ, ಇನ್ನೊಂದು ಕಡೆಯಲ್ಲಿ ಅವರು ತೌರಾತ್ (ಹಳೆ ಒಡಂಬಡಿಕೆ) ನ ವಿಧಿಗಳಿಗೆ ವಿರುದ್ಧವಾಗಿ, ರಾಜ್ಯಾಡಳಿತೆಯ ನಿಯಮಗಳನ್ನು ಅನುಸರಿಸಲಿಕ್ಕೆ ಉಪದೇಶಿಸುತ್ತಾರೆಂದು ಹೇಳಿ ಜನಸಾಮಾನ್ಯರನ್ನು ಈಸಾನಬಿಯ ವಿರುದ್ಧವಾಗಿ ವರ್ತಿಸುವಂತೆ ಯತ್ನಿಸಿದ್ದರು.

## ಮುಹಮ್ಮದ್ ಪೈಗಂಬರ್

ಇನ್ನು, ಪ್ರವಾದಿ ಪ್ರಭು ಹಾಗೂ ಖಾತಮುನ್ನಬಿಯ್ಯೀನ್ ಆದ ಮುಹಮ್ಮದ್ ನಬಿ(ಸ) ಅವರ ಕುರಿತು ಶತ್ರುಗಳ ವರ್ತನೆ ಯಾವ ರೀತಿಯಲ್ಲಾಗಿತ್ತೆಂದು ನೋಡೋಣ. ಅವರ ರಾಜ್ಯದವರಾದ ಮಕ್ಕಾ ನಿವಾಸಿಗಳು ಅವರನ್ನು ಸುಳ್ಳುವಾದಿಯೆಂದು ವಿಧಿಸಿದರು. ಅವರನ್ನೂ ಶಿಷ್ಯವೃಂದವನ್ನೂ ವಿವರಿಸಲಸಾಧ್ಯವಾದ ಯಾತನೆಗಳಿಗೂ ಅತಿ ಭಯಾನಕವಾದ ಹಿಂಸೆಗಳಿಗೂ ಗುರಿಪಡಿಸಿದರು. ಅವರ ತೇಜಃಪುಂಜ ಮುಖವನ್ನು ನೋಡಿ ಅವರು ಮಹಾ ಸುಳ್ಳುಗಾರನೆಂದೂ ನೀಚನೆಂದೂ ಹುಚ್ಚನೆಂದೂ ಮಾಟಮಾಡಲ್ಪಟ್ಟವನೆಂದೂ ಇತ್ಯಾದಿಯಾಗಿ ಅವಹೇಳನ ಮಾಡುತ್ತಿದ್ದರು. ಆ ಜನರಲ್ಲಿದ್ದ ಮುಖಂಡರೂ ಹೆಚ್ಚು ತಿಳುವಳಿಕೆಯಿದ್ದ ಮತ್ತು ಪದವಿಗಳಿಸಿದ್ದ ನೇತಾರರೂ ಈ ವಿಷಯದಲ್ಲಿ ಹೆಚ್ಚು ಕ್ರಿಯಾಶೀಲರಾಗಿದ್ದರು. ಆ ಸತ್ಯಾತ್ಮ ತನ್ನ ಶತ್ರುಗಳ ಭಯಂಕರ ವಿರೋಧ ಸಹಿಸಲಸಾಧ್ಯವಾದ ಹಂತವನ್ನು ತಲುಪಿದಾಗ, ದೇವಾಜ್ಞೆಯನುಸಾರ ತನ್ನ ಪ್ರೀತಿಯ ಊರನ್ನು ಬಿಟ್ಟು ಮದೀನಕ್ಕೆ ಹೋಗಿ ಅಭಯ ಪಡೆದರು. ಅಲ್ಲಿ ಅಂದು ಮೂರು ಯಹೂದ್ಯ ಗೋತ್ರಗಳಿದ್ದವು. ಆ ಕಾಲದಲ್ಲಿ ಅರಬಿ ರಾಜ್ಯದಲ್ಲಿ ವಿಗ್ರಹಾರಾಧಕರಿಗಿಂತಲೂ ಕ್ರೈಸ್ತರಿಗಿಂತಲೂ ತಿಳುವಳಿಕೆಯಲ್ಲೂ ನಾಗರಿಕತೆಯಲ್ಲೂ ಸಂಸ್ಕೃತಿಯಲ್ಲೂ ಮೇಲ್ಮಟ್ಟದಲ್ಲಿದ್ದವರು ಯಹೂದ್ಯರಾಗಿದ್ದರು. ಅವರ ಧರ್ಮಗ್ರಂಥದಲ್ಲಿ ಪೈಗಂಬರರ ಸಂಬಂಧಿಸಿ ಭವಿಷ್ಯೋಕ್ತಿಗಳು ಒಳಗೊಂಡಿದ್ದುವು. ಆದರೂ ಅವರು ಆ ದಿವ್ಯಾತ್ಮರ ಸತ್ಯತೆಯ ಕುರಿತು ಚಿಂತಿಸಿ ಅವರನ್ನು ಅಂಗೀಕರಿಸುವುದರ ಬದಲು ಸುಳ್ಳುವಾದಿಯೆಂದು ವಿಧಿಸಿದರು. ಮಾತ್ರವಲ್ಲ, ಆ ದಿವ್ಯಾತ್ಮರನ್ನೂ ಅನುಚರ ಸಂಘವನ್ನೂ ಮದೀನದಲ್ಲಿ ಸ್ವೈರವಾಗಿ ಮತ್ತು ಸಮಾಧಾನದಿಂದ ಇರಲಿಕ್ಕೆ ಕೂಡ ಬಿಡದೆ ಸಹಿಸಲಸದಳವಾದ ಹಲವು ಕುತಂತ್ರಗಳಲ್ಲೂ ದುರ್ಬೋಧನೆಗಳಲ್ಲೂ ಆ ಯೆಹೂದ್ಯರು ನಿರಂತರ ನಿರತರಾಗಿದ್ದರು. ಅಕ್ರಮಕರವಾದ ಈ ವರ್ತನೆಗಳಿಗೆ ಶಿಕ್ಷೆಯನ್ನು ಅವರು ಅನುಭವಿಸಿದರೂ ಅವರು ಆ ದಿವ್ಯಾತ್ಮನನ್ನು ಅಲ್ಲಾಹನ ಸತ್ಯಸಂದೇಶವಾಹಕನೆಂದು ಅಂಗೀಕರಿಸಲು ಒಪ್ಪಲಿಲ್ಲ. ಅವರ ಈ ವರ್ತನೆಯ ಕುರಿತು ಪೈಗಂಬರರು ಅತೀವ ದುಃಖದಿಂದ ಹೀಗೆ ಹೇಳಿದ್ದರು: "ಯಹೂದ್ಯರಲ್ಲಿ ಹತ್ತು ಮಂದಿಯಾದರೂ ನನ್ನನ್ನು ನಂಬುತ್ತಿದ್ದರೆ ಯಹೂದ್ಯ ಜನಾಂಗ ಸಂಪೂರ್ಣ ನನ್ನನ್ನು ನಂಬುತ್ತಿತ್ತು"(ಬುಖಾರಿ). ಅಂದರೆ, ಪಂಡಿತರೂ ಪ್ರಮುಖರೂ ಆಗಿರುವ ಹತ್ತು ಮಂದಿಯಾದರೂ ಆ ಸತ್ಯಾತ್ಮನನ್ನು ನಂಬಿದ್ದರೆ, ಇತರ ಯಹೂದ್ಯರೂ ನಂಬುತ್ತಿದ್ದರೆಂದು ತಾತ್ಪರ್ಯ. ಆದರೆ ಅಯ್ಯೋ ಪರಿತಾಪಕರ! ಆ ಪೈಗಂಬರರು, ಪ್ರವಾದಿತ್ವ ನಭೋಮಂಡಲದಲ್ಲಿ ಸೂರ್ಯನಂತೆ ಪ್ರಶೋಭಿಸುತ್ತಿದ್ದ ಒಂದು ಜ್ಯೋತಿರ್ಗೋಳವಾಗಿದ್ದೂ ಸಹ ಪಂಡಿತರೆಂದೂ ವೇದಗ್ರಂಥದ ವಾರೀಸುದಾರರೆಂದೂ ಹೆಮ್ಮೆ ಪಡುತ್ತಿದ್ದ ಆ ಯಹೂದ್ಯರು ಅವರನ್ನು ನಂಬಲಿಲ್ಲ!

ಆ ದಿವ್ಯಾತ್ಮರ ಕುರಿತು ಶತ್ರುಗಳು ಏನೆಲ್ಲಾ ಆಕ್ಷೇಪಿಸಿದರೆಂದು ನೋಡೋಣ. ಪವಿತ್ರ ಖುರ್‌ಆನ್ ಹೇಳುತ್ತದೆ: "ಅವರು ನಿನ್ನನ್ನು ಕಾಣುವಾಗ 'ಇವನನ್ನೋ ಅಲ್ಲಾಹು ಪ್ರವಾದಿಯಾಗಿ ಕಳುಹಿಸಿದ್ದು' ಎಂದು ಹೇಳುತ್ತಾ ನಿನ್ನನ್ನು ಅಪಹಾಸ್ಯ ಮಾಡುತ್ತಾರೆ" (25 : 42). "ಅಲ್ಲಾಹು ಒಬ್ಬ ಮನುಷ್ಯನನ್ನೋ ಸಂದೇಶವಾಹಕನಾಗಿ ನಿಯೋಗಿಸಿದ್ದು?" (17 : 95). "ಈ ಖುರ್‌ಆನ್ ಎರಡು ಪಟ್ಟಣಗಳ ವ್ಯಕ್ತಿಗಳಲ್ಲಿ ಪ್ರಮುಖನಾದ ಒಬ್ಬನಿಗೆ ಯಾಕೆ ಅವತೀರ್ಣವಾಗಲಿಲ್ಲ?" (43 : 32). ಅಂದರೆ, ಖುರ್‌ಆನ್ ಅಲ್ಲಾಹನಿಂದ ಅವತೀರ್ಣಗೊಳಿಸಲ್ಪಟ್ಟಿದ್ದರೆ ಮಕ್ಕಾ, ತಾಇಫ್ ಎಂಬೀ ಪಟ್ಟಣಗಳ ನಿವಾಸಿಗಳ ಪೈಕಿ ಕೀರ್ತಿಶಾಲಿಯಾದ ಯಾವನಾದರೊಬ್ಬ ಪ್ರಮುಖ ವ್ಯಕ್ತಿಗೆ ಅವತೀರ್ಣಗೊಳ್ಳಬೇಕಾಗಿತ್ತಲ್ಲವೇ; ಖ್ಯಾತಿಯಾಗಲಿ ಯೋಗ್ಯತೆಯಾಗಲಿ ಇಲ್ಲದ ಒಬ್ಬನಿಗೆ ಅವತೀರ್ಣಗೊಂಡಿತು ಎಂಬುದೇ ಅದು ದೇವನ ಕಡೆಯದ್ದಲ್ಲವೆಂಬುದಕ್ಕೆ ಪುರಾವೆಯಷ್ಟೇ! - ಇದಾಗಿತ್ತು ಅವರ ಆಕ್ಷೇಪದ ಉದ್ದೇಶ. ಪೈಗಂಬರರನ್ನು ಹೀನೈಸುತ್ತಾ ಅವರು ಹೀಗೆ ಹೇಳಿದರು: "ಓ ತನಗೆ ಉಪದೇಶ ಗ್ರಂಥ ಅವತೀರ್ಣವಾಗಿದೆಯೆಂದು ವಾದಿಸುವವನೇ, ನಿಶ್ಚಯವಾಗಿಯೂ ನೀನೊಬ್ಬ ಹುಚ್ಚನಾಗಿರುವೆ. ನೀನು ಸತ್ಯವಾದಿಯಾಗಿದ್ದರೆ ಏಕೆ ನಮ್ಮ ಬಳಿಗೆ ದೇವದೂತರನ್ನು (ಮಲಾಯಿಕ್) ಕರೆ ತರುವುದಿಲ್ಲ?" (15 : 7, 8). ಖುರ್‌ಆನ್ ಹೇಳುತ್ತದೆ: "ಅವರ ಪೈಕಿ ಒಬ್ಬ ಮುನ್ನೆಚ್ಚರಿಕೆ ನೀಡುವಾತ ಅವರ ಬಳಿಗೆ ಬಂದನೆಂಬ ವಿಚಾರದಲ್ಲಿ ಅವರು ಆಶ್ಚರ್ಯಪಟ್ಟರು. ಆ ಅವಿಶ್ವಾಸಿಗಳು ಹೇಳಿದರು: ಇವನು ಜಾದುಗಾರನೂ

ಮಹಾ ಸುಳ್ಳು ನುಡಿಯುವವನೂ ಆಗಿದ್ದಾನೆ.... ಖಂಡಿತವಾಗಿಯೂ ಇದು (ಈ ವಾದ) ಉದ್ದೇಶಪೂರ್ವಕ ನಿರ್ಮಿಸಿದ್ದಾಗಿದೆ. ಈ ಬಗೆಯ ಒಂದು ವಾದವನ್ನು ಇತರ ಯಾವುದೇ ಧರ್ಮದಲ್ಲಿ ನಾವು ಕೇಳಿಲ್ಲ. ನಿಶ್ಚಯವಾಗಿಯೂ ಇದು ಕೃತ್ರಿಮವಲ್ಲದೆ ಬೇರೇನೂ ಅಲ್ಲ. ನಮ್ಮ ಪೈಕಿ ಇವನಿಗೋ ಉಪದೇಶ ಅವತೀರ್ಣವಾದದ್ದು?: (38 : 5-9). ಆ ಅವಿಶ್ವಾಸಿಗಳು ಪೈಗಂಬರರನ್ನು ಹೀಗೆ ಸಹ ಆಕ್ಷೇಪಿಸಿದರು: "ಇವನು ನಿಮ್ಮಂತಹ ಒಬ್ಬ ಮನುಷ್ಯನಲ್ಲವೇ? ಆದರೂ ತಿಳಿದುಕೊಂಡು ನೀವು ಈ ಜಾಲ ವಿದ್ಯೆಗೆ ಗುರಿಯಾಗುತ್ತೀರಾ?... ಮಾತ್ರವಲ್ಲ, ಅವರು ಹೇಳಿದರು: ಇದು (ಖುರ್‌ಆನ್) ಕಂಗೆಡಿಸುವ ಸ್ವಪ್ನಗಳಂತಿವೆ. ಅಲ್ಲ, ಅವನು ಅದನ್ನು ಕೃತ್ರಿಮವಾಗಿ ರಚಿಸಿದ್ದಾನೆ. ಮಾತ್ರವಲ್ಲ, ಅವನೊಬ್ಬ ಕವಿಯಾಗಿದ್ದಾನೆ. (ಸುಳ್ಳು ಮತ್ತು ಮೋಹಕ ಮಾತುಗಳನ್ನಾಡಿ ಮರುಳುಗೊಳಿಸುವವನು). ಪೂರ್ವಿಕ ಪ್ರವಾದಿಗಳು ಕುರುಹು ಸಮೇತ ಕಳುಹಿಸಲ್ಪಟ್ಟ ಪ್ರಕಾರ ಇವನು ಸಹ ನಮಗಾಗಿ ಒಂದು ಕುರುಹನ್ನು ತರಲಿ" (21 : 4, 6). ಪವಿತ್ರ ಖುರ್‌ಆನಿನ ಕುರಿತು ಆ ವಿರೋಧಿಗಳು ಹೇಳಿದರು: "ನಾವು ಉದ್ದೇಶಿಸಿದ್ದರೆ ಇದೇರೀತಿ ನಾವು ಸಹ ಹೇಳುತ್ತಿದ್ದೆವು. ಇದು ಪೂರ್ವಿಕರ ಕಟ್ಟುಕತೆಗಳೇ ಆಗಿವೆ." (8 : 32). ಪೈಗಂಬರರ ಕುರಿತು ಅವರು ಹೇಳಿದರು: "ಅವನಿಗೆ ತನ್ನ ಪ್ರಭುವಿನಿಂದ ಒಂದು ಚಿಹ್ನೆ ಯಾಕೆ ಇಳಿಸಲ್ಪಡಲಿಲ್ಲ" (6 : 38). ನಂಬಬೇಕಾದರೆ, ಅವರು ಅಸಂಭವನೀಯ ಕೆಲವು ಉಪಾಧಿಗಳನ್ನು ಪೈಗಂಬರರ ಮುಂದಿಟ್ಟಿದ್ದರು. ಆ ಬಗ್ಗೆ ಖುರ್‌ಆನ್ ಹೇಳುತ್ತದೆ: "ನೀನು ನಮಗೆ ಭೂಮಿಯಿಂದ ಒಸರನ್ನು ಹರಿಸಿ ತೋರಿಸುವ ತನಕ ನಾವು ನಿಮ್ಮನ್ನು ನಂಬಲಾರೆವು; ಅಥವಾ ನಿನಗೆ ಖರ್ಜೂರ ಮತ್ತು ದ್ರಾಕ್ಷೆಯ ಒಂದು ತೋಟವಿದ್ದು, ಅದರ ಮಧ್ಯದಿಂದ ಹೊಳೆಯೊಂದು ಹರಿಯಬೇಕು; ಅಥವಾ ನೀನು ನುಡಿಯುತ್ತಿರುವಂತೆ ಆಕಾಶ ತುಂಡು ತುಂಡಾಗಿ ನಮ್ಮ ಮೇಲೆ ಬೀಳುವಂತೆ ಮಾಡು; ಅಥವಾ ಅಲ್ಲಾಹನನ್ನೂ ದೇವದೂತರನ್ನೂ ಮುಂದೆ ತಂದು ನಿಲ್ಲಿಸು; ಅಥವಾ ನಿನಗೆ ಸ್ವರ್ಣ ರಚಿತವಾದ ಒಂದು ಭವನ ಉಂಟಾಗಲಿ; ಅಥವಾ ನೀನು ಆಕಾಶರೋಹಣ ಮಾಡು; ನಾವು ಓದುವಂತಹ ಒಂದು ಗ್ರಂಥವನ್ನು ನೀನು (ಆಕಾಶದಿಂದ) ನಮಗಾಗಿ ಇಳಿಸಿ ಕೊಡದಿದ್ದರೆ ನಿನ್ನ ಆಕಾಶಾರೋಹಣವನ್ನು ನಾವು ನಂಬಲಾರೆವು." (17 : 91-94). ವಿರೋಧಿಗಳ ಅನ್ಯಾಯಕರವಾದ ಬೇಡಿಕೆಗಳಿಗೆ ಉತ್ತರ ಹೇಳಲು ಅಲ್ಲಾಹು ಪೈಗಂಬರರಿಗೆ ಆದೇಶಿಸಿದ್ದು ಹೀಗೆ: " ಹೇಳು: ನನ್ನ ಪ್ರಭು ಪವಿತ್ರನು; ನಾನಾದರೋ, ಸಂದೇಶಕವಾಹಕನಾದ ಒಬ್ಬ ಮನುಷ್ಯ ಮಾತ್ರ" (17 : 94). ಅಲ್ಲಾಹು ನುಡಿಯುತ್ತಾನೆ: "ಅವಿಶ್ವಾಸಿಗಳು ಹೇಳುತ್ತಾರೆ: ಇದು (ಖುರ್‌ಆನ್) ಅವನು (ಮುಹಮ್ಮದ್) ಕೃತ್ರಿಮವಾಗಿ ನಿರ್ಮಿಸಿದ ಕೃತಿಯಾಗಿದೆ; ಬೇರೆಯವರು ಈ ಕಾರ್ಯದಲ್ಲಿ ಅವನಿಗೆ ನೆರವಿತ್ತಿದ್ದಾರೆ..... ಇದು ಪೂರ್ವಿಕರ ಕಟ್ಟುಕತೆಗಳಾಗಿವೆ. ಅವನ್ನು ಅವನು ಬರೆಸಿದ್ದಾನೆ; ಹಾಗೆ ಪ್ರಭಾತದಲ್ಲೂ ಸಾಯಾಹ್ನದಲ್ಲೂ ಅದನ್ನು ಅವನಿಗೆ ಓದಿ ಹೇಳಲಾಗುತ್ತದೆ..... ಈ ಸಂದೇಶವಾಹಕನಿಗೆ ಏನಾಗಿದೆ! ಇವನು ತಿನ್ನುತ್ತಲೂ ಬೀದಿಗಳಲ್ಲಿ ವಿಹರಿಸುತ್ತಲೂ ಇದ್ದಾನಲ್ಲವೇ? ಇವನ ಜತೆಯಲ್ಲಿ ಮುನ್ನೆಚ್ಚರಿಕೆ ನೀಡಲಿಕ್ಕಾಗಿ ಒಬ್ಬ ದೇವದೂತನನ್ನು ಏಕೆ ಕಳುಹಿಸಲಿಲ್ಲ? ಅಥವಾ ಅವನಿಗೆ ನಿಧಿಯೇನಾದರೂ ಲಭಿಸಬೇಕಿತ್ತಲ್ಲವೇ? ಅಥವಾ ಅವನಿಗೆ ಒಂದು ತೋಟವಿದ್ದು ಅದರಿಂದ ಅವನು ತಿನ್ನಬೇಕಿತ್ತಲ್ಲವೇ? ಆ ಅಧರ್ಮಿಗಳು ಹೇಳಿದರು: (ಓ ಜನರೇ) ನೀವು ಮಾಟಮಾಡಲಾದ ಒಬ್ಬನನ್ನು ಹಿಂಬಾಲಿಸುತ್ತೀರಿ" (25 : 5-9). "ತಮಗೆ ಒಂದು ಕುರುಹಾದರೂ ಲಭಿಸಿದ ಪಕ್ಷದಲ್ಲಿ ಖಂಡಿತವಾಗಿಯೂ ತಾವು ಅದನ್ನು ನಂಬುವೆವೆಂದು ಅವರು ಅಲ್ಲಾಹನ ಹೆಸರಿನಲ್ಲಿ ದೃಢಸ್ವರದಲ್ಲಿ ಪ್ರಮಾಣ ಮಾಡಿದರು." (6 : 110). "ನಂತರ ಅವರು ಆತನಿಂದ (ಪೈಗಂಬರರಿಂದ) ಹಿಂತಿರುಗಿ (ಇವನು) ಕಲಿತವನಾದ ಒಬ್ಬ ಹುಚ್ಚ ಎಂದು ಹೇಳಿದರು"(44 : 15). ಮುಹಮ್ಮದ್ ಪೈಗಂಬರರು ಸುಳ್ಳುವಾದಿಯೆಂದು ಆ ಅವಿಶ್ವಾಸಿಗಳಿಗೆ ಪೂರ್ಣ ವಿಶ್ವಾಸವಿತ್ತೆಂದು ಖುರ್‌ಆನ್ ಮನದಟ್ಟು ಮಾಡಿಕೊಡುತ್ತದೆ. ಅಲ್ಲಾಹು ಹೇಳುತ್ತಾನೆ: "ಅವರು ಹೇಳಿದ್ದನ್ನು ಜ್ಞಾಪಿಸಿರಿ: ಅಲ್ಲಾಹನೇ, ಇದು (ಮುಹಮ್ಮದ್ ಪೈಗಂಬರರ ದೌತ್ಯ) ನಿನ್ನ ಕಡೆಯಿಂದಿರುವ ಸತ್ಯವೇ ಆಗಿದ್ದರೆ ನಮ್ಮ ಮೇಲೆ ಆಕಾಶದಿಂದ ಕಲ್ಲುಗಳ ವೃಷ್ಟಿಯುಂಟಾಗಲಿ, ಅಥವಾ ನಮಗೆ (ಬೇರೆ ವಿಧದ) ಯಾತನಾಮಯವಾದ ಶಿಕ್ಷೆ ಕೊಡು" (8 :33)

ಪವಿತ್ರ ಖುರ್‌ಆನ್ ಮತ್ತು ಪೈಗಂಬರರ ಉಪದೇಶಗಳು ಕಿವಿಕೊಟ್ಟು ಕೇಳಲಿಕ್ಕೂ ಅಂಗೀಕರಿಸಲಿಕ್ಕೂ ಅರ್ಹವಾದುದಲ್ಲವೆಂದು ಅವರು ಎಣಿಸಿದ್ದರು. ಖುರ್‌ಆನ್ ಹೇಳುತ್ತದೆ: "ಅವರಲ್ಲಿ ಬಹುಪಾಲು ಜನರು ಮುಖ ತಿರುಗಿಸಿದರು. ಅವರು ಕಿವಿಗೊಡುವುದಿಲ್ಲ. ಅವರು ಹೇಳಿದರು: ನೀನು ನಮ್ಮನ್ನು ಯಾವುದರ ಕಡೆಗೆ ಕರೆಯುತ್ತೀಯೋ, ಆ ವಿಷಯಕ್ಕೆ ಸಂಬಂಧಿಸಿ ನಮ್ಮ ಹೃದಯಗಳು ಆಚ್ಛಾದಿಸಲ್ಪಟ್ಟಿವೆ; ನಮ್ಮ ಕಿವಿಗಳಲ್ಲಿ ಕಿವುಡು ಇದೆ. ನಮಗೂ ನಿನಗೂ ಮಧ್ಯೆ ಒಂದು ತಡೆ ಇದೆ. ಒಟ್ಟಿನಲ್ಲಿ, ನೀನು ನಿನ್ನ ಕೆಲಸ ಮಾಡು. ನಾವು ನಮ್ಮ ಕೆಲಸ ಮಾಡುತ್ತೇವೆ" (41: 5,6).ಮಾತ್ರವಲ್ಲ, ಆ ವಿರೋಧಿಗಳು ಪರಸ್ಪರ ಹೀಗೆ ಉಪದೇಶಿಸಿದರು: "ನೀವು ಖುರ್‌ಆನನ್ನು ಕೇಳಬೇಡಿರಿ; (ಅದು ಓದಲ್ಪಡುವಾಗ) ನೀವು ಗದ್ದಲ ಮಾಡಿರಿ" (41 : 27). ಪೈಗಂಬರರು ಉಪದೇಶಿಸಿ ಮುಗಿಸಿದಾಗ ಶತ್ರುಗಳು ತಮ್ಮ ಪೈಕಿಯ ತಿಳುವಳಿಕೆ ಇರುವವರೊಡನೆ ವ್ಯಂಗ್ಯ ಸ್ವರದಲ್ಲಿ ಹೀಗೆ ಪ್ರಶ್ನಿಸುತ್ತಿದ್ದರು: "ಅವನು (ಮುಹಮ್ಮದ್) ತುಸು ಮೊದಲು ಹೇಳಿದ್ದು ಏನಾಗಿತ್ತು?" (47 : 17).

ಇಷ್ಟು ಮಾತ್ರವಲ್ಲ, ಆ ಶತ್ರುಗಳು ಪೈಗಂಬರರನ್ನು ಉಪದ್ರವಿಸಲಿಕ್ಕೆ ಅನೇಕ ಉಪಾಯಗಳನ್ನು ಪ್ರಯೋಗಿಸಿದ್ದರು. ಖುರ್‌ಆನ್ ಹೀಗೆ ಹೇಳುತ್ತದೆ: "ಅವಿಶ್ವಾಸಿಗಳು ನಿನ್ನನ್ನು ಬಂಧಿಸಲಿಕ್ಕೂ ವಧಿಸಲಿಕ್ಕೂ ಹೊರ ಅಟ್ಟಲಿಕ್ಕೂ ಗೂಢಾಲೋಚನೆ ಮಾಡಿದುದರ ಕುರಿತು ಜ್ಞಾಪಿಸು" (8 : 31).

ಹೀಗೆ ಅವಿಶ್ವಾಸಿಗಳು ಪೈಗಂಬರರನ್ನೂ ಪೈಗಂಬರರ ದೌತ್ಯವನ್ನೂ ಹಲವು ವಿಧದಲ್ಲಿ ಆಕ್ಷೇಪಿಸುತ್ತಲೂ ಅಪಹಾಸ್ಯ ಮಾಡುತ್ತಲೂ ಇದ್ದರಲ್ಲದೆ ಆ ದಿವ್ಯಾತ್ಮರನ್ನೂ ಅನುಚರರನ್ನೂ ನಾನಾ ವಿಧವಾಗಿ ಉಪದ್ರವಿಸುತ್ತಿದ್ದರು.

ವಿರೋಧಿಗಳ ಆಕ್ಷೇಪಗಳಿಗೆ ಪವಿತ್ರ ಖುರ್‌ಆನಿನ ಅನೇಕ ಕಡೆಗಳಲ್ಲಿ ವಿವಿಧ ರೀತಿಯ ಉತ್ತರ ಕೊಡಲಾಗಿದೆ. ಅಲ್ಲಾಹು ಹೇಳುತ್ತಾನೆ: "ನಿನಗಿಂತ ಮೊದಲಿನ ಸಂದೇಶವಾಹಕರ ಕುರಿತು ಹೇಳಲಾದ ಆಕ್ಷೇಪಗಳ ಹೊರತು

ಬೇರೇನೂ ನಿನ್ನ ಸಂಬಂಧಿಸಿ ಹೇಳಲಾಗಿಲ್ಲ"(41 : 44). "ಇವರಿಗೆ ಮುಂಚಿನ ಜನರ ಬಳಿಗೆ, ಐಂದ್ರಜಾಲಿಕನೆಂದೂ ಹುಚ್ಚನೆಂದೂ ಅವರು ಆಕ್ಷೇಪಿಸದೆ ಒಬ್ಬ ಪ್ರವಾದಿಯೂ ಬಂದಿರಲಿಲ್ಲ. ಅವರು ಹೀಗೆ (ಎಲ್ಲಾ ಪ್ರವಾದಿಗಳನ್ನು ಸಹ ಆಕ್ಷೇಪಿಸಬೇಕೆಂದು) ತಲತಲಾಂತರವಾಗಿ ಉಪದೇಶಿಸಿರುವರೇ? ಯಥಾರ್ಥದಲ್ಲಿ ಇವರು ಅತಿರೇಕವಾಗಿ ವರ್ತಿಸುವ ಜನರಾಗಿದ್ದಾರೆ"(51 : 53, 54). "ಅವರು ಆಕ್ಷೇಪಿಸಿ ಹೇಳುವುದು ನಿನಗೆ ದುಃಖವನ್ನುಂಟುಮಾಡುತ್ತದೆಂದು ನಮಗೆ ಗೊತ್ತು. ಆದರೆ ಅವರು ತಿರಸ್ಕರಿಸುವುದು ನಿನ್ನನ್ನಲ್ಲ. ಬದಲಾಗಿ, ಈ ದುಷ್ಕರ್ಮಿಗಳು ಅಲ್ಲಾಹನ ವಚನಗಳನ್ನು ನಿರಾಕರಿಸುತ್ತಾರೆ. ನಿಜವಾಗಿಯೂ ನಿನಗೆ ಮುಂಚೆ ಸಹ ಪ್ರವಾದಿಗಳನ್ನು ಸುಳ್ಳುವಾದಿಗಳೆಂದು ವಿಧಿಸಲಾಗಿತ್ತು. ಆದರೆ ಅವರು ಮಿಥ್ಯಾವಾದಿಗಳೆಂದು ಧಿಕ್ಕರಿಸಲ್ಪಟ್ಟು ಹಿಂಸಿಸಲ್ಪಟ್ಟಿದ್ದರೂ ಸಹ ಅವರು ಅವನ್ನೆಲ್ಲಾ ಸಹಿಸಿದ್ದರು; ಕೊನೆಗೆ ನಮ್ಮ ಸಹಾಯ ಅವರಿಗೆ ಒದಗಿತು. ಅಲ್ಲಾಹನ ವಚನಗಳನ್ನು ಬದಲಾಯಿಸುವವನು ಯಾರೂ ಇಲ್ಲ. ದಿಟವಾಗಿಯೂ ಆ ಪ್ರವಾದಿಗಳ ವೃತ್ತಾಂತ ನಿನಗೂ ತಲಪಿರುತ್ತದೆ."(6 : 35, 35). "ಇದೇ ಪ್ರಕಾರ ಎಲ್ಲಾ ಪ್ರವಾದಿಗಳಿಗೂ 'ಇನ್ಸ್' ಮತ್ತು 'ಜಿನ್ನ್' ಗಳಿಗೆ ಸೇರಿದ ಸೈತಾನರನ್ನು (ದುಷ್ಟರನ್ನು) ನಾವು ಶತ್ರುಗಳನ್ನಾಗಿ ಮಾಡಿದ್ದೇವೆ. (ಜನರನ್ನು) ವಂಚಿಸಲಿಕ್ಕಾಗಿ ಅವರು ಪರಸ್ಪರ ಮೋಹಕ ಮಾತುಗಳನ್ನಾಡುತ್ತಾರೆ. ನಿನ್ನ ಪ್ರಭು ಉದ್ದೇಶಿಸಿದ್ದರೆ ಅವರು ಹಾಗೆ ಮಾಡುತ್ತಿರಲಿಲ್ಲ. ಆದ್ದರಿಂದ ಅವರನ್ನೂ ಅವರ ಮಿಥ್ಯಾರೋಪಗಳನ್ನೂ ನೀನು ಅಲಕ್ಷ್ಯ ಮಾಡಿಬಿಡು"(6 : 113). "ಇವರು ನಿನ್ನನ್ನು ಸುಳ್ಳುವಾದಿಯೆಂದು ತಳ್ಳಿ ಬಿಟ್ಟರೆ (ಆಬಗ್ಗೆ ಆಶ್ಚರ್ಯಪಡಬೇಕಾಗಿಲ್ಲ, ಏಕೆಂದರೆ) ಇವರಿಗಿಂತ ಮೊದಲು ನೂಹರ ಜನಾಂಗವೂ, ಆದ್, ಸಮೂದ್ ಜನಾಂಗಗಳೂ ಇಬ್ರಾಹೀಮ್ ಮತ್ತು ಲೂತ್ ಅವರ ಜನಾಂಗಗಳೂ ಮದ್‌ಯನದವರೂ (ತಮ್ಮ ಪ್ರವಾದಿಗಳನ್ನು) ಮಿಥ್ಯವಾದಿಗಳೆಂದು ತೆಗಳಿದ್ದರು. ಮೂಸಾರನ್ನು ಸಹ ಸುಳ್ಳುವಾದಿಯೆಂದು ಆಪಾದಿಸಲಾಗಿತ್ತು. ಆ ಅವಿಶ್ವಾಸಿಗಳಿಗೆ ನಾನು ಕಾಲಾವಧಿ ನೀಡಿದೆನು; ನಂತರ ಅವರನ್ನು ನಾನು ಶಿಕ್ಷೆಗೆ ಗುರಿಪಡಿಸಿದೆನು"(22 : 43-45). ಇನ್ನೂ ಅಲ್ಲಾಹು ಹೇಳುತ್ತಾನೆ: "ಇವರಿಗಿಂತ ಮುಂಚೆ ನೂಹರ ಜನರು (ಅವರನ್ನು) ಸುಳ್ಳುವಾದಿಯೆಂದು ಆರೋಪಿಸಿದರು; ಅವರ ನಂತರದ ಜನಾಂಗಗಳೂ (ತಮ್ಮ ಪ್ರವಾದಿಗಳನ್ನು ಧಿಕ್ಕರಿಸಿದರು). ಪ್ರತಿಯೊಂದು ಜನಾಂಗವೂ ತಮ್ಮ ಪ್ರವಾದಿಯನ್ನು ಸೆರೆಹಿಡಿಯಲು ಪ್ರಯತ್ನಿಸುತ್ತಲೂ ಸತ್ಯವನ್ನು ಖಂಡಿಸಲಿಕ್ಕಾಗಿ ಕುತರ್ಕ ಮಾಡುತ್ತಲೂ ಇದ್ದರು. ಆ ಬಳಿಕ ನಾನು ಅವರನ್ನು ಶಿಕ್ಷಿಸಿದೆನು. ನನ್ನ ಆ ಪ್ರತಿಕ್ರಿಯೆ ಯಾವ ರೀತಿಯದ್ದಾಗಿತ್ತು?"(40 : 6). "ಮನುಷ್ಯರ ನಿರ್ಭಾಗ್ಯ! ಅವರಿಂದ ಅಪಹಾಸ್ಯಕ್ಕೆ ತುತ್ತಾಗದೆ ಯಾವ ಪ್ರವಾದಿಯೂ ಅವರ ಬಳಿಗೆ ಬರುವುದಿಲ್ಲ"(36 : 31). "ಇದೇ ಪ್ರಕಾರವೇ ನಿನಗಿಂತ ಮುಂಚೆ ಯಾವ ರಾಜ್ಯದಲ್ಲೂ ಯಾವ ಪ್ರವಾದಿಯನ್ನೂ ನಾವು ಕಳುಹಿಸಲಿಲ್ಲ - ಅಲ್ಲಿನ ಮುಖಂಡರು ಹೀಗೆ ಹೇಳಿದ ಹೊರತು: 'ನಾವು ನಮ್ಮ ಪೂರ್ವಿಕರನ್ನು ಒಂದು ಮಾರ್ಗದಲ್ಲಿ ಕಂಡಿದ್ದೇವೆ; ನಾವು ಅವರ ಹೆಜ್ಜೆಗಳನ್ನು ಹಿಂಬಾಲಿಸಿ ನಡೆಯುವೆವು'" (43: 24).

ಅವಿಶ್ವಾಸಿಗಳ ಸ್ಥಿತಿಯ ಬಗ್ಗೆ ಅಲ್ಲಾಹು ಹೇಳುತ್ತಾನೆ: "ನಮ್ಮ ವಚನಗಳನ್ನು ಅವನಿಗೆ ಓದಿ ಹೇಳುವಾಗ ಅದು ಕೇಳಿಸಿಲ್ಲವೆಂಬಂತೆ ಅಹಂಭಾವದಿಂದ ಅವನು ಮುಖ ತಿರುಗಿಸುತ್ತಾನೆ. ಅವನ ಎರಡು ಕಿವಿಗಳಲ್ಲೂ ತಡೆಯಿರುವಂತೆ ಭಾಸವಾಗುತ್ತದೆ" (31 : 8).

ಪ್ರವಾದಿಗಳನ್ನು ತಿರಸ್ಕರಿಸುವ ವಿಷಯದಲ್ಲಿ ಸದಾ ಮುಂಚೂಣಿಯಲ್ಲಿ ನಿಂತವರು ಪಂಡಿತರೂ ಮೌಲಾನಗಳೂ ಆಗಿದ್ದರೆಂಬ ವಿಚಾರವನ್ನು ಸಹ ಪವಿತ್ರ ಖುರ್‌ಆನ್ ತಿಳಿಸಿಕೊಡುತ್ತದೆ. ಆ ಪವಿತ್ರ ಗ್ರಂಥ ಹೀಗೆ ಹೇಳುತ್ತದೆ: "ಅವರ ಬಳಿಗೆ ಪ್ರವಾದಿಗಳು ಸ್ಪಷ್ಟವಾದ ಪುರಾವೆಗಳ ಸಹಿತ ಆಗಮಿಸಿದಾಗ ಅವರು ತಮಗಿದ್ದ ತಿಳುವಳಿಕೆಯ ಬಗ್ಗೆ ಅಹಂಭಾವ ತೋರಿಸಿದರು" (40 : 84). "ನಾವು ಅವರಿಗೆ ಈ ವಿಷಯಕ್ಕೆ ಸಂಬಂಧಪಟ್ಟ ಸ್ಪಷ್ಟ ನಿರ್ದೇಶನಗಳನ್ನು ನೀಡಿದ್ದೆವು. ಅವರಿಗೆ ತಿಳುವಳಿಕೆಯುಂಟಾದ ನಂತರ ಮಾತ್ರವೇ ಅವರು ಪರಸ್ಪರ ಪೈಪೋಟಿ ನಿಮಿತ್ತ ಭಿನ್ನಮತ ಹೊಂದಿದರು." (45 : 18).

ಜನರು ಪ್ರವಾದಿಗಳನ್ನು ನಂಬದಿರಲಿಕ್ಕೆ ಒಂದು ಕಾರಣ, ಮೊದಲೇ ಅವರು ಸುಳ್ಳುವಾದಿಯೆಂದು ತೀರ್ಮಾನಿಸಿರುವುದೆಂಬ ವಸ್ತುಸ್ಥಿತಿಯನ್ನು ಸಹ ಖುರ್‌ಆನ್ ಮನದಟ್ಟು ಮಾಡಿಕೊಡುತ್ತದೆ. "ದಿಟವಾಗಿಯೂ, ಅವರ ಪ್ರವಾದಿಗಳು ಸ್ಪಷ್ಟ ಪುರಾವೆಗಳ ಸಹಿತ ಅವರ ಬಳಿಗೆ ಬಂದರು. ಆದರೆ ಮೊದಲೇ (ಪ್ರವಾದಿಗಳನ್ನು) ಅವರು ನಿರಾಕರಿಸಿದ ಕಾರಣದಿಂದ ಅವರಿಗೆ ನಂಬಲಿಕ್ಕಾಗಲಿಲ್ಲ. ಹೀಗೆ ಅಲ್ಲಾಹು ತಿರಸ್ಕರಿಸುವವರ ಹೃದಯಗಳಿಗೆ ಮುದ್ರೆಹಾಕುತ್ತಾನೆ" (7 : 102). ಅಂದರೆ, ಸತ್ಯ ಪ್ರವಾದಿಗಳ ಸಂಬಂಧಿಸಿ, ಅವರು ಸುಳ್ಳುವಾದಿಗಳೆಂದು ಜನರಿಂದ ತಪ್ಪಾದ ವಿಧಿಯುಂಟಾದರೆ, ನಂತರ ಆ ಪ್ರವಾದಿಗಳ ಸತ್ಯತೆಯ ಕುರಿತು ಚಿಂತನ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ.

ಪವಿತ್ರ ಖುರ್‌ಆನಿನಲ್ಲಿ ಹೆಸರಿಸಲಾದ ಪ್ರವಾದಿಗಳಲ್ಲಿ ಹಲವರ ಶತ್ರುಗಳು ಆ ಪ್ರವಾದಿಗಳ ವಿರುದ್ಧವಾಗಿ ತೋರಿಸಿದ ದುರ್ನೀತಿಯ ಕುರಿತೂ ಹಾಗೆಯೇ ಮುಹಮ್ಮದ್ ಪೈಗಂಬರರ ವೈರಿಗಳು ಆ ದಿವ್ಯಾತ್ಮರ ವಿರುದ್ಧವಾಗಿ ತೋರಿಸಿದ ದುರ್ವರ್ತನೆ ಯಾವ ರೀತಿಯದ್ದಾಗಿತ್ತೆಂಬುದರ ಕುರಿತೂ ಮೇಲೆ ವಿವರಿಸಲಾಯಿತಷ್ಟೇ. ಈ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಇನ್ನೂ ಸಹ ಧಾರಾಳ ಪ್ರಸ್ತಾಪನೆಗಳಿವೆ. ಅವನ್ನೆಲ್ಲಾ ವಿವರಿಸಲಿಕ್ಕೆ ಸಾಧ್ಯವಿಲ್ಲವಷ್ಟೇ. ಆದರೆ ಮೇಲಿನ ವಿವರಣೆಗಳನ್ನು ಸತ್ಯ ಮತ್ತು ನಿಷ್ಠೆಯಿಂದ ಓದುವ ಯಾರಿಗೂ ಸತ್ಯಪ್ರವಾದಿಗಳಿಗೆ ಜನರಿಂದ ಅನುಭವಿಸಬೇಕಾಗಿ ಬಂದ ಕಷ್ಟ ಏನೆಲ್ಲಾ ಆಗಿತ್ತೆಂದು ಧಾರಾಳವಾಗಿ ಮನದಟ್ಟು ಮಾಡಿಕೊಳ್ಳಬಹುದು. ಅಲ್ಪಸಂಖ್ಯಾತ ಜನರು ಮಾತ್ರ ಆ ಪ್ರವಾದಿಗಳನ್ನು ನಂಬಿದ್ದರು; ಬಹು ಸಂಖ್ಯಾತ ಜನರು ಅವರನ್ನು ನಿರಾಕರಿಸಿ ಸುಳ್ಳುವಾದಿಗಳೆಂದು ಜರೆದು ತಳ್ಳಿಬಿಟ್ಟಿದ್ದರು. ಮಾತ್ರವಲ್ಲ, ನಿರಾಕರಿಸಿದ ಆ ಬಹುಸಂಖ್ಯೆಯ ಜನರು ಪ್ರವಾದಿಗಳನ್ನೂ ಅವರ ಅನುಚರರನ್ನೂ ಅತ್ಯಂತ ಹೀನಾಯವಾಗಿ ಎದುರಿಸುತ್ತಲೂ ಅವಹೇಳನ ಮಾಡುತ್ತಲೂ ಆಕ್ಷೇಪಿಸುತ್ತಲೂ ಹಲವಿಧ ಕಷ್ಟಗಳಿಗೆ ಅವರನ್ನು ತುತ್ತುಮಾಡಿ ಅವರ ಸಂಘಟನೆಗಳನ್ನು ನಿರ್ಮೂಲ ಮಾಡಲು ತೀವ್ರಯತ್ನ ಮಾಡುತ್ತಲೂ ಇದ್ದರು. ಮುಹಮ್ಮದ್ ಪೈಗಂಬರರ[ಸ] ವಿರುದ್ಧವಾಗಿ ಅವರ ಶತ್ರುಗಳು ಇದೇ

ರೀತಿ ವರ್ತಿಸಿದಾಗ ಅಲ್ಲಾಹು ಅವರಿಗೆ ಆಶ್ವಾಸನೆಯಿತ್ತನು. ಎಲ್ಲಾ ಪ್ರವಾದಿಗಳೊಡನೆ ಸಹ ಅವರ ಶತ್ರುಗಳು ಈ ರೀತಿಯಲ್ಲಿ ವರ್ತಿಸಿದ್ದರು; ಆದರೆ ಕೊನೆಗೆ ಆ ಪ್ರವಾದಿಗಳೇ ವಿಜಯಿಗಳಾದರು. ಇದು ಅಲ್ಲಾಹನ ಅನುಲ್ಲಂಘನೀಯ ನಿಯಮವಾಗಿದೆ. ಮೇಲೆ ಉದ್ಧರಿಸಲಾದ ಖುರ್‌ಆನ್ ವಾಕ್ಯಗಳಿಂದ ಈ ವಸ್ತುಸ್ಥಿತಿ ಸೂರ್ಯಪ್ರಕಾಶದಂತೆ ವ್ಯಕ್ತವಾಗುತ್ತದೆ.

ಮುಹಮ್ಮದ್ ಪೈಗಂಬರರನ್ನು[ಸ] ನಿರಾಕರಿಸಿ ವಿರೋಧಿಸಿದವರು ಪರಾಜಿತರಾಗುವರೆಂದು ಪ್ರಸ್ತಾಪಿಸುತ್ತಾ ಅಲ್ಲಾಹು ಹೇಳುತ್ತಾನೆ: "ಅವರು ಅಲ್ಲಾಹನ ಹೆಸರಿನಲ್ಲಿ ದೃಢವಾಗಿ ಪ್ರಮಾಣ ಮಾಡಿ ಹೇಳಿದರು - ತಮ್ಮ ಬಳಿಗೆ ಒಬ್ಬ ಪ್ರವಾದಿ ಆಗಮಿಸಿದರೆ ಬೇರೆ ಯಾವುದೇ ಸಮುದಾಯಕ್ಕಿಂತ ಅಧಿಕವಾಗಿ ಸನ್ಮಾರ್ಗ ಹೊಂದಿದವರಾಗಬಹುದು ತಾವೆಂದು. ಆದರೆ ಅವರ ಬಳಿಗೆ ಪ್ರವಾದಿ ಬಂದಾಗ ಅಹಂಭಾವ ತೋರಿಸಿ ಕುತಂತ್ರ ಮಾಡಿ ಅವರು ತೀವ್ರ ವಿರಕ್ತಿ ಪ್ರಕಟಿಸಿ ಅಗಲಿ ಹೋದರು. ಕುತಂತ್ರ ಪ್ರಯೋಗದ ವಿಪತ್ತು ಪ್ರಯೋಗಿಸಿದವರನ್ನೇ ಬಾಧಿಸುವುದು ಹೊರತು ಬೇರೆ ಯಾರನ್ನೂ ಅಲ್ಲ. ಅಲ್ಲಾಹನ ನಿಯಮದಲ್ಲಿ ಯಾವ ಬದಲಾವಣೆಯಾಗಲಿ ವ್ಯತ್ಯಾಸವಾಗಲಿ ನೀನು ಕಾಣಲಾರೆ" (35 : 43, 44). ಹಲವು ಪ್ರವಾದಿಗಳ ವೃತ್ತಾಂತಗಳನ್ನು ವಿವರಿಸುತ್ತಾ, ಅವರನ್ನು ಆಕ್ಷೇಪಿಸುತ್ತಲೂ ಉಪದ್ರವಿಸುತ್ತಲೂ ಅವರು ಪೂರ್ವ ಧರ್ಮಕ್ಕೆ ಮರಳಿ ಬಾರದಿದ್ದ ಪಕ್ಷದಲ್ಲಿ ಅವರನ್ನು ಸ್ವದೇಶದಿಂದ ಹೊರ ಅಟ್ಟಲಾಗುವುದೆಂದು ಬೆದರಿಕೆ ಹಾಕುತ್ತಲೂ ಇದ್ದ ಶತ್ರುಗಳ ಕುರಿತು ಅಲ್ಲಾಹು ಆ ಪ್ರವಾದಿಗಳೊಡನೆ ಹೀಗೆ ಹೇಳಿದುದಾಗಿ ಖುರ್‌ಆನ್ ಪ್ರಸ್ತಾಪಿಸುತ್ತದೆ: "ಖಂಡಿತವಾಗಿಯೂ ನಾವು ದುಷ್ಕರ್ಮಿಗಳನ್ನು ನಾಶಮಾಡಿಯೇ ಬಿಡುವೆವು." (14 :14).

ಪವಿತ್ರ ಖುರ್‌ಆನಿನ, ಮೇಲಿನ ಪ್ರಸ್ತಾಪನೆಗಳ ಬೆಳಕಿನಲ್ಲಿ ಹಝ್ರತ್ ಅಹ್ಮದ್‌ರವರ ಸತ್ಯತೆ ಸಾಬೀತಾಗುತ್ತದೆ. ಮೊದಲು ಆಗಮಿಸಿದ್ದ ಸತ್ಯ ಪ್ರವಾದಿಗಳ ವಿರುದ್ಧವಾಗಿ ಅವರ ಶತ್ರುಗಳು ಯಾವ ರೀತಿ ವರ್ತಿಸಿದ್ದರೋ ಅದೇ ರೀತಿಯಲ್ಲೇ ಇವರ ವೈರಿಗಳು ಸಹ ವರ್ತಿಸಿದರು. ಆ ಪ್ರವಾದಿಗಳನ್ನು ಸುಳ್ಳುವಾದಿಗಳೆಂದು ಸಾಧಿಸಲಿಕ್ಕೂ ಅವರ ಸಂಘಟನೆಗಳನ್ನು ನಿರ್ಮೂಲನ ಮಾಡಲಿಕ್ಕೂ ಆ ಶತ್ರುಗಳು ಏನೆಲ್ಲಾ ಉಪಾಯಗಳನ್ನು ಹೂಡಿದ್ದರೋ ಅವನ್ನೆಲ್ಲಾ ಇವರ ವಿರೋಧಿಗಳು ಸಹ ಪ್ರಯೋಗಿಸಿದರು. ಈಗಲೂ ಪ್ರಯೋಗಿಸುತ್ತಿದ್ದಾರೆ.

ಆ ಪ್ರವಾದಿಗಳ ಶತ್ರುಗಳಾದ ಧರ್ಮಪಂಡಿತರು ಅವರ ಕುರಿತು ಏನೆಲ್ಲಾ ಆರೋಪಿಸಿದರೋ ಅದೇ ಪ್ರಕಾರ ಈ ಕಾಲದ ಧರ್ಮಪಂಡಿತರು ಸಹ ಹಝ್ರತ್ ಅಹ್ಮದ್‌ರವರ[ಅ] ಬಗ್ಗೆ ಆಪಾದಿಸಿದರು. ಆದರೆ ಒಂದು ವ್ಯತ್ಯಾಸ ಮಾತ್ರ ಕಾಣಲಿಕ್ಕೆ ಸಾಧ್ಯವಿದೆ. ಈ ಮಹಾಪುರುಷನ ಕುರಿತು ಈ ಕಾಲದಲ್ಲಿ ಧರ್ಮಪಂಡಿತರು ಎಷ್ಟರ ಮಟ್ಟಿಗೆ ಮಿಥ್ಯಾರೋಪ ಹೊರಿಸಿದರೋ, ಯಾವ ರೀತಿಯ ಅವಾಚ್ಯ ನುಡಿಗಳನ್ನು ಆಡಿದರೋ, ಅಷ್ಟು ಕಟುವಾಗಿ ಪೂರ್ವ ಪ್ರವಾದಿಗಳ ಶತ್ರುಗಳು ಮಾಡಿದುದಾಗಿ ಸಾಬೀತಾಗುವುದಿಲ್ಲ. ಒಟ್ಟಿನಲ್ಲಿ, ಅಹ್ಮದಿಯಾ ವಿರುದ್ಧ ಮುಲ್ಲಾಗಳ ಚಟುವಟಿಕೆಗಳನ್ನೂ ಆ ಸತ್ಯವಾದಿಯನ್ನು ಮಿಥ್ಯವಾದಿಯೆಂದು ಸಾಧಿಸಲಿಕ್ಕೆ ಮಾಡುವ ಪರಿಶ್ರಮಗಳನ್ನೂ ಪವಿತ್ರ ಖುರ್‌ಆನಿನ, ಮೇಲಿನ ಉಲ್ಲೇಖಗಳ ಬೆಳಕಿನಲ್ಲಿ ನೋಡುವುದಾದರೆ ಹಝ್ರತ್ ಅಹ್ಮದ್‌ರವರನ್ನು[ಅ] ಒಬ್ಬ ಸತ್ಯವಾದಿಯೆಂದು ಸಮ್ಮತಿಸದೆ ನಿರ್ವಾಹವಿಲ್ಲ.

ಸತ್ಯ ಪ್ರವಾದಿಗಳನ್ನು ಅವರ ಬಹುಸಂಖ್ಯಾತ ಶತ್ರುಗಳು ತೀವ್ರವಾಗಿ ವಿರೋಧಿಸುತ್ತಲೂ ಉಪದ್ರವಿಸುತ್ತಲೂ ಅವರನ್ನು ಸುಳ್ಳುವಾದಿಗಳೆಂದು ಸಾಧಿಸಲಿಕ್ಕಾಗಿ ಅತ್ಯಂತ ಶ್ರಮವಹಿಸಿದ್ದರೆಂದು ಖುರ್‌ಆನ್ ಹೇಳುತ್ತದೆ. ಸತ್ಯವಾದಿಯನ್ನು ವೈರಿಗಳು ಕಟುವಾಗಿ ವಿರೋಧಿಸುತ್ತಲೂ ಅವರನ್ನು ನಾಮಾವಶೇಷ ಮಾಡಲಿಕ್ಕೆ ಯತ್ನಿಸುತ್ತಲೂ ಇದ್ದಂತೆ ಒಬ್ಬ ಸುಳ್ಳುವಾದಿಯ ವಿರುದ್ಧವಾಗಿ ಮಾಡಿಲ್ಲವೆಂಬುದು ಪರಮ ಸತ್ಯ. ಯಾವ ಸುಳ್ಳುವಾದಿಗಳನ್ನಾದರೂ ಜನರು ವಿರೋಧಿಸಿದ್ದರೆ, ಅವರು ವಿಪ್ಲವವನ್ನುಂಟುಮಾಡಿದ, ಅಕ್ರಮವಾಗಿ ವರ್ತಿಸಿದ, ಸರಕಾರವನ್ನು ಬುಡಮೇಲುಮಾಡಲು ಯತ್ನಿಸಿದ ಕಾರಣದಿಂದ ಮಾತ್ರವೆಂದು ಕಾಣಬಹುದು. ಸತ್ಯವಾದಿ ಜಯಗಳಿಸುವುದು ಆತನ ಸತ್ಯತೆಗೆ ಪುರಾವೆಯೆಂದು ಪವಿತ್ರ ಖುರ್‌ಆನ್ ಪದೇ ಪದೇ ಹೇಳಿದೆ. ಭೌತಿಕವಾಗಿ ಯಾವ ಶಕ್ತಿ ಸಾಮರ್ಥ್ಯವೂ ಇಲ್ಲದ ಅವರನ್ನು ಶತ್ರುಗಳು ಒಗ್ಗಟ್ಟಾಗಿ ವಿರೋಧಿಸಿದರೂ ಅವರನ್ನು ನಾಶಪಡಿಸುವುದು ಹೋಗಲಿ, ಪರಾಜಿತಗೊಳಿಸಲಿಕ್ಕಾಗಲಿ ಅಸಾಧ್ಯವಾಗುವುದೇ ಅಲ್ಲಾಹನ ವಿಶೇಷ ಸಹಾಯ ಅವರ ಜೊತೆ ಇದೆಯೆಂಬುದಕ್ಕೆ ರುಜುವಾತು. ಆದರೆ ಸುಳ್ಳುವಾದಿಯನ್ನು ಲೋಕ ವಿರೋಧಿಸಿದುದಾಗಿ ಖುರ್‌ಆನ್ ಹೇಳುವುದಿಲ್ಲ. ಹಾಗೆ ವಿರೋಧಿಸುವ ಅಗತ್ಯವೂ ಇಲ್ಲ. ಏಕೆಂದರೆ, ಅಲ್ಲಾಹನ ಭಯಂಕರ ಶಿಕ್ಷಾ ನಿಯಮ ಅವರನ್ನು ನಾಮಾವಶೇಷ ಮಾಡಿಬಿಡುವುದು. ಆದ್ದರಿಂದಲೇ ಮಿಥ್ಯವಾದಿಗಳ ಕುರಿತಾಗಲೀ ಅವರ ಅನುಯಾಯಿಗಳ ಕುರಿತಾಗಲೀ ಖುರ್‌ಆನಿನಲ್ಲಿ ಏನೂ ಪ್ರಸ್ತಾಪಿಸಲಾಗಿಲ್ಲ. ಸಂಕ್ಷಿಪ್ತವಾಗಿ, ಸತ್ಯ ಪ್ರವಾದಿಗಳ ಕುರಿತುಳ್ಳ ಪವಿತ್ರ ಖುರ್‌ಆನಿನ ಪ್ರಸ್ತಾಪನೆಗಳು ಹಝ್ರತ್ ಅಹ್ಮದ್ (ಅಲೈಹಿಸ್ಸಲಾಂ) ದೇವನಿಯುಕ್ತರಾದ ಸತ್ಯವಾದಿಯೆಂದು ಸ್ಪಷ್ಟಪಡಿಸುತ್ತವೆ. ಹಾಗಿರುವಾಗ ಧರ್ಮಪಂಡಿತರೂ ಅವರ ಪಂಗಡಗಳೂ ಆ ಮಹಾತ್ಮರನ್ನು ಮಿಥ್ಯವಾದಿಯೆಂದು ಸಾಧಿಸಲಿಕ್ಕಾಗಿ ಪ್ರಯತ್ನಿಸಲೇ ಬೇಕಾಗಿದೆ. ಅವರ ಪರಿಶ್ರಮ ಎಷ್ಟು ತೀವ್ರವಾಗುವುದೋ ಅಷ್ಟೇ ಹೆಚ್ಚು ಆ ಮಹಾತ್ಮರ ಸತ್ಯತೆ ಸಾಬೀತಾಗುತ್ತದೆ. ಪವಿತ್ರ ಖುರ್‌ಆನಿನ ಅಧ್ಯಾಪನೆಗಳ ಕುರಿತು ಚಿಂತಿಸುವವರಿಗೆ ಇದು ಸುಲಭಗ್ರಾಹ್ಯವಾದೊಂದು ಸಂಗತಿಯಾಗಿದೆ.

# ಯೇಸು ಭಾರತದಲ್ಲಿ ಜೀವಿಸಿದ್ದರೋ?

## ಜರ್ಮನಿಯ ಒಬ್ಬ ಕ್ರೈಸ್ತ ಧಾರ್ಮಿಕ ವಿದ್ವಾಂಸರ ಅಭಿಮತ

★ ಇಖ್ಬಾಲ್ ಮಲ್ಹೋತ್ರ

ಯೇಸು ತಮ್ಮ 12ನೇ ವಯಸ್ಸಿನಿಂದ 30ನೇ ವಯಸ್ಸಿನ ತನಕದ 18 ವರ್ಷಗಳನ್ನು ಎಲ್ಲಿ ಜೀವಿಸಿದರೆಂಬುದರ ಕುರಿತು ಬೈಬಲಿನ ಹೊಸ ಒಡಂಬಡಿಕೆ ಸಂಪೂರ್ಣವಾಗಿ ಮೌನವಾಗಿದೆ. ಯೇಸು ಶಿಲುಬೆಯಲ್ಲಿ ಮೃತರಾದರೋ ಅಥವಾ ಅವರು ಶಿಲುಬೆಯಲ್ಲಿ ಮೃತಪಡದೆ ರಕ್ಷಿಸಲ್ಪಟ್ಟು ಜೆರುಸಲೇಮ್‌ನಿಂದ ತನ್ನ ಸ್ನೇಹಿತರ ಸಹಾಯದಿಂದ ತಪ್ಪಿಸಿಕೊಂಡು ಹೋಗಿ ಕೊನೆಗೆ ಒಬ್ಬ ಸಂಚಾರಿ ಉಪದೇಶಕನಾಗಿ ಭಾರತದಲ್ಲಿ ವಾಸಿಸಲು ಪ್ರಾರಂಭಿಸಿದರೋ ಎಂಬುದರ ಕುರಿತು ಸಹ ಒಂದು ಪ್ರಶ್ನಾರ್ಥಕ ಚಿಹ್ನೆ ಇದೆ.

ಚರಿತ್ರೆ ಮತ್ತು ಬೈಬಲಿನ ಸುವಾರ್ತೆಗಳು ಯೇಸು ತನ್ನ 30ನೆಯ ಪ್ರಾಯದಲ್ಲಿ ಯೋಹಾನನಿಂದ ದೀಕ್ಷೆಯ ಸ್ನಾನವನ್ನು ಪಡೆಯುವ ತನಕದ ಪೂರ್ವ ಜೀವಿತದ ಕುರಿತು ಮೌನವಾಗಿದೆ. ಜರ್ಮನಿಯ ಒಬ್ಬ ಕ್ರೈಸ್ತ ಧಾರ್ಮಿಕ ವಿದ್ವಾಂಸರಾದ ಹೋಲ್ಗರ್ ಕೆರ್‌ಸ್ಟೆನ್ (HOLGER KERSTEN) ಯೇಸು ಭಾರತದಲ್ಲಿ ಜೀವಿಸಿದ್ದರು (JESUS LIVED IN INDIA) ಎಂಬ ಶೀರ್ಷಿಕೆಯನ್ನು ಹೊಂದಿದ ಒಂದು ಗ್ರಂಥವನ್ನು ಪ್ರಕಟಿಸಿದ್ದಾರೆ. ಯೇಸು ತನ್ನ ಅಜ್ಞಾತವಾದ 18 ವರ್ಷಗಳ ಜೀವಿತವನ್ನು ಭಾರತದಲ್ಲಿ ಯೋಗ, ವೇದ ಮತ್ತು ಬೌದ್ಧ ಮತದ ಕುರಿತು ಅಧ್ಯಯನ ಮಾಡುತ್ತಾ ಕಳೆದರೆಂಬುದರ ಕುರಿತು ಸಾಕ್ಷ್ಯಾಧಾರಗಳು ಈ ಗ್ರಂಥದಲ್ಲಿದೆ. ಅನಂತರ ಅವರು ಜೆರುಸಲೇಮಿಗೆ ಹಿಂತಿರುಗಿದರು ಮತ್ತು ಶಿಲುಬೆಯ ಸಂಭವದ ನಂತರ ಅಲ್ಲಿಂದ ತಪ್ಪಿಸಿಕೊಂಡು ಡಮಾಸ್ಕಸ್ ಮತ್ತು ಪರ್ಶಿಯಾದ ಮೂಲಕ ಭಾರತಕ್ಕೆ ಹಿಂದಿರುಗಿದರು.

ಯೇಸು ಕಾಶ್ಮೀರದ ಶ್ರೀನಗರದಲ್ಲಿ ದಫನಗೊಳಿಸಲ್ಪಟ್ಟರೆಂದು ನಂಬಲ್ಪಡುತ್ತದೆ. ಅವರ ಗೋರಿ ಇಂದಿಗೂ ಸುರಕ್ಷಿತವಾಗಿದೆ. ಮುಸ್ಲಿಮರ ಗೋರಿಗಳು ಉತ್ತರ-ದಕ್ಷಿಣಾಭಿಮುಖವಾಗಿರುತ್ತದೆ. ಆದರೆ ಈ ಗೋರಿ ಯಹೂದಿ ಆಚಾರದ ಪ್ರಕಾರ ಪೂರ್ವ-ಪಶ್ಚಿಮಾಭಿಮುಖವಾಗಿದೆ.

ಕೆರ್‌ಸ್ಟೆನ್ ತನ್ನ ವಾದವನ್ನು ಸಮರ್ಥಿಸಲಿಕ್ಕಾಗಿ ಧಾರ್ಮಿಕ ಶಾಸ್ತ್ರ, ಪ್ರಾಚೀನ ಶೋಧನ ಶಾಸ್ತ್ರ ಮತ್ತು ಚರಿತ್ರೆಗೆ ಸಂಬಂಧಿಸಿದ ಸಾಕ್ಷ್ಯಾಧಾರಗಳನ್ನು ಧಾರಾಳವಾಗಿ ತನ್ನ ಗ್ರಂಥದಲ್ಲಿ ಒದಗಿಸಿದ್ದಾರೆ. ಕೆರ್‌ಸ್ಟನ್ ಹೀಗೆ ಹೇಳುತ್ತಾರೆ: ಯೇಸು ಟಿಬೇಟಿನವರ ಪ್ರಕಾರ ಪದ್ಮಸಂಭವನ ಎಂದರೆ ಬುದ್ಧನ 21ನೇ ಅವತಾರವಾಗಿದ್ದಾರೆ. ಬುದ್ಧ ವಿಷ್ಣುವಿನ 9ನೇ ಅವತಾರ.

ಯೇಸು ಜನಿಸಿದ ಕೂಡಲೇ ಅವರನ್ನು ಸಂದರ್ಶಿಸಿದ ಪೂರ್ವದೇಶದ ಮೂವರು ಬುದ್ಧಿವಂತರು ಯಥಾರ್ಥವಾಗಿ ಟಿಬೇಟಿಯನ್ ಬೌದ್ಧ ಸನ್ಯಾಸಿಗಳಾಗಿದ್ದರು; ಅವರು ಬುದ್ಧನ ಪುನರವತಾರವನ್ನು ಕಂಡುಹಿಡಿಯಲು ಯತ್ನಿಸುತ್ತಿದ್ದರು ಎಂದು ಕೆರ್‌ಸ್ಟೆನ್ ವಾದಿಸುತ್ತಾರೆ.

ಕೆರ್‌ಸ್ಟೆನ್ ಒದಗಿಸಿದ ಸಾಕ್ಷ್ಯಾಧಾರಗಳನ್ನು ಪರೀಕ್ಷಿಸುವುದಾದರೆ ಅದು ಪ್ರಚಲಿತ ಕ್ರೈಸ್ತ ಧರ್ಮದ ಅಸ್ತಿಭಾರವನ್ನು ಅಲುಗಾಡಿಸಬಹುದು. ಮನುಷ್ಯರೆಲ್ಲರ ಪಾಪವನ್ನು ತೊಳೆಯಲು ಯೇಸು ಶಿಲುಬೆಯಲ್ಲಿ ಮಾಡಿದ ಬಲಿದಾನದ ವಿಶ್ವಾಸವು ಬದಿಗೆ ತಳ್ಳಲ್ಪಡುವುದು. ಕ್ರೈಸ್ತ ಧರ್ಮವು ಯಥಾರ್ಥವಾಗಿ ಯೇಸು ಕ್ರಿಸ್ತರ ಉಪದೇಶಗಳ ಮೇಲೆ ಸ್ಥಾಪಿತವಾಗಿದೆಯೇ ಅಥವಾ ಸಂತ ಪೌಲ್ ಯೇಸು ಕ್ರಿಸ್ತರ ಉಪದೇಶಗಳ ಕುರಿತು ಮಾಡಿದ ವ್ಯಾಖ್ಯಾನಗಳ ಮೇಲೆ ಸ್ಥಾಪಿತವಾಗಿದೆಯೇ ಎಂಬುದರ ಕುರಿತು ಪರಿಶೀಲನೆಯು ಈ ವಾದದಿಂದ ಪ್ರಾರಂಭಿಸಲ್ಪಡುವುದು. ಸಂತ ಪೌಲ್ ಹೀಗೆ ಉಪದೇಶಿಸಿದರು: ಯೇಸುವಿನ ಬಲಿದಾನ ರೂಪದ ಮೃತ್ಯುವೇ ಅವರ ಸಮಗ್ರ ಕೆಲಸವಾಗಿದೆ. ಅವರು ತನ್ನ ರಕ್ತವನ್ನು ಸುರಿಸಿ ಅವರನ್ನು ನಂಬಿದವರನ್ನು ಪಾಪಗಳಿಂದ ಮುಕ್ತರನ್ನಾಗಿ ಮಾಡಿದರು ಹಾಗೂ ಅವ್ಯವಸ್ಥೆ ಮತ್ತು ಸೈತಾನನ ಅಧೀನಕ್ಕೊಳಪಡುವುದರಿಂದ ರಕ್ಷಿಸಿದರು. ಸಂತ ಪೌಲ್ ಪ್ರಕಾರ ದೀಕ್ಷೆಯ ಸ್ನಾನದ ಏಕಮಾತ್ರ ಕ್ರಿಯೆಯಿಂದ ಒಬ್ಬ ವ್ಯಕ್ತಿ ರಕ್ಷಿಸಲ್ಪಡಬಹುದು. ಅವನು ಆಗ ದೇವ ಶಿಶು ಆಗುತ್ತಾನೆ; ಅವನು ಸಂಪೂರ್ಣ ಹೊಸ ಅಸ್ತಿತ್ವವನ್ನು ಹೊಂದುತ್ತಾನೆ. ಕ್ರೈಸ್ತ ಧರ್ಮದ ಘನತೆ ಮತ್ತು ಅದರ ಏಕಮೇವಾದ್ವಿತೀಯತೆ ಈ ತತ್ವವನ್ನು ಅವಲಂಬಿಸಿದೆ ಎಂದು ಬಹುತೇಕ ಕ್ರೈಸ್ತ ಧರ್ಮಾನುಯಾಯಿಗಳು ನಂಬುತ್ತಾರೆ. ಆದರೆ ಇದು ಯೇಸುಕ್ರಿಸ್ತರ ವಿಚಾರಗಳಿಂದ ಬಹಳ ದೂರ ಇರುವ ಒಂದು ಕಾಲ್ಪನಿಕ ಕಥೆ ಎಂದು ಸಾದರಪಡಿಸಲ್ಪಡಬಹುದು.

ಹೊಸ ಒಡಂಬಡಿಕೆಯಲ್ಲಿರುವ ಬೆಟ್ಟದ ಮೇಲೆ ಯೇಸು ಕ್ರಿಸ್ತರು ಮಾಡಿದ ಉಪದೇಶ ಅವರ ಉಪದೇಶಗಳ ಸತ್ವ ಸಾರವಾಗಿದೆ. ಮೇಲೆ ವಿವರಿಸಿದ ತಥಾ ಕಥಿತ ಕ್ರೈಸ್ತವ ಧಾರ್ಮಿಕ ಸಿದ್ಧಾಂತದ ಕುರಿತು ಒಂದು ಸೂಚನೆ ಸಹ ಮೇಲಿನ ಉಪದೇಶದಲ್ಲಿ ನಾವು ಕಾಣಲಾರೆವು. ದೇವ ಪ್ರಾರ್ಥನೆಯಲ್ಲಾಗಲೀ ಸಾಮ್ಯ ಕಥೆಗಳಲ್ಲಾಗಲೀ ನಾವು ಈ ಬಗ್ಗೆ ಯಾವ ಸೂಚನೆಯನ್ನೂ ಕಾಣಲಾರೆವು.

ರಶ್ಯನ್ ಪತ್ರಕರ್ತ ನಿಕೋಲಸ್ ನೋಟೋವಿಚ್ 1880ರ ದಶಕದಲ್ಲಿ ಲಡ್ಡಾಖನ್ನು ಸಂದರ್ಶಿಸಿ The Unknown Life Of Jesus Christ (ಯೇಸು ಕ್ರಿಸ್ತರ ಅಜ್ಞಾತ ಜೀವಿತ) ಎಂಬ ಗ್ರಂಥ ಬರೆದಿದ್ದರು. ಕೆರ್‌ಸ್ಟನ್ ಈ ಬಗ್ಗೆ ತನ್ನ ಗ್ರಂಥದಲ್ಲಿ ಮೊದಲನೆಯದಾಗಿ ಪ್ರಸ್ತಾಪಿಸುತ್ತಾರೆ. ಲಡ್ಡಾಖಿನ ಹೆಮಿಸ್ ಸನ್ಯಾಸಿಮಠದಲ್ಲಿ ನೋಟೋವಿಚ್ ಕೆಲವು ಪುರಾತನ ಧಾರ್ಮಿಕ ಲೇಖನಗಳನ್ನು ಕಂಡು ಹಿಡಿದರು. ಅವುಗಳಲ್ಲಿ ಈಸ ಎಂಬ ರಹಸ್ಯಾತ್ಮಕ ಪ್ರವಾದಿಯ ಕುರಿತು ವಿವರಿಸಲಾಗಿತ್ತು. ಆ ವಿವರಣೆಗಳು ನಝರೇತಿನ ಯೇಸು ಕ್ರಿಸ್ತರ ಜೀವಿತದ ಕಥೆಗೆ ಸರಿಹೋಲುವಂತಿದ್ದವು. ಮೇಲೆ ವಿವರಿಸಿದ ಲೇಖನಗಳಲ್ಲಿ ಹೀಗೆ ಬರೆಯಲಾಗಿತ್ತು: ಇಸ್ರಾಯೆಲ್ ದೇಶದಲ್ಲಿ ಜನಿಸಿದ ಈಸ 14ನೇ ವಯಸ್ಸಿನಲ್ಲಿ ಭಾರತದ ಸಿಂಧ್‌ಗೆ ಆಗಮಿಸಿದರು. ಅಲ್ಲಿಂದ

ಪಂಜಾಬು ಮೂಲಕ ಜಗನ್ನಾಥ ಪುರಿಗೆ ಹೋದರು. ಅಲ್ಲಿ ಆರು ವರ್ಷಗಳ ಕಾಲ ಅವರು ವೇದಗಳನ್ನು ಕಲಿತರು. ಅನಂತರ ಅವರು ನೇಪಾಳದ ಮೂಲಕ ಲಡ್ಡಾಖಿಗೆ ತಲುಪಿದರು. ಅಲ್ಲಿ ಅವರು ಬೌದ್ಧ ಧರ್ಮಗ್ರಂಥಗಳನ್ನು ಅಧ್ಯಯನ ಮಾಡಿದರು.

ನಾಥ ಯೋಗಿ ಪಂಥದವರ ನಾಥ ನಾಮಾವಳಿ ಎಂಬ ಒಂದು ಸೂತ್ರ ಗ್ರಂಥವಿದೆ. ಅದರಲ್ಲಿ ಮಹಾನ್ ಸಂತ ಈಶ ನಾಥರ ಕುರಿತು ಉಲ್ಲೇಖವಿದೆ. ಈಶ ನಾಥರು ತನ್ನ 14ನೇ ವಯಸ್ಸಿನಲ್ಲಿ ಭಾರತಕ್ಕೆ ಆಗಮಿಸಿದುದಾಗಿ ಅದರಲ್ಲಿ ಬರೆದಿದೆ. ಅವರು ತನ್ನ ದೇಶಕ್ಕೆ ಮರಳಿ ಹೋಗಿ ಉಪದೇಶಿಸಲು ಪ್ರಾರಂಭಿಸಿದಾಗ ಅವರು ಗೂಢ ಕಾರಸ್ಥಾನಗಳಿಗೆ ಗುರಿಯಾಗಿ ಶಿಲುಬೆಗೇರಿಸಲ್ಪಟ್ಟರು. ಭಾರತದಲ್ಲಿ ಗಳಿಸಿದ ಯೋಗ ಶಕ್ತಿಯಿಂದ ಅವರು ಕೊಲ್ಲಲ್ಪಡುವುದರಿಂದ ರಕ್ಷಿಸಲ್ಪಟ್ಟರು. ಅನಂತರ ಅವರು ತಮ್ಮ ಗುರುವಾದ ಚೇತನ ನಾಥರ ಅಮಾನುಷ ಶಕ್ತಿಗಳ ಸಹಾಯದಿಂದ ಇನ್ನೊಮ್ಮೆ ಭಾರತಕ್ಕೆ ಬಂದರು. ಹಿಮಾಲಯ ಪರ್ವತ ಶ್ರೇಣಿಗಳಿಗೆ ಸೇರಿದ ಕಡಿಮೆ ಎತ್ತರದ ಬೆಟ್ಟ ಪ್ರದೇಶದಲ್ಲಿ ಅವರು ಆಶ್ರಮವೊಂದನ್ನು ಸ್ಥಾಪಿಸಿದರೆಂದು ಹೇಳಲಾಗುತ್ತದೆ.

(The New Indian Express, 07-12-2000)

**(6ನೇ ಪುಟದಿಂದ)** **ಇಸ್ಲಾಮಿಕ ಜಿಹಾದ್**

ಮಾಡಬಾರದು. ಆದರೆ ಮುಸ್ಲಿಮೇತರರು ಸ್ವಇಚ್ಛೆಯಿಂದ ಇಸ್ಲಾಮ್ ಧರ್ಮವನ್ನು ಪ್ರವೇಶಿಸಬಹುದು. ಅದಕ್ಕೆ ವಿರುದ್ಧವಾದ ಕೆಲಸ "ನಿಮ್ಮ ವಿರುದ್ಧವೇ ಮಾಡುವ ಅನ್ಯಾಯ" ಆಗುವುದು ಮತ್ತು ಮನುಷ್ಯರ ಕುರಿತು ತೀರ್ಮಾನ ಮಾಡಲು ದೇವನಿಗಿರುವ ಪರಮಾಧಿಕಾರದ ವಿರುದ್ಧ ವರ್ತಿಸಿದಂತೆ ಆಗುವುದು.

"ನಿಮ್ಮ ವಿರುದ್ಧವೇ ಮಾಡುವ ಅನ್ಯಾಯ" ಎಂಬ ಪದ ಸಮುಚ್ಚಯ ಗಮನಾರ್ಹವಾಗಿದೆ. ಇನ್ನೊಬ್ಬನ ನಂಬಿಕೆಯ ವಿರುದ್ಧ ಅಸಹಿಷ್ಣುತೆ ತೋರಿಸುವುದು ಹಾಗೆ ಅಸಹಿಷ್ಣುತೆದೋರುವವನಿಗೆ ಹೆಚ್ಚು ಹಾನಿಕರವಾಗುವುದೆಂದು ಹಝ್ರತ್ ಪ್ರವಾದಿಯವರು(ಸ) ಪ್ರತಿಪಾದಿಸುತ್ತಾರೆ. ಏಕೆಂದರೆ ಅಸಹಿಷ್ಣುವಾಗಿರುವ ಮುಸ್ಲಿಮನು ತಾನು ಅನುಷ್ಠಿಸುತ್ತಾ ಇರಬೇಕಾದ ಮುಖ್ಯ ಧಾರ್ಮಿಕ ತತ್ವವನ್ನು ಕೈಬಿಡುತ್ತಾನೆ ಮತ್ತು ಅವನು ಬಲಾತ್ಕಾರದಿಂದ ಧರ್ಮ ಪರಿವರ್ತನೆಗೊಳಪಡಿಸಿದವನನ್ನು ಒಬ್ಬ ಕಪಟ ವಿಶ್ವಾಸಿಯನ್ನಾಗಿ ಮಾಡುತ್ತಾನೆ ಹೊರತು ಸಾತ್ವಿಕ ವಿಶ್ವಾಸಿಯನ್ನಾಗಿಯಲ್ಲ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಧಾರ್ಮಿಕ ಅಸಹಿಷ್ಣುತೆಯು ಹಾನಿಕರವೂ ಕಪಟ ವಿಶ್ವಾಸಿಗಳನ್ನು ಸೃಷ್ಟಿಸುವುದೂ ಆಗಿದೆ.

ಹಝ್ರತ್ ಪ್ರವಾದಿಯವರು(ಸ) ತನ್ನ ಪ್ರವಚನದ ಕೊನೆಯ ಭಾಗದಲ್ಲಿ ಮುಸ್ಲಿಮರು ತಮ್ಮ ಒಡಂಬಡಿಕೆಗಳನ್ನು ಮತ್ತು ದೇವನಿಗೆ ಲೆಕ್ಕ ಒಪ್ಪಿಸಲಿಕ್ಕಿರುವುದನ್ನು ನೆನಪಿನಲ್ಲಿ ಇರಿಸಬೇಕೆಂದು ಹೇಳಿದ್ದಾರೆ. ಕ್ರೈಸ್ತ ಸನ್ಯಾಸಿಗಳಿಗೆ ಬರೆದ ರೀತಿಯಲ್ಲಿಯೇ ಇಲ್ಲಿ ಸಹ ಒಡಂಬಡಿಕೆಗಳನ್ನು ಈಡೇರಿಸಲೇ ಬೇಕಾದ ಒಪ್ಪಂದಗಳೆಂದು ಗಣಿಸಬೇಕೆಂದು ಹೇಳಿದ್ದಾರೆ. ಪವಿತ್ರ ದಿವಸಗಳಿಗೆ, ಪವಿತ್ರ ತಿಂಗಳುಗಳಿಗೆ ಮತ್ತು ಪವಿತ್ರ ಸ್ಥಳಗಳಿಗೆ ಇರುವ ಪಾವಿತ್ರ್ಯ ಮನುಷ್ಯರ ಜೀವಗಳಿಗೂ ಸ್ವತ್ತುಗಳಿಗೂ ಇದೆಯೆಂದು ಅವರು ತನ್ನ ಪ್ರವಚನದ ಮುಕ್ತಾಯ ಭಾಗದಲ್ಲಿ ಹೇಳಿದ್ದಾರೆ.

ಮುಸ್ಲಿಮನು ಮಾಡುವ ಒಡಂಬಡಿಕೆಯು ಆತನನ್ನು ಸಾಮಾಜಿಕ ಸಮತ್ವ, ಪೌರತ್ವ, ಧಾರ್ಮಿಕ ಸೌಹಾರ್ದತೆ ಮತ್ತು ಸಹಿಷ್ಣುತೆಗೆ ಬದ್ಧವಾಗಿ ಮಾಡುತ್ತದೆ. ಈ ಮೌಲ್ಯಗಳು ಜಿಹಾದಿಗೆ "ಪವಿತ್ರ ಯುದ್ಧ" ಮತ್ತು "ಬಲಾತ್ಕಾರದ ಧರ್ಮ ಪರಿವರ್ತನೆ" ಎಂದು ಅರ್ಥ ಕೊಡುವುದಕ್ಕೆ ವಿರುದ್ಧವಾಗಿವೆ. ಹಝ್ರತ್ ಪ್ರವಾದಿಯವರ(ಸ) ಜೀವಿತ ಕಾಲದ ಉದಾಹರಣೆಗಳಿಂದ ಸ್ಪಷ್ಟವಾಗುವುದೇನೆಂದರೆ, ಮುಸ್ಲಿಮೇತರರನ್ನು ಬಲಾತ್ಕಾರದಿಂದ ಇಸ್ಲಾಮ್ ಧರ್ಮಕ್ಕೆ ಸೇರಿಸುವ ಅರ್ಥದಲ್ಲಿ ಅಥವಾ ಆಕ್ರಮಣಕಾರಿ "ಪವಿತ್ರ ಯುದ್ಧ" ಎಂಬ ಅರ್ಥದಲ್ಲಿ ಜಿಹಾದ್ ಪದವನ್ನು ಎಂದೂ ಬಳಸಲಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮುಸ್ಲಿಮೇತರರೊಂದಿಗೆ ವರ್ತಿಸುತ್ತಿದ್ದ ವಿಧಾನವನ್ನು ಪವಿತ್ರ ಖುರ್‌ಆನ್ ಹೀಗೆ ವಿವರಿಸುತ್ತದೆ :

**"ಅಲ್ಲಾಹನ (ಮಹತ್ತಾದ) ಕಾರುಣ್ಯದಿಂದಲೇ ನೀನು ಅವರೊಂದಿಗೆ ಸೌಮ್ಯವಾಗಿ ವರ್ತಿಸುತ್ತಿರುವೆ. ನೀನು ಕ್ರೂರ ಸ್ವಭಾವಿಯೂ ಕಠಿಣ ಹೃದಯಿಯೂ ಆಗಿರುತ್ತಿದ್ದರೆ ಅವರು ನಿನ್ನ ಸುತ್ತಮುತ್ತಲಿನಿಂದ ನಿಶ್ಚಯವಾಗಿಯೂ ಅಗಲಿ ಹೋಗುತ್ತಿದ್ದರು." (3:160)**

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ತನ್ನ ನಡೆವಳಿಕೆಯಿಂದ ಸ್ಪಷ್ಟವಾಗಿ ತೋರಿಸಿಕೊಟ್ಟ ಇಸ್ಲಾಮ್ ಧರ್ಮದ ತತ್ವಗಳು ಧಾರ್ಮಿಕ ಸಹಿಷ್ಣುತೆಯನ್ನು ಪ್ರತಿಪಾದಿಸುತ್ತವೆ. ಇಸ್ಲಾಮ್ ಧರ್ಮ ನಿರ್ದೇಶಿಸುವ ಆಡಳಿತೆಯ ವ್ಯವಸ್ಥೆಯು ಧಾರ್ಮಿಕ ಸಹಿಷ್ಣುತೆಯ ಮೇಲೆ ಸ್ಥಾಪಿತವಾಗಿದೆ. ಧಾರ್ಮಿಕ ಸಹಿಷ್ಣುತೆಯ ಕುರಿತು ಇಸ್ಲಾಮ್ ಧರ್ಮದ ಉಪದೇಶಗಳು ಜಿಹಾದಿನ ಬಗ್ಗೆ ಇರುವ ಪ್ರಚಲಿತ ಅಭಿಪ್ರಾಯಗಳನ್ನು ಬದಲಾಯಿಸಿ ಅದನ್ನು ಆಧ್ಯಾತ್ಮಿಕವಾಗಿ ಉನ್ನತವಾದ ನೈತಿಕ ಮತ್ತು ಆಡಳಿತಾತ್ಮಕ ಚೌಕಟ್ಟನ್ನು ರೂಪಿಸಲು ಸಹಾಯಕವಾದ ಒಂದು ಸಿದ್ಧಾಂತವಾಗಿ ಮಾಡುವುದು. ಈ ಚೌಕಟ್ಟು ಉಗ್ರವಾದಿಗಳಿಂದ ಮತ್ತು ವಿದ್ವಾಂಸರಿಂದ ಕಳಂಕಿತಗೊಳಿಸಲ್ಪಡುವುದು ದುಃಖಕರವಾದ ಸಂಗತಿಯಾಗಿದೆ.

ಮಕ್ಕಳ ಪಂಕ್ತಿ

# ಇಸ್ಲಾಮಿನ ಪ್ರಾಥಮಿಕ ಪಾಠಗಳು

## ಇಸ್ಲಾಂ

"ಇಸ್ಲಾಂ" ಎಂಬ ಅರಬಿ ಪದದ ಅರ್ಥ ವಿಧೇಯತೆ, ಅನುಸರಣೆ ಎಂದಾಗಿದೆ. ಅಂದರೆ ಅಲ್ಲಾಹನಿಗೆ ಸಂಪೂರ್ಣವಾಗಿ ವಿಧೇಯವಾಗುವುದು ಎಂದು ತಾತ್ಪರ್ಯ. ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಮ್) ಮುಖಾಂತರ ಅಲ್ಲಾಹನು ಪ್ರಕಟಪಡಿಸಿದ ಪರಿಪೂರ್ಣವಾದ ಧರ್ಮಕ್ಕೆ "ಇಸ್ಲಾಂ" ಎಂದು ಹೆಸರಿಡಲಾಗಿದೆ. ಏಕೆಂದರೆ ಅದು ಅಲ್ಲಾಹನಿಗೆ ಸಂಪೂರ್ಣ ವಿಧೇಯತೆಯನ್ನು ತೋರಿಸುವ ಏಕ ಮಾರ್ಗವಾಗಿದೆ.

ಇಸ್ಲಾಂ ಎಂಬ ಶಬ್ದಕ್ಕೆ ಶಾಂತಿ-ಸಮಾಧಾನವನ್ನು ನೆಲೆಗೊಳಿಸುವುದು ಎಂದು ಸಹ ಅರ್ಥವಿದೆ. ವಿಶ್ವದಲ್ಲಿ ಶಾಶ್ವತ ಶಾಂತಿಯನ್ನು ಸ್ಥಾಪಿಸುವರೆ ಒಂದೇ ಒಂದು ಮಾರ್ಗ ಇಸ್ಲಾಂ ಮಾತ್ರವಾಗಿದೆ.

ಇಸ್ಲಾಂ ಧರ್ಮವನ್ನು ಸ್ವೀಕರಿಸುವವನನ್ನು "ಮುಸ್ಲಿಂ" ಎಂದು ಕರೆಯುತ್ತಾರೆ. ಒಬ್ಬ ನಿಜವಾದ ಮುಸ್ಲಿಮನು ಅಲ್ಲಾಹನಿಗೆ ಸಂಪೂರ್ಣವಾಗಿ ವಿಧೇಯನಾಗಿದ್ದುಕೊಂಡು ಮನುಷ್ಯರೆಡೆಯಲ್ಲಿ ಶಾಂತಿ-ಸಮಾಧಾನ ನೆಲೆಗೊಳಿಸಲಿಕ್ಕೆ ತನ್ನ ಕೈಲಾದಷ್ಟು ಪ್ರಯತ್ನಿಸುತ್ತಾನೆ. ಅದಕ್ಕೆ ಅಗತ್ಯವಿರುವ ಎಲ್ಲ ನಿಯಮ ನಿರ್ದೇಶಗಳು ಇಸ್ಲಾಮಿನಲ್ಲಿದೆ.

ಇಸ್ಲಾಮಿನ ಎಲ್ಲ ಅಧ್ಯಾಪನೆಗಳು ಮನುಷ್ಯರಿಗೆ ಪ್ರಯೋಜನಕರವೂ ಪ್ರಾಯೋಗಿಕವೂ ಸರಳವೂ ಆಗಿವೆ. ಅದರ ಎಲ್ಲ ತತ್ವಗಳು ವಿವೇಕಯುತವಾಗಿವೆ.

ಇಸ್ಲಾಂ ಮಾನವರೆಲ್ಲರಿಗೋಸ್ಕರವಿರುವ ಒಂದು ಸಂದೇಶವಾಗಿದೆ. ಆದ್ದರಿಂದ ಪ್ರಪಂಚದಲ್ಲಿರುವ ಎಲ್ಲ ಜನರಿಗೂ ಇಸ್ಲಾಮನ್ನು ಬೋಧಿಸಿ ಎಲ್ಲರನ್ನೂ ಪ್ರೀತಿಯಿಂದ ಅದರೆಡೆಗೆ ಆಮಂತ್ರಿಸಬೇಕಾದುದು ಮುಸ್ಲಿಮರಾದ ನಮ್ಮ ಕರ್ತವ್ಯವಾಗಿದೆ.

## ಮೂಲ ಸಿದ್ಧಾಂತ

ಅಲ್ಲಾಹನು ಏಕನು ಮತ್ತು ಮುಹಮ್ಮದ್ ಮುಸ್ತಫಾ(ಸ) ಅಲ್ಲಾಹನ ಪ್ರವಾದಿ ಎಂಬುದಾಗಿದೆ ಇಸ್ಲಾಮಿನ ಮೂಲ ಸಿದ್ಧಾಂತ. ಒಬ್ಬನು ಅಲ್ಲಾಹನಿಂದ ನಿಜವಾದ ಮುಸ್ಲಿಮನೆಂದು ಅಂಗೀಕರಿಸಲ್ಪಡಲಿಕ್ಕೆ ಕೇವಲ ಈ ವಿಶ್ವಾಸವನ್ನು ಇಟ್ಟುಕೊಂಡರೆ ಮಾತ್ರ ಸಾಲದು; ಅಲ್ಲಾಹನನ್ನೂ ಮುಹಮ್ಮದ್ ಪೈಗಂಬರ್‌ರವರನ್ನೂ(ಸ) ಪರಿಪೂರ್ಣವಾಗಿ ಅನುಸರಿಸಬೇಕಾಗಿದೆ.

## ಇಸ್ಲಾಮಿನ ಮೂಲ ವಿಶ್ವಾಸಗಳು

ಎಲ್ಲ ಮುಸ್ಲಿಮರು ಈ ಕೆಳಗಿನ ಆರು ಮೂಲ ವಿಶ್ವಾಸಗಳನ್ನು ಹೊಂದಿರಬೇಕಾಗಿದೆ. ಅವೆಂದರೆ:

1. ಅಲ್ಲಾಹನಲ್ಲಿ ವಿಶ್ವಾಸವಿಡುವುದು.

2. ಅಲ್ಲಾಹನ ದೂತರಲ್ಲಿ (ಮಲಾಯಿಕ್) ವಿಶ್ವಾಸವಿಡುವುದು.

3. ಅಲ್ಲಾಹನ ಗ್ರಂಥ (ಕಿತಾಬ್)ಗಳಲ್ಲಿ ವಿಶ್ವಾಸವಿಡುವುದು.

4. ಅಲ್ಲಾಹನ ಪ್ರವಾದಿಗಳಲ್ಲಿ ವಿಶ್ವಾಸವಿಡುವುದು.

5. ಅಂತ್ಯದಿನ - ಮರಣಾನಂತರ ಜೀವನದಲ್ಲಿ ವಿಶ್ವಾಸವಿಡುವುದು.

6. ಒಳಿತು - ಕೆಡುಕುಗಳಿಗೆ ಸಂಬಂಧಿಸಿ ಎಲ್ಲ ನಿರ್ಣಯಗಳೂ ವಿಧಿಗಳೂ ಅಲ್ಲಾಹನಿಂದ ಎಂದು ವಿಶ್ವಾಸವಿಡುವುದು.

## ಇಸ್ಲಾಮಿನ ಅನುಷ್ಠಾನ ಕರ್ಮಗಳು

ಇಸ್ಲಾಮಿನ ಪ್ರಧಾನವಾದ ಐದು ಅನುಷ್ಠಾನ ಕರ್ಮಗಳು ಈ ಕೆಳಗಿನಂತಿವೆ:

1. ಶಹಾದತ್ ಕಲಿಮ (ಸಾಕ್ಷ್ಯ ವಚನ)

ಅಂದರೆ أَشْهَدُ أَنْ لَا إِلٰهَ إِلَّا اللهُ وَأَشْهَدُ أَنَّ مُحَمَّدًا رَسُولُ اللهِ

"ಅಶ್‌ಹದು ಅ(ನ್)ಲ್ಲಾ ಇಲಾಹ ಇಲ್ಲಲ್ಲಾಹು ವ ಅಶ್‌ಹದು ಅನ್ನ ಮುಹಮ್ಮದ(ನ್)ರ್ರಸೂಲುಲ್ಲಾಹ್" [ಅಲ್ಲಾಹನ ಹೊರತು ಬೇರೆ ಯಾರೂ ಆರಾಧನೆಗೆ ಅರ್ಹರಲ್ಲವೆಂದು ನಾನು ಸಾಕ್ಷ್ಯವಹಿಸುತ್ತೇನೆ; ಮುಹಮ್ಮದ್(ಸ) ಅಲ್ಲಾಹನ ಪ್ರವಾದಿಯಾಗಿರುವರೆಂದೂ ನಾನು ಸಾಕ್ಷ್ಯವಹಿಸುತ್ತೇನೆ] ಎಂಬ ಮೂಲಮಂತ್ರವನ್ನು, ಅರ್ಥವನ್ನು ಗ್ರಹಿಸಿಕೊಂಡು ಉಚ್ಚರಿಸಬೇಕು.

2. ದಿನಂಪ್ರತಿ ಐದು ಹೊತ್ತು ನಿರ್ದಿಷ್ಟ ಸಮಯಗಳಲ್ಲಿ ನಮಾಝ್ ಮಾಡಬೇಕು.

3. ಧನವಂತನು "ಝಕಾತ್" ಎಂಬ ಕಡ್ಡಾಯ ದಾನ ನೀಡಬೇಕು.

4. ರಮಝಾನ್ ಮಾಸದಲ್ಲಿ ಉಪವಾಸ ಮಾಡಬೇಕು.

5. ಅನುಕೂಲವಿದ್ದವನು 'ಹಜ್ಜ್' ತೀರ್ಥಾಟನೆ ಮಾಡಬೇಕು.

## ಸವಿ ನೆನಪು



# ಜನಾಬ್ ಎನ್. ಅಬ್ದುರ್ರಹೀಂ ಸಾಹೇಬ್

40 ವರ್ಷಗಳ ಕಾಲ ಕೇರಳದ ಅಹ್ಮದಿಯಾ ಮುಖವಾಣಿಯಾದ "ಸತ್ಯದೂತನ್" ಮಾಸ ಪತ್ರಿಕೆಯ ಸಂಪಾದಕರಾಗಿದ್ದ ಜನಾಬ್ ಎನ್. ಅಬ್ದುರ್ರಹೀಂ ಸಾಹೇಬ್ ತನ್ನ 79ನೇ ವಯಸ್ಸಿನಲ್ಲಿ ಕಳೆದ ಜೂನ್ 24ರಂದು ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಎನ್. ಅಬ್ದುರ್ರಹೀಂ ಸಾಹೇಬರು ನಿರ್ವಹಿಸಿದ ಅತುಲ್ಯ ಸಾಹಿತ್ಯ ಸೇವೆ ಕೇರಳದ ಅಹ್ಮದಿಯಾ ಚರಿತ್ರೆಯ ಅಂಶವಾಗಿ ಎಂದಿಗೂ ಸ್ಮರಿಸಲ್ಪಡುವುದು.

ಕಳೆದ ಅನೇಕ ವರ್ಷಗಳಲ್ಲಿ ಇಸ್ಲಾಮಿನ ವಿರುದ್ಧವಾಗಿಯೂ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಿರುದ್ಧವಾಗಿಯೂ ಮಲಯಾಳ ಭಾಷೆಯಲ್ಲಿ ಉದ್ಭವಿಸಿದ ವಿಮರ್ಶೆಗಳಿಗೆ ಅಬ್ದುರ್ರಹೀಂ ಸಾಹೇಬರು ಬಹಳ ತೃಪ್ತಿಕರವಾದ ಉತ್ತರ ನೀಡಿದ್ದರು. ಅಹ್ಮದಿಯಾ ಮುಸ್ಲಿಂ ಜಮಾಅತಿನ ವಿರುದ್ಧವಾಗಿ ಶತ್ರು ಪಕ್ಷದ ಅತಿರಥರೂ ಮಹಾರಥರೂ ಎತ್ತಿದ ಆಕ್ಷೇಪಗಳಿಗೂ ಆರೋಪಗಳಿಗೂ ಅವರು ಮಾಡಿದ ಪರಿಹಾಸ್ಯಗಳಿಗೂ ಅವರ ಬಾಯಿ ಮುಚ್ಚಿಸುವ ಸಮರ್ಥ ಉತ್ತರಗಳನ್ನು ನೀಡಿದರು. ಅವರು ಚಿಕ್ಕದೂ ದೊಡ್ಡದೂ ಆದ ಸುಮಾರು 60 ಪುಸ್ತಕಗಳನ್ನೂ ಭಾಷಾಂತರಗಳನ್ನೂ ರಚಿಸಿದ್ದಾರೆ. ಅವರು ಓರ್ವ ಉತ್ತಮ ವಾಗ್ಮಿಯೂ ಆಗಿದ್ದರು.

ಅವರು ಕಣ್ಣೂರು ಸಿಟಿ ಅಹ್ಮದಿಯಾ ಮುಸ್ಲಿಂ ಘಟಕದ ಅಧ್ಯಕ್ಷರಾಗಿಯೂ ಕಣ್ಣೂರು ಪ್ರೆಸ್ ಕ್ಲಬ್ಬಿನ ಅಧ್ಯಕ್ಷರಾಗಿಯೂ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ.

ಅಲ್ಲಾಹನು ಅವರಿಗೆ ಮಗ್‌ಫಿರತನ್ನೂ ಜನ್ನತನ್ನೂ ದಯಪಾಲಿಸಲಿ - ಆಮೀನ್.

# ಜನಾಬ್ ಎ. ಪಿ. ಕುಞ್ಞಾಮು ಸಾಹೇಬ್



ಅಹ್ಮದಿಯಾ ಮುಸ್ಲಿಂ ಜಮಾಅತಿನ ಕೋಝಿಕೋಡ್ ವಲಯ ಅಮೀರ್ ಹಾಗೂ ಕೇರಳ ಸಂಸ್ಥಾನ ಮಾಜಿ ಅಮೀರ್ ಆಗಿದ್ದ ಜನಾಬ್ ಎ. ಪಿ. ಕುಞ್ಞಾಮು ಸಾಹೇಬ್ ತನ್ನ 73ನೇ ವಯಸ್ಸಿನಲ್ಲಿ ಜನವರಿ 7ರಂದು ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಅನೇಕ ವರ್ಷಗಳ ಕಾಲ ಕೇರಳ ಸಂಸ್ಥಾನ ಅಮೀರ್ ಆಗಿದ್ದ ಅವರು ಜಮಾಅತಿಗೆ ಸಲ್ಲಿಸಿದ ಸೇವೆ ನಿಸ್ತುಲ್ಯವಾಗಿದೆ. ಅವರು ಕೇರಳದ ಎಲ್ಲ ಜಮಾಅತ್ ಘಟಕಗಳನ್ನು ಒಗ್ಗೂಡಿಸಿಕೊಂಡು ಅನೇಕ ಪ್ರಗತಿಪರ ಚಟುವಟಿಕೆಗಳನ್ನು ತೊಡಗಿದ್ದರು.

ಅವರು ಅನೇಕ ಲೇಖನಗಳನ್ನೂ ಕೆಲವು ಪುಸ್ತಕಗಳನ್ನೂ ಬರೆದಿದ್ದಾರೆ. ಅವರು ಭಾಷಣಗಾರರೂ ಆಗಿದ್ದರು. ಜಮಾಅತ್ ನಡೆಸುತ್ತಿರುವ ಫಝ್ಲೆ ಉಮರ್ ಎಜುಕೇಶನ್ ಟ್ರಸ್ಟ್‌ನ ಸ್ಥಾಪಕ ಚೇಯರ್‌ಮನ್ ಸಹ ಅವರಾಗಿದ್ದರು. ಮರಣದ ವರೆಗೆ ಅವರು ಆ ಪದವಿ ಅಲಂಕರಿಸಿದರು. ಅವರು ಕೇರಳ ಅಹ್ಮದಿಯಾ ಹಿಲಾಲ್ ಕಮಿಟಿಯ ಪ್ರೆಸಿಡೆಂಟ್ ಆಗಿಯೂ ಸೇವೆ ಸಲ್ಲಿಸಿದ್ದಾರೆ. ಅವರು ಅಮೀರ್ ಆಗಿದ್ದಾಗ ಕೇರಳದಲ್ಲಿ ಹತ್ತು ಕಡೆಗಳಲ್ಲಿ ಹೊಸ ಘಟಕಗಳು ಸ್ಥಾಪಿಸಲ್ಪಟ್ಟವು.

ಅಲ್ಲಾಹನು ಅವರಿಗೆ ಮಗ್‌ಫಿರತನ್ನೂ ಜನ್ನತನ್ನೂ ಅನುಗ್ರಹಿಸಲಿ - ಆಮೀನ್.

# READ AHMADIYYA PERIODICALS

| | |
|---|---|
| **The Review of Religions** | **Annual Subscription: Rs 100/-**<br>Write to: The Manager<br>The Review of Religions,<br>Qadian- 143516 (Punjab) |
| **BADR**<br>Urdu Weekly | **Annual Subscription: Rs 250/-**<br>Write to: The Manager<br>The BADR Weekly<br>QADIAN - 143516 (Punjab) |
| **ANSARULLAH**<br>Urdu & Hindi Quarterly | **Annual Subscription: Rs 60/-**<br>Write to: The Manager<br>ANSARULLAH<br>QADIAN - 143516 (Punjab) |
| **MISHKAT**<br>Urdu Monthly | **Annual Subscription: Rs 120/-**<br>Write to: The Manager<br>MISHKAT<br>Qadian- 143516 (Punjab) |
| **SATHYADOOTHAN**<br>Malayalam Weekly | **Annual Subscription: Rs 120/-**<br>Write to: The Manager<br>The SATHYADHOOTHAN Monthly<br>G.H. Road, Kozhikode<br>(Kerala) |
| **SATHYAMITHRAM**<br>Malayalam Monthly | **Annual Subscription: Rs 60/-**<br>Write to: The Manager<br>SATHYAMITHRAM<br>Thavakkara, Kannur, (Kerala) |

ಪುಸ್ತಕ ವಿಭಾಗ

# ಧರ್ಮದ ನಾಮದಲ್ಲಿ ರಕ್ತಪಾತ

❖ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್

## ಅಧ್ಯಾಯ - 3

## ಮೌದೂದಿ ಸಿದ್ಧಾಂತದ ಖಂಡನೆ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಬೈಬಲ್ ಚರಿತ್ರೆಯ ಪ್ರಕಾರ ಧರ್ಮವು ಖಡ್ಗಗಳನ್ನು ನೇಗಿಲ ತುದಿಯ ಗುಳಗಳನ್ನಾಗಿ ಪರಿವರ್ತಿಸುತ್ತದೆ. (ಯೆಶಾಯ 2 : 4) ಆದರೆ ಮೌಲಾನ ಮೌದೂದಿ ಇಸ್ಲಾಮಿಕ ಚರಿತ್ರೆಗೆ ನೀಡುವ ವ್ಯಾಖ್ಯಾನದ ಪ್ರಕಾರ ಖಡ್ಗವು ಆತ್ಮದ ಭೂಮಿಯನ್ನು ಧರ್ಮದ ಬೀಜ ಬಿತ್ತಲು ಹದಗೊಳಿಸುತ್ತದೆ.* ಇಸ್ಲಾಮ್ ಧರ್ಮದ ಬಹಿರಂಗ ಶತ್ರುವಾಗಿದ್ದ ಉಮರ್ ಬಿನ್ ಖತ್ತಾಬ್‌ರವರನ್ನು[ರ] ಇಸ್ಲಾಮಿನ ನಿಷ್ಠಾವಂತ ದಾಸನನ್ನಾಗಿ ಪರಿವರ್ತಿಸಿದುದು ಪ್ರವಾದಿಯವರ[ಸ] ಖಡ್ಗವೋ ಅಥವಾ ಪವಿತ್ರ ಖುರ್‌ಆನಿನ ಕೆಲವು ವಚನಗಳೋ? ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಪ್ರವಾದಿತ್ವದ ಆರಂಭದಲ್ಲಿ ಅವರು ಶತ್ರುಗಳಿಂದ ಪೀಡಿಸಲ್ಪಡುತ್ತಿದ್ದ ಆ ಕಾಲದಲ್ಲಿ ಉಮರ್[ರ] 26 ವರ್ಷ ಪ್ರಾಯದ ಉದ್ಧಟ ಯುವಕರಾಗಿದ್ದಾಗ ಪೈಗಂಬರರನ್ನು[ಸ] ಕೊಲ್ಲಲು ಪ್ರತಿಜ್ಞೆ ಮಾಡಿದ್ದರು. ಖುರೈಶಿಗಳ ಮಧ್ಯದಲ್ಲಿ ಒಡಕುಂಟಾಗಲು ಪೈಗಂಬರರೇ[ಸ] ಕಾರಣವಾಗಿರುವರೆಂದು ಅವರು ಭಾವಿಸಿದ್ದರು. ಅವರು ಪ್ರವಾದಿಯವರ[ಸ] ಮನೆಗೆ ಹೋಗುತ್ತಿದ್ದಾಗ ನುಐಮ್ ಬಿನ್ ಅಬ್ದುಲ್ಲಾರವರು ಉಮರ್‌ರವರ[ರ] ದುರುದ್ದೇಶವನ್ನು ಮನವರಿಕೆ ಮಾಡಿಕೊಂಡು ಹೀಗೆ ಹೇಳಿದರು:- "ಓ ಉಮರ್, ನೀನು ನಿನ್ನ ಮನೆಯ ಜನರ ಬಳಿಗೆ ಹೋಗು. ನಿನ್ನ ಸಹೋದರಿ ಫಾತಿಮ ಮತ್ತು ನಿನ್ನ ಭಾವ ಸಈದ್ ಮುಹಮ್ಮದರ ಧರ್ಮವನ್ನು ಅಂಗೀಕರಿಸಿರುವರು." ಉಮರ್[ರ] ಮರುನುಡಿಯದೆ ನೇರವಾಗಿ ತನ್ನ ಸಹೋದರಿಯ ಮನೆಗೆ ಹೋದರು. ಅಲ್ಲಿ ಖಬ್ಬಾಬ್[ರ] ಎಂಬ ಪ್ರವಾದಿ ಶಿಷ್ಯರು ಪವಿತ್ರ ಖುರ್‌ಆನಿನ ತಾಹಾ ಎಂಬ ಅಧ್ಯಾಯದ ಪ್ರಾರಂಭದ ವಚನಗಳನ್ನು ಪಾರಾಯಣ ಮಾಡುತ್ತಿದ್ದರು. ಉಮರ್[ರ] ಮನೆಯೊಳಗೆ ಹೋದಾಗ ಖಬ್ಬಾಬ್ ಅಡಗಿ ಕುಳಿತರು. ಫಾತಿಮರವರು ಪವಿತ್ರ ಖುರ್‌ಆನ್ ವಚನಗಳನ್ನು ಅಡಗಿಸಿಟ್ಟರು. ಆದರೆ ಉಮರ್[ರ] ಪವಿತ್ರ ಖುರ್‌ಆನ್ ಪಾರಾಯಣವನ್ನು ಖಬ್ಬಾಬ್‌ರವರು ಮಾಡುವುದನ್ನು ಹೊರಗಿನಿಂದ ಆಲಿಸಿದ್ದರು. ಅವರು ತನ್ನ ಸಹೋದರಿಯನ್ನೂ ಆಕೆಯ ಪತಿಯನ್ನೂ ಥಳಿಸಿದರು. ಫಾತಿಮರವರು ಗಾಯಗೊಂಡು ರಕ್ತರಂಜಿತರಾದರು. ಆಗ ಉಮರ್‌ರವರಿಗೆ[ರ] ಮನೋವೇದನೆಯಾಯಿತು. ಪವಿತ್ರ ಖುರ್‌ಆನಿನ ವಚನಗಳನ್ನು ತನಗೆ ತೋರಿಸಬೇಕೆಂದು ಅವರು ಕೇಳಿದರು. ಅವರು ಆ ವಚನಗಳನ್ನು ಓದಿದಾಗ ಹೀಗೆ ಉದ್ಗರಿಸಿದರು: "ಈ ವಚನಗಳು ಎಷ್ಟು ಸುಂದರ ಮತ್ತು ಎಷ್ಟು ಉದಾತ್ತವಾಗಿವೆ!" ಅವರು ಆ ಕೂಡಲೆ ಅರ್‌ಖಮ್‌ರವರ ಮನೆಗೆ ಹೋದರು. ಅಲ್ಲಿ ಪ್ರವಾದಿಯವರು[ಸ] ತನ್ನ ಶಿಷ್ಯರ ಜೊತೆ ಕುಳಿತಿದ್ದರು. ಉಮರ್[ರ] ಉಚ್ಚಸ್ವರದಲ್ಲಿ ಹೇಳಿದರು: "ಓ ಅಲ್ಲಾಹನ ಸಂದೇಶವಾಹಕರೇ, ಅಲ್ಲಾಹನಲ್ಲಿಯೂ ಅವನ ಸಂದೇಶವಾಹಕರಲ್ಲಿಯೂ ಆ ಸಂದೇಶವಾಹಕರು ಅಲ್ಲಾಹನಿಂದ ತಂದ ಗ್ರಂಥದಲ್ಲಿಯೂ ನನ್ನ ವಿಶ್ವಾಸವನ್ನು ಪ್ರಕಟಿಸಲು ನಾನು ನಿಮ್ಮ ಸಮೀಪಕ್ಕೆ ಬಂದಿದ್ದೇನೆ".

ಇಸ್ಲಾಮಿನ ಹಿಂಸಾಚಾರಭರಿತ ಚಿತ್ರವನ್ನು ರೂಪಿಸಲು ಮೌಲಾನ ಮೌದೂದಿ ಇಷ್ಟು ಮಟ್ಟಿಗೆ ದೃಢನಿರ್ಧಾರ ಹೊಂದಿದುದಾದರೂ ಏಕೆ? ಜಿಹಾದ್ ಕುರಿತು ಅವರ ಸಿದ್ಧಾಂತದಲ್ಲಿ ವೈರುಧ್ಯಗಳು ಇರುವುದೇಕೆ? ಮೌಲಾನ ಮೌದೂದಿಯವರ ಹಿನ್ನಲೆ ಮತ್ತು ಅವರು "ಅಲ್‌ಜಿಹಾದ್ ಫಿಲ್ ಇಸ್ಲಾಮ್" ಬರೆದ ಕಾಲದ ಸ್ಥಿತಿಗತಿಗಳ ಕಡೆಗೆ ಒಂದು ಇಣುಕು ನೋಟ ಹಾಯಿಸಿದರೆ ಈ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯಲು ಸಹಾಯಕವಾಗಬಹುದು.

ಸಯ್ಯದ್ ಅಬುಲ್ ಆಲಾ ಮೌದೂದಿಯವರು ತನ್ನ ಬಾಲ್ಯವನ್ನೂ ತಾರುಣ್ಯದ ಆರಂಭದ ಕಾಲವನ್ನೂ ಹೈದರಾಬಾದ್‌ನಲ್ಲಿ ಕಳೆದಿದ್ದರು. ಅಲ್ಲಿ ನಿಝಾಮ್ ದೆಹಲಿಯ ಮೊಗಲ್ ದೊರೆಗಳ ಹಾಗೆ ವೈಭವ ಭರಿತ ಆಡಳಿತೆ ನಡೆಸುತ್ತಿದ್ದರು. ಅವರ ಮುಖ್ಯಮಂತ್ರಿ ಹಿಂದುವಾಗಿದ್ದರೂ ಪ್ರವಾದಿಯವರನ್ನು[ಸ] ಹೊಗಳಿ ಹಾಡುತ್ತಿದ್ದರು. ಉತ್ತರ-ದಕ್ಷಿಣ, ಪೂರ್ವ-ಪಶ್ಚಿಮಗಳ ಕೂಡು ಮಾರ್ಗದಲ್ಲಿದ್ದ ಹೈದರಾಬಾದ್ ಸಂಸ್ಥಾನವು ಭಾರತದಲ್ಲಿ ಮೊಗಲ್ ಮತ್ತು ಮುಸ್ಲಿಮ್ ಸಂಸ್ಕೃತಿಯ ಕೊನೆಯ ದುರ್ಗವಾಗಿತ್ತು. ಈ ಸಂಸ್ಥಾನದಲ್ಲಿ ಶೇಕಡಾ ಎಂಬತ್ತರಷ್ಟು ಹಿಂದುಗಳು ಮತ್ತು ಶೇಕಡಾ ಹತ್ತರಷ್ಟು ಮುಸ್ಲಿಮರು ಇದ್ದರು. ಬ್ರಿಟಿಷ್ ಆಡಳಿತೆಗೆ ಅಧೀನವಾಗಿದ್ದ ನಿಝಾಮ್‌ರಿಗೆ ಸಾಕಷ್ಟು ಅಧಿಕಾರವಿಲ್ಲದಿದ್ದರೂ ಅ..ತ ಆಡಳಿತೆ ಮೊಗಲ್ ದೊರೆಗಳ ವೈಭವವನ್ನು ನೆನಪಿಗೆ ತರುವಂತೆ ಇತ್ತು. ಅದೊಂದು ಮಾಯಾಲೋಕವಾಗಿತ್ತು. ನಿಝಾಮರ ದರ್ಬಾರು, ಅದರ ಸಭಾಸದರು, ಅರಮನೆಯ ಪಾರುಪತ್ಯಗಾರರು, ಖಾಸಾ ಸೈನ್ಯ ದಳ, ಜರತಾರಿ ಕಸೂತಿಯ ಶೆರ್‌ವಾನಿಗಳು, ಆಡಂಬರ ಭರಿತ ಪಗಡಿಗಳು, ನಡುಪಟ್ಟಿಗಳು ಮತ್ತು ವೈಭವಭರಿತ ಆಭರಣಗಳು ನಾದಿರ್‌ಶಾಹ್ ದಾಳಿಗೆ (1739) ಹಿಂದಿನ ಕಾಲದ ದೆಹಲಿಯ ದೊರೆಗಳ ದರಬಾರನ್ನು ನೆನಪಿಗೆ ತರವಂತಹದ್ದಾಗಿದ್ದವು. ಅಲ್ಲಿ ಅರಬಿ ಕೂಲಿ ಸಿಪಾಯಿಗಳಿದ್ದರು. ಬಂಗಾರ ಲೇಪಿತ ಹಿಡಿಯುಳ್ಳ ಖಡ್ಗಗಳು, ಉದ್ದವಾದ ಕೋವಿಗಳು ಅವರ ಆಯುಧಗಳಾಗಿದ್ದವು. ಆಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜಿತವಾದ ಸೇನಾದಳವೂ ಅಲ್ಲಿದ್ದಿತು. ರಾಜರು ಮತ್ತು ಮಹಾರಾಜರು ನಿಝಾಮರ ಸರಕಾರದಲ್ಲಿ ಗೌರವಭರಿತ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದರು. ಅವರಲ್ಲಿ ಕೆಲವರು ಬ್ರಿಟಿಷ್ ಆಡಳಿತಕ್ಕೊಳಗಾದ ಭಾರತದಲ್ಲಿದ್ದ ಹಿಂದೂ ರಾಜರುಗಳ ದೇಶೀಯ ಸಂಸ್ಥಾನಗಳಿಗಿಂತ ಹಿರಿದಾದ ಭೂಭಾಗಗಳ ಒಡೆಯರಾಗಿದ್ದರು. ಅವರು

* ಮೌದೂದಿಯವರು ಉರ್ದು ಭಾಷೆಯಲ್ಲಿ ಬಳಸಿದ ಪದ "ಖಲ್‌ಬರಾನಿ" ಎಂದಾಗಿದೆ. ಅದರ ಅರ್ಥ ಉಳುವುದು ಎಂದು.

ಮುಸ್ಲಿಮ್ ಸಹಿಷ್ಣುತೆ ಮತ್ತು ಹಿಂದೂ ರಾಜ ಭಕ್ತಿಯ ಇಪ್ಪತ್ತನೆಯ ಶತಮಾನದ ಪ್ರತೀಕವಾಗಿದ್ದರು.

"ಹೈದರಾಬಾದಿನ ಸಂಸ್ಕೃತಿ ಭಾರತೀಯವಾಗಿದ್ದರೂ ಅದು ಹೆಚ್ಚಾಗಿ ಮುಸ್ಲಿಮ್ ಸಂಸ್ಕೃತಿಯಾಗಿತ್ತು. ಸಾಮಾಜಿಕ ವ್ಯವಸ್ಥೆ ಊಳಿಗೆ ಮಾನ್ಯ ಪದ್ಧತಿಯ ಹಾಗಿದ್ದರೂ ಅದು ಪ್ರಾಚೀನವೆಂದು ಹೇಳುವಂತಹದ್ದಾಗಿರಲಿಲ್ಲ. ಅದು ಸಾಮಾಜಿಕ ಶಿಷ್ಟಾಚಾರ ಭರಿತವಾಗಿ ಅತ್ಯಧಿಕ ಅಭಿವೃದ್ಧಿ ಹೊಂದಿತ್ತು. ಅಲ್ಲಿ ಸಹಿಷ್ಣುತೆ ಮತ್ತು ಪರಸ್ಪರ ಗೌರವಿಸುವಿಕೆ ಎಷ್ಟರ ಮಟ್ಟಿಗೆ ಇತ್ತೆಂದರೆ ನಾವು ಕಿವಿಗೊಡುವುದಾದರೆ ನಮ್ಮ ಕಾಲದ ಪೀಳಿಗೆಗೆ ಧಾರಾಳವಾಗಿ ಅದು ಕಲಿಸಿ ಕೊಡುವಂತಹದ್ದಾಗಿತ್ತು. "(The Days of the Beloved : Berkeley)

ಮೇಲೆ ವಿವರಿಸಿದಂತಹ ಹೈದರಾಬಾದ್ ಸಂಸ್ಥಾನದಲ್ಲಿ ಮೌದೂದಿಯವರ ವ್ಯಕ್ತಿತ್ವವು ರೂಪಿತವಾಯಿತು. ಅವರು ಸೂಕ್ಷ್ಮಗ್ರಾಹಿಯೂ ಬೇಗನೆ ಅನ್ಯರಿಂದ ಪ್ರಭಾವಿತರಾಗುವವರೂ ಆಗಿದ್ದರು. ಅವರು ತನ್ನ ಪತ್ರಕರ್ತ ಜೀವಿತವನ್ನು 1918ರಲ್ಲಿ ಬಿಜನೂರಿನ "ಮದೀನ" ಎಂಬ ಉರ್ದು ಪತ್ರಿಕೆಯ ಸಂಪಾದಕೀಯ ಮಂಡಳಿಯನ್ನು ಸೇರುವ ಮೂಲಕ ಆರಂಭಿಸಿದರು. ಅನಂತರ ಅವರು ಜಬಲಪುರದ "ತಾಜ್" ಪತ್ರಿಕೆಯ ಸಂಪಾದಕರಾಗಿ ಕೆಲಕಾಲ ಕಳೆದನಂತರ 1925ರಲ್ಲಿ ದೆಹಲಿಯ "ಅಲ್‌ಜಮೀಅತ್" ಪತ್ರಿಕೆಯ ಸಂಪಾದಕರಾದರು. ಆ ಕಾಲದಲ್ಲಿ ಶುದ್ಧಿ ಚಳುವಳಿಯು ಉತ್ತುಂಗ ಸ್ಥಿತಿಯಲ್ಲಿತ್ತು. ನಾವು ಈ ಮೊದಲು ಬರೆದ ಹಾಗೆ ಆ ಕಾಲದಲ್ಲಿ ಅಲ್‌ಜಮೀಅತ್ ಪತ್ರಿಕೆಯ ತರುಣ ಸಂಪಾದಕ ತನ್ನ ಸರಣಿ ಲೇಖನಗಳನ್ನು ಬರೆಯಲು ಪ್ರಾರಂಭಿಸಿದರು. ಅವರ ದೈನಂದಿನ ಕೆಲಸದ ಒತ್ತಡದಲ್ಲಿ ಅವರು ಲೇಖನಗಳನ್ನು ಬರೆದು ಆರು ತಿಂಗಳುಗಳಲ್ಲಿ ಆ ಸರಣಿಯನ್ನು ಮುಕ್ತಾಯಗೊಳಿಸಿದರು. ಮೌದೂದಿ ತನ್ನ ಲೇಖನಗಳನ್ನು ಬರೆದುದು ಮತಾಭಿಮಾನಕ್ಕಿಂತ ಮಿಗಿಲಾಗಿ ರಾಷ್ಟ್ರಾಭಿಮಾನದಿಂದಾಗಿತ್ತು. ಅವರು ಕ್ರಮಬದ್ಧ ಇಸ್ಲಾಮಿಕ ಶಿಕ್ಷಣ ಪಡೆದವರಾಗಿರಲಿಲ್ಲ. ಆರು ತಿಂಗಳ ಕಾಲದಲ್ಲಿ ಮಾಡಿದ ಇಸ್ಲಾಮಿಕ ಸಾಹಿತ್ಯದ ಅಧ್ಯಯನದಿಂದ ಅವರು ಧಾರ್ಮಿಕ ಪುನರುತ್ಥಾನವಾದಿಯಾದರು. ಮೌದೂದಿಯವರ ಅಲ್‌ಜಿಹಾದ್ ಫಿಲ್ ಇಸ್ಲಾಮ್ ಲೇಖನ ಸರಣಿ ತುಂಡು ತುಂಡಾಗಿದ್ದ ಹಾಗೆ ಅವರ ಚಿಂತನೆಯ ವಿಕಾಸವೂ ತುಂಡು ತುಂಡಾಗಿಯೇ ಆಯಿತು. ಅವರು ಲೇಖನದ ಸರಣಿ ಮಾಲಿಕೆಯನ್ನು ಒಬ್ಬ ರಾಷ್ಟ್ರಾಭಿಮಾನಿಯಾಗಿ ಬರೆಯಲಾರಂಭಿಸಿದರು. ಅವರ ಉದ್ದೇಶ ಲಕ್ಷ್ಯವು ಭಾರತದ ಹಿಂದುಗಳಿಗೆ ಮತ್ತು ವಿಶಿಷ್ಟವಾಗಿ ಗಾಂಧೀಜಿಯವರಿಗೆ ಇಸ್ಲಾಮ್ ಧರ್ಮವು ಹಿಂಸಾತ್ಮಕ ಧರ್ಮವಲ್ಲವೆಂದು ಸಾಬೀತುಗೊಳಿಸುವುದಾಗಿತ್ತು. ಭಾರತದ ಒಬ್ಬ ಹಿರಿಯ ಮುಸ್ಲಿಮ್ ನೇತಾರರಾಗಿದ್ದ ಮೌಲಾನ ಮುಹಮ್ಮದ್ ಅಲಿ ಜೌಹರ್‌ರವರು ದೆಹಲಿಯ ಜಾಮಿಯ ಮಸ್‌ಜಿದ್‌ನಲ್ಲಿ ಮಾಡಿದ ಒಂದು ಭಾಷಣದಲ್ಲಿ, "ಇಸ್ಲಾಮ್ ಧರ್ಮಕ್ಕೂ ಹಿಂಸಾಚಾರಕ್ಕೂ ಯಾವುದೇ ಸಂಬಂಧವಿಲ್ಲ ಎಂಬ ವಿಷಯದಲ್ಲಿ ಯಾರಾದರೊಬ್ಬ ಮುಸ್ಲಿಮ್ ಲೇಖಕನು ಪುಸ್ತಕ ಬರೆಯಬೇಕು" ಎಂಬ ಆಶಯವನ್ನು ಬಹಿರಂಗಪಡಿಸಿದ್ದರು. ಆ ಭಾಷಣವನ್ನು ಆಲಿಸಿದವರಲ್ಲಿ ತರುಣ ಮೌದೂದಿ ಸಹ ಇದ್ದರು. ಅವರು ಈ ವಿಷಯವನ್ನು ಕೈಗೆತ್ತಿಗೊಂಡು ಬರೆಯಲು ನಿರ್ಧರಿಸಿದರು.

(ಮುಹಮ್ಮದ್ ಯೂಸುಫ್‌ರವರು ಬರೆದ "ಮೌಲಾನ ಮೌದೂದಿ ಅಪ್ನೀ ಔರ್ ದೂಸ್ರೋಂಕಿ ನಝರ್ ಮೇಂ" ಎಂಬ ಗ್ರಂಥದಿಂದ ಮೌದೂದಿಯವರ ಕುರಿತು ವಿವರಣೆಗಳನ್ನು ಪಡೆಯಲಾಗಿದೆ.)

ಅವರು ತನ್ನ ಲೇಖನ ಸರಣಿಯ ಪ್ರಾರಂಭದಲ್ಲಿ ಇಸ್ಲಾಮ್ ಧರ್ಮವು ಖಡ್ಗದ ಧರ್ಮವಲ್ಲ ಎಂದು ಹಿಂದುಗಳಿಗೆ ಮನವರಿಕೆ ಮಾಡಿಕೊಡಲು ಯತ್ನಿಸಿದರು. ಆದರೆ ಈ ಸರಣಿ ಲೇಖನಗಳ ಲೇಖಕ ಹುಟ್ಟಿದುದು ಮತ್ತು ಪಾಲನೆ ಪೋಷಣೆ ಪಡೆದುದು ಮುಸ್ಲಿಮ್ ದೊರೆ ರಾಜ್ಯ ಭಾರ ಮಾಡುತ್ತಿದ್ದ ಹಿಂದುಗಳು ಬಹು ಸಂಖ್ಯೆಯಲ್ಲಿದ್ದ ಪ್ರಾಂತ್ಯದಲ್ಲಾಗಿತ್ತು.

ಹೈದರಾಬಾದ್ ಚರಿತ್ರೆ ಸಂಬಂಧಿಸಿ ಎರಡು ಪುಸ್ತಕಗಳನ್ನು ಬರೆದಿದ್ದ ಮೌದೂದಿ ರಾಜಕೀಯ ಅಧಿಕಾರದ ಶಕ್ತಿ ಸಾಮರ್ಥ್ಯಗಳಲ್ಲಿ ನೆನೆಯಿಸಲ್ಪಟ್ಟಿದ್ದರು. ಖಡ್ಗದ ಜಿಹಾದ್ ವಿರುದ್ಧ ಮಾಡಿದ ವಾದಗಳ ಕುರಿತು ಅವರು ತಡಮಾಡದೆ ಪ್ರತಿ ಹೇಳಲು ತೊಡಗಿದರು. ಹೈದರಾಬಾದ್ ನಿವಾಸಿಯಾಗಿದ್ದ ಈ ಮುಸ್ಲಿಮ್ ಹೇಳಿದರು: "ಇಸ್ಲಾಮಿನ ಪ್ರಚಾರದಲ್ಲಿ ಖಡ್ಗಕ್ಕೆ ಯಾವುದೇ ಪಾತ್ರವಿರಲಿಲ್ಲವೆಂದು ಹೇಳುವುದು ತಪ್ಪಾಗಿದೆ." ಆ ಯುವಕನಾದ ಪತ್ರಕರ್ತ ಚರಿತ್ರೆಗಾರನಾಗಲೀ ಧಾರ್ಮಿಕ ವಿದ್ವಾಂಸನಾಗಲೀ ಆಗಿರಲಿಲ್ಲ. ದಕ್ಷಿಣ ಭಾರತವನ್ನು ಆರು ನೂರು ವರ್ಷಗಳ ಕಾಲ ಮುಸ್ಲಿಮ್ ರಾಜವಂಶಗಳು ಆಳುತ್ತಾ ಇದ್ದರೂ ಇಲ್ಲಿನವರಲ್ಲಿ ಅಧಿಕಾಂಶ ಜನ ಹಿಂದುಗಳಾಗಿ ಉಳಿದರು. ಮುಸ್ಲಿಮರ ಕೈಯಲ್ಲಿದ್ದ ರಾಜಕೀಯ ಅಧಿಕಾರವು ಜನರನ್ನು ಇಸ್ಲಾಮ್ ಧರ್ಮಕ್ಕೆ ಪರಿವರ್ತಿಸಲು ಎಂದೂ ಸಹಾಯವಾಗಲಿಲ್ಲ. ಅಲ್‌ಜಿಹಾದ್ ಫಿಲ್ ಇಸ್ಲಾಮಿನ ಲೇಖಕ ಕೇವಲ 24 ವರ್ಷ ಪ್ರಾಯದ ವ್ಯಕ್ತಿಯಾಗಿದ್ದರು. ಇದೇ ವ್ಯಕ್ತಿ 65 ವರ್ಷ ಪ್ರಾಯದವನಾಗಿದ್ದಾಗ ಸಹ ಅವರ ಜ್ಞಾನವು ತಳಸ್ಪರ್ಶಿಯಾಗಿರಲಿಲ್ಲ. ಪ್ರೊಫೆಸರ್ ಫಝ್ಲುರ್ರಹ್ಮಾನ್ ಹೀಗೆ ಹೇಳುತ್ತಾರೆ:

"ಮೌದೂದಿ ಒಬ್ಬ ಆಲಿಮ್ (ಧಾರ್ಮಿಕ ವಿದ್ವಾಂಸ) ಆಗಿರದಿದ್ದರೂ ಅವರು ಸ್ವತಃ ವಿದ್ಯೆ ಕಲಿತ ಗಮನಾರ್ಹ ಬುದ್ಧಿಶಕ್ತಿ ಮತ್ತು ಸಾಕಷ್ಟು ಜ್ಞಾನವನ್ನು ಗಳಿಸಿದ ವ್ಯಕ್ತಿಯಾಗಿದ್ದರು. ಅವರು ನಿಖರವಾದ ಜ್ಞಾನಗಳಿಸಿದ ವಿದ್ವಾಂಸರಾಗಿರದ್ದರೂ ಸಾಂಪ್ರದಾಯಿಕ ಮದ್‌ರಸಗಳು ನಿರ್ಮಿಸಿದ ಉಸಿರುಗಟ್ಟಿಸುವ ಇಸ್ಲಾಮಿಕ ವಾತಾವರಣದಲ್ಲಿ ಅವರು ಹೊಸಗಾಳಿಯ ಹಾಗಿದ್ದರು........ ಜಗತ್ತಿನಲ್ಲಿ ಇಸ್ಲಾಮಿನ ಪಾತ್ರದ ಕುರಿತು ವಿಶಾಲವಾದ ಮತ್ತು ಅಗಾಧ ದರ್ಶನದ ಪ್ರಕಟಣೆಯನ್ನೇನೂ ನಾವು ಮೌದೂದಿ ಬರಹಗಳಲ್ಲಿ ಎಲ್ಲಿಯೂ ಕಾಣುವುದಿಲ್ಲ. ಧಾರ್ಮಿಕ ವಿದ್ವಾಂಸನಾಗಿರದ, ಆದರೆ ಪತ್ರಕರ್ತನಾಗಿದ್ದ ಮೌದೂದಿ ಬಹಳ ವೇಗವಾಗಿಯೂ ಸ್ವವಿಸ್ತಾರವಾಗಿಯೂ ಬರೆಯಬಲ್ಲವರಾಗಿದ್ದರು. ಆಸಕ್ತಿಯಿಂದ ಓದುತ್ತಿದ್ದ ಯುವ ವಾಚಕರಿಗಾಗಿ ಬರೆಯುತ್ತಿದ್ದ ಅವರ ಲೇಖನಗಳು ತಳ ಸ್ಪರ್ಶಿಯಾಗದಿದ್ದರೂ ಅವರು ನಿರಂತರವಾಗಿ ಬರೆಯುತ್ತಾ ಇದ್ದರು. .....ಮೌದೂದಿಯ ಯಾವನೇ ಒಬ್ಬ ಅನುಯಾಯಿ ಇಸ್ಲಾಮ್ ಧರ್ಮದ ಕುರಿತು ಗಾಢವಾಗಿ ಅಧ್ಯಯನ ಮಾಡುವವನಾಗಲಿಲ್ಲ. ಆದುದರಿಂದ

ಅವರಲ್ಲಿ ವಿಶ್ವಾಸವನ್ನು ಹೊಂದಿದವರಿಗೆ ಅವರ ಮಾತು ಇಸ್ಲಾಮಿನ ಕುರಿತು ಅಂತಿಮವಾದ ನಿರ್ಣಾಯಕ ಮಾತಾಯಿತು. ಆರ್ಥಿಕ ಧೋರಣೆ ಮತ್ತು ರಾಜಕೀಯ ಸಿದ್ಧಾಂತದಂತಹ ಮೂಲಭೂತ ತತ್ವಗಳ ಕುರಿತು ಮೌದೂದಿ ತನ್ನ ಮೊದಲಿನ ಅಭಿಪ್ರಾಯಗಳಿಗೆ ವಿರುದ್ಧವಾಗಿ ಹೇಳಿಕೆಯಿತ್ತರೂ ಅವರ ಅನುಯಾಯಿಗಳಿಗೆ ಮೌದೂದಿಯ ಮಾತೇ ಕೊನೆಯ ಮಾತಾಗಿತ್ತು." (Islam and Modernity - Transformation of an Intellectual Tradition - Page 116)

ದೆಹಲಿಯ ಮುಫ್ತೀ ಕಿಫಾಯತುಲ್ಲಾಹ್ ಸಹ ಇದೇ ಅಭಿಪ್ರಾಯ ಹೊಂದಿದ್ದರು. ಅವರು ಹೀಗೆ ಬರೆದರು: "ಮೌಲಾನ ಅಬುಲ್ ಆಲಾ ಮೌದೂದಿ ಬಗ್ಗೆ ನನಗೆ ಗೊತ್ತು. ಯಾವುದೇ ಪ್ರಸಿದ್ಧ ವಿದ್ವಾಂಸರಿಂದ ಅವರು ವಿದ್ಯೆಯನ್ನಾಗಲಿ ಶಿಸ್ತನ್ನಾಗಲಿ ಕಲಿತಿಲ್ಲ. ಅವರು ಬಹಳ ಗ್ರಂಥಗಳನ್ನು ಓದಿದವರಾಗಿದ್ದರೂ ಧರ್ಮದ ಕುರಿತು ಅವರ ಜ್ಞಾನವು ಬಲಹೀನವಾಗಿದೆ." (ಮೌದೂದಿ ಸಾಹಿಬ್ ಅಕಾಬಿರೆ ಉಮ್ಮತ್ ಕಿ ನಝುರ್ ಮೇಂ)

ಮೌಲಾನ ಹುಸೈನ್ ಅಹ್ಮದ್ ಮದನಿ ಮೌದೂದಿ ಸಿದ್ಧಾಂತಗಳ ಅಪಾಯಗಳನ್ನು ಮುಂದಾಗಿ ಮನವರಿಕೆ ಮಾಡಿ ಸ್ಪಷ್ಟವಾಗಿ ಹೀಗೆ ಹೇಳಿದರು:

"ಮೌದೂದಿಯ ಕರಪತ್ರಗಳೂ ಪುಸ್ತಕಗಳೂ ಅಧಾರ್ಮಿಕ ಅಭಿಪ್ರಾಯಗಳನ್ನೂ ಪಾಷಂಡ ವಾದಗಳನ್ನೂ ಹೊಂದಿವೆಯಾದರೂ ಅವುಗಳನ್ನು ಧಾರ್ಮಿಕ ಲೇಖನಗಳ ಶೈಲಿಯಲ್ಲಿ ಬರೆಯಲಾಗಿದೆ. ಇದನ್ನು ಸಾಮಾನ್ಯ ಓದುಗನಿಗೆ ಕಾಣಲು ಸಾಧ್ಯವಿಲ್ಲ. ಇದರ ಫಲವಾಗಿ ಮುಸ್ಲಿಮ್ ಸಮುದಾಯ 1350 ವರ್ಷಗಳಿಂದ ಅನುಸರಿಸಿಕೊಂಡು ಬರುತ್ತಿರುವ ಪ್ರವಾದಿ(ಸ) ಬೋಧಿಸಿದ ಇಸ್ಲಾಮ್ ಧರ್ಮ ಮೌದೂದಿಯ ಅನುಯಾಯಿಗಳ ದೃಷ್ಟಿಯಲ್ಲಿ ಅಸಂಗತವಾಗಿರುತ್ತದೆ." (ಮೇಲಿನ ಅದೇ ಪುಸ್ತಕ - ಪುಟ 9)

ಮೌಲಾನ ಖಾರಿ ಮುಹಮ್ಮದ್ ತಯ್ಯಿಬ್ ಒಂದು ಪತ್ರದಲ್ಲಿ ಹೀಗೆ ಬರೆದರು: "ಮೌದೂದಿ ಸಾಹೇಬರ ಬರಹಗಳನ್ನು ಓದಿದ ನಂತರ ನಾನು ಹೀಗೆ ತಿಳಿದುಕೊಂಡೆನು: ಅವರು ಇಸ್ಲಾಮ್ ಧರ್ಮದ ನ್ಯಾಯದಾನ ವ್ಯವಸ್ಥೆ ಮತ್ತು ಧಾರ್ಮಿಕ ರಹಸ್ಯ ಜ್ಞಾನದ ಕುರಿತು ಚೆನ್ನಾಗಿ ತಿಳಿದುಕೊಂಡಿಲ್ಲ. ಅವರು ಆ ಬಗ್ಗೆ ಅಧಿಕವಾಗಿ ಬರೆಯಲು ಸಮರ್ಥರಲ್ಲ." (ಅದೇ ಪುಸ್ತಕ - ಪುಟ 15)

ಮೌಲಾನ ಅಹ್ಮದ್ ಅಲಿ ಲಾಹೋರಿ ಸಹ ಮೇಲಿನ ಅಭಿಪ್ರಾಯವನ್ನು ಅಂಗೀಕರಿಸುವ ರೀತಿಯಲ್ಲಿ ಹೀಗೆ ಬರೆದರು:

"ಮೌದೂದಿ ಸಾಹೇಬರು ಮುಸ್ಲಿಮರಿಗೆ ಹೊಸದಾದೊಂದು ಇಸ್ಲಾಮನ್ನು ತೋರಿಸಲು ಬಯಸುತ್ತಾರೆ. ಆದರೆ ಮುಸ್ಲಿಮರು 1350 ವರ್ಷಗಳಿಂದ ಅನುಸರಿಸಿಕೊಂಡು ಬರುತ್ತಿರುವ ಇಸ್ಲಾಮ್ ನಾಶವಾಗದೆ ಮತ್ತು ಅದು ಅಸಂಗತವೂ ಅಪ್ರಾಯೋಗಿಕವೂ ಆಗಿದೆ ಎಂದು ಸಾಬೀತುಗೊಳಿಸಲ್ಪಡುವ ತನಕ ಮುಸ್ಲಿಮರು ಹೊಸ ಇಸ್ಲಾಮನ್ನು ಅಂಗೀಕರಿಸಲಾರರು." (ಅದೇ ಪುಸ್ತಕ - ಪುಟ 48)

ಮೌಲಾನ ಮೌದೂದಿ ನಾವು ಈ ಮೊದಲು ಬರೆದ ಹಾಗೆ ಒಬ್ಬ ಚರಿತ್ರೆಗಾರನಾಗಲೀ ಧಾರ್ಮಿಕ ವಿದ್ವಾಂಸನಾಗಲೀ ಆಗಿರಲಿಲ್ಲ. ಅವರು ಮೂಲತಃ ಪತ್ರಕರ್ತರಾಗಿದ್ದರು. ಪತ್ರಕರ್ತನಿಗೆ ಆವಶ್ಯಕವಾದ ಎರಡು ಮೂಲಭೂತ ಸಾಮರ್ಥ್ಯಗಳು ಅವರಿಗಿದ್ದವು. ಅವರು ಉರ್ದು ಭಾಷೆಯಲ್ಲಿ ಪ್ರವೀಣರಾಗಿದ್ದರು. ಅವರು ಬೇಗ ಬೇಗನೆ ವಿಸ್ತಾರವಾಗಿ ಬರೆಯ ಬಲ್ಲವರಾಗಿದ್ದರು. ಅವರು ಸಂಪಾದಕರಾಗಿದ್ದ ಕಾಲದಲ್ಲಿ ಅಲ್‌ಜಮೀಅತ್ ಪತ್ರಿಕೆ ದೈವಾರಿಕೆಯಾಗಿತ್ತು. ಅವರು ಜಿಹಾದ್ ಕುರಿತು ತನ್ನ ಅಂಕಣವನ್ನು 2-3 ದಿನಗಳೊಳಗೆ ಬರೆಯಬೇಕಾಗಿದ್ದಿತು ಮತ್ತು ಪತ್ರಿಕೆಯ ಸಂಪಾದಕೀಯಕ್ಕೆ ಸಂಬಂಧಿಸಿ ಇತರ ಕೆಲಸಗಳನ್ನು ಮಾಡಬೇಕಾಗಿತ್ತು. ಅವರಿಗೆ ಸಂಶೋಧನೆ ಮಾಡುವ ಹಿನ್ನಲೆಯಿರಲಿಲ್ಲ. ಅದಕ್ಕೆ ಆವಶ್ಯಕವಾದ ಸಮಯಾನುಕೂಲತೆಯೂ ಅವರಿಗಿರಲಿಲ್ಲ. ಮಕ್ಕವನ್ನು ಜಯಿಸಿದ ನಂತರ (ಜನವರಿ 11, 630) ಪ್ರವಾದಿ(ಸ) ಭಾಗವಹಿಸಿದ ಹುನೈನ್ ಯುದ್ಧವನ್ನು (ಜನವರಿ 30, 630) ಮೌದೂದಿ ಸಾಹೇಬರು ಇಸ್ಲಾಮಿಕ ಚರಿತ್ರೆಯಲ್ಲಿ ಒಂದು ತಿರುವಿನ ಘಟನೆಯಾಗಿ ಪರಿಗಣಿಸಿದರು. ಹುನೈನ್ ಯುದ್ಧದಲ್ಲಿ ಇಸ್ಲಾಮಿನ ಶತ್ರುಗಳು ಸಂಪೂರ್ಣವಾಗಿ ಪರಾಜಿತರಾದುದರಿಂದ ಮೌಲಾನ ಮೌದೂದಿ, ಹುನೈನ್ ಯುದ್ಧದ ಪರಿಣಾಮವಾಗಿ ಗಳಿಸಲಾದ ಜಯ ಮತ್ತು ರಾಜಕೀಯ ಶಕ್ತಿಯು ಅರಬ್ ದೇಶವನ್ನು ಸಂಪೂರ್ಣವಾಗಿ ಇಸ್ಲಾಮ್ ಧರ್ಮಕ್ಕೆ ಪರಿವರ್ತಿಸಲು ಸಹಾಯಕವಾಯಿತು ಎಂದು ಅಭಿಪ್ರಾಯಪಟ್ಟರು. ಈ ರೀತಿಯ ಅಭಿಪ್ರಾಯ ಇದ್ದುದು ಮೌಲಾನ ಮೌದೂದಿ ಒಬ್ಬರಿಗೆ ಮಾತ್ರವಲ್ಲ. ಇಸ್ಲಾಮಿನ ತತ್ವಗಳಲ್ಲಿ ಯಾವುದೇ ನೈತಿಕ ಅಥವಾ ಆಧ್ಯಾತ್ಮಿಕ ಶಕ್ತಿಯನ್ನು ಗುರುತಿಸದ ಮತ್ತು ಹಝ್ರತ್ ಪೈಗಂಬರ್(ಸ) ತೋರಿಸಿದ ಅದ್ಭುತ ದೃಷ್ಟಾಂತಗಳನ್ನು ಅರ್ಥ ಮಾಡಿಕೊಳ್ಳಲು ಅಸಮರ್ಥರಾಗಿದ್ದ ಪೌರಸ್ತ್ಯ ಶಾಸ್ತ್ರ ಮತ್ತು ಸಂಸ್ಕೃತಿಗಳ ವಿದ್ವಾಂಸರು(Orientalists) ಇಸ್ಲಾಮ್ ಧರ್ಮದ ಹರಡುವಿಕೆಗೆ ಬಲ ಪ್ರಯೋಗವೇ ಕಾರಣವೆಂದು ಯಾವಾಗಲೂ ಹೇಳುತ್ತಾ ಇರುವರು. ಆ ಶಾಸ್ತ್ರಜ್ಞರು ಪ್ರವಾದಿಯವರ(ಸ) ಜೀವಿತವನ್ನು ಎರಡು ವಿಭಾಗಗಳಾಗಿ ವಿಭಜಿಸಿದ್ದಾರೆ. ಮೊದಲನೆಯದು, ಮಕ್ಕದ ಜೀವಿತದಲ್ಲಿ ಶತ್ರುಗಳಿಂದ ಪೀಡನೆಗಳನ್ನು ಅನುಭವಿಸಿದ ಕಾಲ. ಎರಡನೆಯದು, ಮದೀನಕ್ಕೆ ವಲಸೆ ಹೋದ ನಂತರದ ವಿಜಯದ ಕಾಲ. ಇಸ್ಲಾಮಿಕ ಚರಿತ್ರೆಯ ಬಾಹ್ಯ ಜ್ಞಾನವನ್ನು ಗಳಿಸಿದ ಯುವ ಪತ್ರಕರ್ತನಾದ ಅಬುಲ್‌ಆಲಾ ಮೌದೂದಿಯವರ ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರು ಚಾತುರ್ಯದಿಂದ ರೂಪಿಸಿದ್ದ ಪ್ರವಾದಿಯವರ(ಸ) ಜೀವಿತದ ಸರಳ ವಿಭಜನೆಯನ್ನು ಅಂಗೀಕರಿಸಿದರು.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮದೀನಕ್ಕೆ ವಲಸೆ ಹೋದ ನಂತರ ಶತ್ರುಗಳಿಂದ ಯುದ್ಧ ಮತ್ತು ಯುದ್ಧ ಬೆದರಿಕೆಗಳನ್ನು ನಿರಂತರವಾಗಿ ಎದುರಿಸಬೇಕಾಗಿತ್ತು. ಮಕ್ಕದ ಬಹುದೈವಾರಾಧಕರೂ ಮದೀನದ ಯಹೂದಿಗಳೂ ಕಪಟ ವಿಶ್ವಾಸಿಗಳಿಂದ ಉತ್ತೇಜಿಸಲ್ಪಟ್ಟು ಇಸ್ಲಾಮಿನ ವಿರುದ್ಧ ಗೂಢತಂತ್ರಗಳನ್ನು ರೂಪಿಸುವುದರಲ್ಲಿ ನಿರತರಾಗಿದ್ದರು. ಅವರು ಮುಸ್ಲಿಮರ ವಿರುದ್ಧ ದ್ವೇಷವನ್ನು ಪ್ರೋತ್ಸಾಹಿಸಿ ಅರಬ್ ದೇಶದ ಬಹುದೇವಾರಾಧಕರು ಪೈಗಂಬರರನ್ನು(ಸ) ಆಕ್ರಮಿಸುವಂತೆ

ಪ್ರೇರೇಪಿಸುತ್ತಿದ್ದರು. ಮುಸ್ಲಿಮರು ಆತ್ಮರಕ್ಷಣೆಗಾಗಿ ಕೈಗೊಳ್ಳಲು ನಿರ್ಬಂಧಿಸಲ್ಪಟ್ಟ ಕಾರ್ಯಕ್ರಮಗಳು ಯಥಾರ್ಥವಾಗಿ ಪೈಗಂಬರರ(ಸ) ಮೂಲಭೂತ ಉದ್ದೇಶ ಲಕ್ಷ್ಯವನ್ನು ಈಡೇರಿಸುವುದನ್ನು ತಡೆಗಟ್ಟಿತು. ಮುಸ್ಲಿಮರಿಗೆ ಶಾಂತಿಯು ಆವಶ್ಯಕವಾಗಿತ್ತು. ಆದರೆ ಇಸ್ಲಾಮಿನ ಶತ್ರುಗಳು ಹೊಸ ಧರ್ಮದ ಪ್ರಸಾರವನ್ನು ತಡೆಯಲಿಕ್ಕಾಗಿ ಉದ್ದೇಶಪೂರ್ವಕವಾಗಿ ಶಾಂತಿಭಂಗಮಾಡಿದರು. ಅದು ಹೇಗೆಂದು ಪರೀಕ್ಷಿಸೋಣ:

1. ಇಸ್ಲಾಮಿನ ಶತ್ರುಗಳು ಆ ಕಾಲದಲ್ಲಿ ಲಭ್ಯವಿದ್ದ ಎಲ್ಲಾ ಸಂಪರ್ಕ ವ್ಯವಸ್ಥೆಗಳನ್ನು ಇಸ್ಲಾಮಿನ ವಿರುದ್ಧ ಪ್ರಚಾರಕ್ಕಾಗಿ ಬಳಸುತ್ತಿದ್ದರು. ಅರಬಿಗಳಿಗೆ ಕವಿಗಳು ಚರಿತ್ರೆಗಾರರೂ ವಂಶವೃಕ್ಷಗಳನ್ನು ಬರೆಯುವವರೂ ವಿಡಂಬನೆಗಾರರೂ ನೀತಿ ಬೋಧಕರೂ ಬುದ್ಧಿಶಾಲಿಗಳೂ ಆಗಿದ್ದರು.[1] ಕವಿ ಯುದ್ಧವನ್ನು ಬಡಿದೆಬ್ಬಿಸುವವನಾಗಿದ್ದನು.[2] ಅವನು ಆ ಕಾಲದ ಪತ್ರಕರ್ತನೂ ಆಗಿದ್ದನು.[3]

ಮದೀನದಲ್ಲಿ ಇಸ್ಲಾಮ್ ಧರ್ಮ ಸ್ವೀಕರಿಸಿದವರು (ಅನ್‌ಸಾರ್) ಒಬ್ಬ ಹೊರಗಿನ ವ್ಯಕ್ತಿಗೆ ಗೌರವ ನೀಡಿ ತಮ್ಮನ್ನು ತಾವೇ ಅಪಮಾನಕ್ಕೆ ಗುರಿಪಡಿಸಿದರೆಂದು ಅವರು ದೂಷಿಸುತ್ತಿದ್ದರು. ಅಸ್‌ಮಾ ಬಿನ್‌ತ್ ಮರ್‌ವಾನ್ ಎಂಬ ಕವಯಿತ್ರಿ ಪದ್ಯವನ್ನು ರಚಿಸಿ ಮದೀನದ ಮುಸ್ಲಿಮರನ್ನು ನಿಂದಿಸಿ ಅಪಮಾನಿಸುತ್ತಿದ್ದಳು. ಒಂದು ಪದ್ಯದಲ್ಲಿ ಅವಳು ಹೀಗೆ ಹೇಳುತ್ತಾಳೆ:

"ಮಲಿಕ್ ಮತ್ತು ನಬಿತ್ ಗೊತ್ರದ ಹೇಡಿಗಳೇ, ಔಫ್ ಮತ್ತು ಖಝ್‌ರಜ್ ಗೋತ್ರದ ಹೇಡಿಗಳೇ, ನೀವು ನಿಮ್ಮವನಲ್ಲದ ಒಬ್ಬ ಆಗಂತುಕನನ್ನು ಅನುಸರಿಸುತ್ತಿರುವಿರಿ. ಆ ವ್ಯಕ್ತಿ ಯಮನಿನ ಮುರಾದ್ ಗೋತ್ರದವನೋ ಮದ್‌ಹಿಜ್ ಗೋತ್ರದವನೋ ಅಲ್ಲ. ನಿಮ್ಮ ನಾಯಕರೇ ಕೊಲ್ಲಲ್ಪಟ್ಟಿರುವಾಗ ನೀವು ಅವನಿಂದ ಏನನ್ನಾದರೂ ಪ್ರತೀಕ್ಷಿಸುವುದು ಬೇಯಿಸಲಾಗುತ್ತಿರುವ ಅನ್ನದ ಪಾತ್ರೆಯನ್ನು ನೋಡುತ್ತಿರುವ ಅತಿ ಹಸಿವಿನ ಜನರ ಹಾಗಿದೆ. ಯಾವುದೇ ರಕ್ಷಣೆಯ ವ್ಯವಸ್ಥೆಯಿಲ್ಲದ ಕ್ಷಣವನ್ನು ಸದುಪಯೋಗಪಡಿಸಿಕೊಂಡು ಆ ವಂಚಕನ ಆಶಾಭಿಲಾಷೆಗಳನ್ನು ಕಡಿದು ಹಾಕಬಲ್ಲ ಗೌರವಾನ್ವಿತನಾದೊಬ್ಬನೂ ನಿಮ್ಮ ಪೈಕಿ ಇಲ್ಲವೇ?"[4]

ಖಝ್‌ರಜ್ ಗೋತ್ರದ ಶತಾಯು ಅಬೂ ಅಫಕ್ ಎಂಬ ಕವಿ ಮದೀನದ ಮುಸ್ಲಿಮರನ್ನು ಹೀಗೆ ಮೂದಲಿಸುತ್ತಾ ಹಾಡಿದನು:

"ನಾನು ಬಹಳ ಕಾಲ ಜೀವಿಸಿದೆನು. ಆದರೆ ಖೈಲ ಸಂತತಿಗಳು (ಔಸ್ ಮತ್ತು ಖಝ್‌ರಜ್ ಗೋತ್ರಗಳು) ಒಗ್ಗಟ್ಟಿನಿಂದ ತಮ್ಮ ಮಿತ್ರರನ್ನು ಅವರು ಸಹಾಯಕ್ಕೆ ಕರೆದಾಗ ಸಹಾಯಕ್ಕೆ ಧಾವಿಸುವ ರೀತಿಯಲ್ಲಿ ಬೇರೆ ಯಾರನ್ನೂ ಕಂಡಿಲ್ಲ. ಅವರು ಸೋಲನ್ನೊಪ್ಪುವ ಮೊದಲು ಪರ್ವತಗಳು ಪುಡಿ ಪುಡಿಯಾಗುವುವು. ಆದರೆ ಈಗ ಒಬ್ಬ ಸವಾರನು ಬಂದು ಅವರಲ್ಲಿ ಒಡಕನ್ನುಂಟು ಮಾಡಿದ್ದಾನೆ. ಅವನು ಹೇಳುತ್ತಾನೆ: 'ಇದನ್ನು ಅನುಮತಿಸಲಾಗಿದೆ; ಇದನ್ನು ನಿಷಿದ್ಧಗೊಳಿಸಲಾಗಿದೆ.' ಅವನು ಎಲ್ಲಾ ವಸ್ತುಗಳನ್ನು ಹೀಗೆ ವಿಭಜಿಸುತ್ತಾನೆ. ನೀವು ಶಕ್ತಿ ಸಾಮರ್ಥ್ಯಗಳಲ್ಲಿ ನಂಬಿಕೆ ಹೊಂದಿರುವಿರಾದರೆ ನೀವು ತುಬ್ಬ ಅರಸರಿಗೆ ಏಕೆ ವಿಧೇಯರಾಗಲಿಲ್ಲ?"[5]

ದಕ್ಷಿಣ ಅರಬಸ್ಥಾನದ ಪ್ರಸಿದ್ಧ ಅರಸರನ್ನು ತುಬ್ಬ ಎಂದು ಕರೆಯುತ್ತಿದ್ದರು. ಕವಿ ಅಫಕ್ ಉದ್ದೇಶಿಸಿದುದು, "ನೀವು ತುಬ್ಬ ಅರಸರನ್ನು ಎದುರಿಸಿರಿ. ಈಗ ನೀವು ಮಕ್ಕದ ಒಬ್ಬ ನಿರಾಶ್ರಿತನ ವಾದಗಳನ್ನು ಅಂಗೀಕರಿಸಿದುದಾದರೂ ಹೇಗೆ?" ಎಂದಾಗಿತ್ತು.

ಅಸ್ಮಾ ಮತ್ತು ಅಬೂ ಅಫಕ್ ಮದೀನದ ಮುಸ್ಲಿಮರನ್ನು ಕೆಣಕುತ್ತಾ ಇದ್ದಾಗ ಯಹೂದಿಯನಾದ ಕವಿ ಕಅಬ್ ಬಿನ್ ಅಲ್ ಅಶ್‌ರಫ್ ಮಕ್ಕಕ್ಕೆ ಹೋಗಿ ಖುರೈಶ್ ಗೋತ್ರದವರನ್ನು ಪೈಗಂಬರರ(ಸ) ವಿರುದ್ಧ ಉತ್ತೇಜಿಸುತ್ತಿದ್ದನು. ಬದ್ರ್ ಯುದ್ಧದಲ್ಲಿ ಮುಸ್ಲಿಮರು ಜಯಶಾಲಿಗಳಾದುದರಿಂದ ಅವನು ಕೋಪಾವಿಷ್ಟನಾಗಿದ್ದನು. ಅರಬಿಗಳಿಗೆ ಸೇಡು ತೀರಿಸುವಿಕೆಯ ಹಂಬಲವಿರುವುದನ್ನು ಅವನು ತನ್ನ ಉದ್ದೇಶದ ಈಡೇರಿಕೆಗೆ ಬಳಸಲು ಬಯಸಿದನು. ಅವನು ಒಂದು ಪದ್ಯದಲ್ಲಿ ಹೀಗೆ ಹೇಳುತ್ತಾನೆ:

"ಬದ್ರ್ ಗಿರಣಿ ಅದರ ಜನರ ರಕ್ತವನ್ನು ಹೊರ ಚೆಲ್ಲುತ್ತಿದೆ. ಬದ್ರ್‌ನಂತಹ ಸನ್ನಿವೇಶಗಳಲ್ಲಿ ನೀವು ಅಳುತ್ತಾ ಕಿರುಚುತ್ತಾ ಇರಬೇಕು. ಶ್ರೇಷ್ಠ ಜನರು ತಮ್ಮ ಕೊಳಗಳ ಸುತ್ತಲೂ ಕೊಲ್ಲಲ್ಪಟ್ಟರು. ರಾಜಕುಮಾರರನ್ನು ಸತ್ತು ಬಿದ್ದಲ್ಲಿಯೇ ಬಿಡಲಾಯಿತೆಂಬುದು ವಿಚಿತ್ರವೆಂದು ನಿಮಗೆ ತೋಚುವುದಿಲ್ಲವೇ? ಎಷ್ಟು ಪ್ರತಿಷ್ಠಿತ, ಸುಂದರ ಪುರುಷರು, ಆಶ್ರಯವಿಲ್ಲದ ಜನರ ಆಶ್ರದಾತರು, ಉದಾರಿಗಳು ನಕ್ಷತ್ರಗಳು ಮಳೆ ಸುರಿಸದ ಆ ದಿನ ಕೊಲ್ಲಲ್ಪಟ್ಟರು." (ಇಬ್ನು ಹಿಶಾಮ್ ಬರೆದ "ಸೀರತ್" ನೋಡಿರಿ)

2. ಸೇಡು ತೀರಿಸುವಿಕೆ ಅಥವಾ ಪ್ರತೀಕಾರ ಮಾಡುವುದು ಇಸ್ಲಾಮಿಗಿಂತ ಹಿಂದಿನ ಕಾಲದ ಅರಬ್ ಸಮಾಜದ ಸ್ತಂಭಗಳಲ್ಲಿ ಒಂದಾಗಿತ್ತು. ಒಬ್ಬ ಬಹುದೈವಾರಾಧಕನು ಯುದ್ಧದಲ್ಲಿ ಒಬ್ಬ ಮುಸ್ಲಿಮನಿಂದ ಕೊಲ್ಲಲ್ಪಟ್ಟರೆ ಆ ಕೊಲ್ಲಲ್ಪಟ್ಟವನ ವಾರೀಸುದಾರರು ಸೇಡು ತೀರಿಸುವ ಪ್ರತಿಜ್ಞೆ ಮಾಡುತ್ತಿದ್ದರು ಮತ್ತು ಕೊಲ್ಲಲ್ಪಟ್ಟವನ ಗೋತ್ರದ ಎಲ್ಲಾ ಜನರು ಆತನ ಹತ್ಯೆಗೆ ಇಸ್ಲಾಮನ್ನು ದೂಷಿಸುತ್ತಿದ್ದರು. ಯುದ್ಧ ಮತ್ತು ಸಂಘರ್ಷಗಳು ಬಹು ದೈವಾರಾಧಕರಿಂದಲೇ ಆರಂಭಿಸಲ್ಪಟ್ಟವು ಎಂಬ ವಾಸ್ತವಿಕಾಂಶವನ್ನು ತಮ್ಮ ಅನುಕೂಲಕ್ಕಾಗಿ ಅವರು ಮರೆತು ಬಿಡುತ್ತಿದ್ದರು.

3. ಸಾರ್ವತ್ರಿಕವಾದ ವಿರೋಧದ ಕಾರಣದಿಂದ ಪ್ರವಾದಿಯವರ(ಸ) ಧಾರ್ಮಿಕ ಚಟುವಟಿಕೆಗಳು ಅರಬ್ ದೇಶದ ಒಂದು ಚಿಕ್ಕ ಪ್ರದೇಶಕ್ಕೆ ಸೀಮಿತವಾಗಿತ್ತು. ಧರ್ಮ ಪ್ರಚಾರಕರಿಗೆ ಇಸ್ಲಾಮಿನ ಸಂದೇಶವನ್ನು ಅರಬ್ ಪರ್ಯಾಯ ದ್ವೀಪದ ಎಲ್ಲಾ ಪ್ರದೇಶಗಳಿಗೆ ತಲುಪಿಸಲು ಸಾಧ್ಯವಾಗಲಿಲ್ಲ.

4. ಅನೇಕ ಅರಬಿಗಳು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದರೂ ಯುದ್ಧದ ಹೆದರಿಕೆಯಿಂದ ಅದನ್ನು ಬಹಿರಂಗಪಡಿಸುತ್ತಿರಲಿಲ್ಲ.

1. The Age of Faith - Page 159
2. The shaping of Arabs; A study in Ethnic Identity - Page 38
3. Mohammed : by Maxime Rodinson - Page 194
4 & 5. ಕಿತಾಬ್ ಸೀರತ್ ರಸೂಲುಲ್ಲಾಹ್ : ಇಬ್ನು ಹಿಶಾಮ್ - ಪುಟ 995-6

5. ಹೊಸ ಧರ್ಮಕ್ಕೆ ಪರಿವರ್ತನೆ ಹೊಂದಲು ಅದರ ಬಗ್ಗೆ ಬದ್ಧತೆ ಮತ್ತು ಧೈರ್ಯ ಆವಶ್ಯಕವಾಗಿದೆ. ಗೌರವಕ್ಕೆ ಮತ್ತು ಜೀವಕ್ಕೆ ಅಪಾಯವಿರುವ ಕಾಲದಲ್ಲಿಯೂ ಇವು ಆವಶ್ಯಕವಾಗಿದೆ. ಇಲ್ಲಿ ಇಸ್ಲಾಮನ್ನು ಅಂಗೀಕರಿಸುವುದು ಒಂದು ಧಾರ್ಮಿಕ ಸಂಘವನ್ನು ಸೇರುವುದಕ್ಕಿಂತ ಹೆಚ್ಚಿನ ಹೊಣೆಗಾರಿಕೆಯನ್ನು ಆವಶ್ಯಪಡುತ್ತಿತ್ತು. ಹೊಸ ಧರ್ಮದ ಸ್ವೀಕಾರದೊಂದಿಗೆ ಆತ್ಮರಕ್ಷಣೆಗಾಗಿ ಆಯುಧವನ್ನು ಕೈಗೆತ್ತಿಕೊಳ್ಳುವುದು ಅನಿವಾರ್ಯವಾಯಿತು. ಆ ಕಾಲದಲ್ಲಿ ಮುಸ್ಲಿಮರು ಶಸ್ತ್ರಸಜ್ಜಿತರಾದರೂ ಬಲಹೀನರೂ ಆಗಿದ್ದುದರಿಂದ ಅವರ ಜೊತೆ ಸೇರುವುದು ಆತ್ಮಹತ್ಯೆಗೆ ಸಮವಾಗಿತ್ತು.

6. ಆ ಕಾಲದಲ್ಲಿ ಮುಸ್ಲಿಮರು ಆತ್ಮ ರಕ್ಷಣೆಯಲ್ಲಿ ನಿರತರಾಗಿದ್ದ ಕಾರಣದಿಂದ ಧರ್ಮ ಪ್ರಚಾರಕ್ಕಾಗಿ ಅವರಿಗೆ ಬಹಳ ಕಡಿಮೆ ಸಮಯ ದೊರಕುತ್ತಿತ್ತು.

ಮೇಲೆ ನಾವು ಪ್ರಸ್ತಾಪಿಸಿದ ವಿಚಾರ ಸರಿಯಾದುದಾಗಿದ್ದರೆ ಯುದ್ಧಗಳ ಕೊನೆಗೊಳ್ಳುವಿಕೆಯು ಇಸ್ಲಾಮಿನ ಹರಡುವಿಕೆಗೆ ಕೂಡಲೇ ಉತ್ತೇಜನ ನೀಡಬೇಕಾಗಿರುತ್ತಿತ್ತು. ಹೀಗೆಯೇ ಸಂಭವಿಸಿತು. ಅದನ್ನು ನಾವು ಮುಂದೆ ವಿವರಿಸಲಿದ್ದೇವೆ.

ಮಕ್ಕವು 630ರ ಜನವರಿಯಲ್ಲಿ ಜಯಸಲ್ಪಟ್ಟಿತು. ಓರಿಯೆಂಟಲಿಸ್ಟರ ಮತ್ತು ಇಸ್ಲಾಮಿನ ಶತ್ರುಗಳ ಪ್ರಕಾರ ಇಸ್ಲಾಮಿನ ಗತಿಯನ್ನು ಬದಲಾಯಿಸಿದ ಘಟನೆ ಅದಾಗಿತ್ತು. ಅವರ ಮಾತು ಸತ್ಯವಾದುದಾಗಿದ್ದರೆ ಇಸ್ಲಾಮಿನ ಪ್ರಚಾರದಲ್ಲಿ ಖಡ್ಗವು ಪಾತ್ರವಹಿಸಿದ್ದಿತೆಂದು ನಿಶ್ಚಯವಾಗಿಯೂ ಹೇಳಬಹುದಾಗಿತ್ತು. ಆದರೆ ಇಸ್ಲಾಮಿನ ಚರಿತ್ರೆಯ ವಾಸ್ತವಿಕಾಂಶಗಳು ಬೇರೆಯೇ ಕಥೆ ಹೇಳುತ್ತವೆ. ಮುಸ್ಲಿಮರ ಮತ್ತು ಅರಬಿ ಬಹುದೈವಾರಾಧಕರ ಮಧ್ಯೆ ಸಂಘರ್ಷಗಳು ಹುದೈಬಿಯಾ ಸಂಧಿ (ಮಾರ್ಚ್ 628)ಯ ನಂತರ ಕೊನೆಗೊಂಡಿತು.

ಆ ಸಂಧಿಯ ಶರತ್ತುಗಳು ಎಷ್ಟು ತೇಜೋಭಂಗಕರವಾಗಿ ತೋರಿತೆಂದರೆ ಉಮರ್(ರ) ಅದನ್ನು ಸಹಿಸಲಾರದೆ ಪೈಗಂಬರರೊಡನೆ(ಸ) ಹೇಳಿದರು: "ನಮ್ಮ ಧರ್ಮದ ಗೌರವಕ್ಕೆ ಚ್ಯುತಿಯಾಗುವ ರೀತಿಯಲ್ಲಿ ನಾವು ಇಷ್ಟು ತಗ್ಗಿ ವರ್ತಿಸುವ ಆವಶ್ಯವಾದರೂ ಏನು?" ಮಕ್ಕದ ಜನರು ತಾವು ಜಯಶಾಲಿಗಳಾದೆವೆಂದು ಭಾವಿಸಿದರು. ಆದರೆ ಯುದ್ಧರಾಹಿತ್ಯದ ಕಾರಣದಿಂದ ದೊರೆತ ಬಿಡುವು ಪೈಗಂಬರರಿಗೆ(ಸ) ಧರ್ಮ ಪ್ರಚಾರಕ್ಕೆ ಹೆಚ್ಚಿನ ಸಮಯವನ್ನು ಒದಗಿಸಿಕೊಟ್ಟಿತು. ಅವರಿಗೆ ಆ ವಿಷಯದಲ್ಲಿ ದೊರೆತ ವಿಜಯವನ್ನು ಅವರು 10000 ಮುಸ್ಲಿಮರೊಂದಿಗೆ ಮಕ್ಕದ ಕಡೆಗೆ 630ರ ಜನವರಿಯಲ್ಲಿ ಸಾಗಿದ ಘಟನೆ ಮೂಲಕ ನಿಷ್ಕರ್ಷಿಸಬಹುದು. ಅದಕ್ಕೆ ಮೊದಲು ಅವರೊಂದಿಗಿದ್ದ ಅತ್ಯಂತ ದೊಡ್ಡ ಮುಸ್ಲಿಮರ ಸಂಖ್ಯೆ 3000 ಆಗಿತ್ತು. 10000 ಬಹುದೈವಾರಾಧಕರಾದ ಅರಬಿಗಳು ಮದೀನವನ್ನು ಆಕ್ರಮಿಸಲು ಬಂದಾಗ ಅವರನ್ನು ಎದುರಿಸಿದ ಮುಸ್ಲಿಮರ ಸಂಖ್ಯೆ ಇದಾಗಿತ್ತು. ಆದುದರಿಂದ 7000 ಪುರುಷರು ಹುದೈಬಿಯಾ ಸಂಧಿಯ ನಂತರದ ಯುದ್ಧ ವಿರಾಮದ ವೇಳೆಯಲ್ಲಿ ಇಸ್ಲಾಮ್ ಧರ್ಮಾವಲಂಬಿಗಳಾದರೆಂದು ತಿಳಿಯುತ್ತದೆ. ಅಮ್ರ್ ಬಿನ್ ಆಸ್(ರ) ಮತ್ತು ಖಾಲಿದ್ ಬಿನ್ ವಲೀದ್‌ರಂತಹ(ರ) ವೀರಾಗ್ರಣಿಗಳು ಈ ಕಾಲದಲ್ಲಿ ಇಸ್ಲಾಮ್ ಧರ್ಮಕ್ಕೆ ಸೇರಿದರು. ಇಸ್ಲಾಮ್ ಧರ್ಮದ ಈ ಶಾಂತಮಯ ನುಸುಳುವಿಕೆಯು ಎಷ್ಟು ವಿಸ್ಮಯಕರವಾಗಿತ್ತೆಂದರೆ ಅದು ಮೋಂಟ್‌ಗೊಮೆರಿ ವಾಟ್ಸ್‌ನಂತಹ ವಿದ್ವಾಂಸರನ್ನು ತಬ್ಬಿಬ್ಬುಗೊಳಿಸಿತು. ಅವರು ಇದನ್ನು "ಅಂದಾಜು ಮಾಡಲು ಅಸಾಧ್ಯವಾದ ವಿಷಯಗಳಲ್ಲಿ ಒಂದು" ಎಂದು ಪರಿಗಣಿಸುತ್ತಾರೆ. ಅವರು ಹೀಗೆಯೂ ಹೇಳುತ್ತಾರೆ: "ಮುಹಮ್ಮದರ ಈ ಯಶಸ್ಸಿಗೆ ಮುಖ್ಯ ಕಾರಣಗಳಲ್ಲೊಂದು ಇಸ್ಲಾಮ್ ಧರ್ಮದ ಆಕರ್ಷಕ ಗುಣ ಮತ್ತು ಅದು ಧಾರ್ಮಿಕವಾಗಿಯೂ ಸಾಮಾಜಿಕವಾಗಿಯೂ ಅರಬಿಗಳ ಧಾರ್ಮಿಕ ಮತ್ತು ಸಾಮಾಜಿಕ ಆವಶ್ಯಕತೆಗಳಿಗಾಗಿ ಸಮಂಜಸವಾದ್ದುದಾಗಿದೆ. (W.Montgomery Watt : Muhammad at Medina - Page 69) ವಾಟ್‌ರವರು ಮೌಲಾನ ಮೌದೂದಿಯನ್ನು ಸಂಬೋಧಿಸಿ ಹೇಳುತ್ತಿರುವರೋ ಎನ್ನುವಂತೆ ಹೀಗೆ ಬರೆಯುತ್ತಾರೆ:

"ಇಸ್ಲಾಮ್ ಧರ್ಮದ ಧಾರ್ಮಿಕ ಚಿಂತನೆಗಳನ್ನು ಅರಬಿಗಳ ಊಹಾಪೋಹಗಳ ಮೇಲೆ ಪ್ರಭುತ್ವ ಸ್ಥಾಪಿಸುವಂತೆ ಮಾಡುವ ಮೂಲಕ ಮುಹಮ್ಮದರು ಮುಸ್ಲಿಮರ ಮೇಲಿನ ತನ್ನ ಆಧಿಪತ್ಯವನ್ನು ಸ್ಥಾಪಿಸಿ ಅದನ್ನು ಸುಶಕ್ತವನ್ನಾಗಿ ಮಾಡಲು ಅಸಮರ್ಥರಾಗಿದ್ದರೆ ಮತ್ತು ಹೊಸದಾಗಿ ಜನರನ್ನು ಧರ್ಮಪರಿವರ್ತನೆಗಾಗಿ ಆಕರ್ಷಿಸಲು ಅಸಮರ್ಥರಾಗಿದ್ದರೆ ಹುದೈಬಿಯಾ ಸಂಧಿಯು ಅವರಿಗೆ ಅನುಕೂಲವಾಗಿ ಪರಿಣಮಿಸುತ್ತಿರಲಿಲ್ಲ............. ಭೌತಿಕವಾದ ಪಕ್ಷಪಾತಿಯಾಗಿರದಂತಹ ಚರಿತ್ರೆಗಾರನು ಮುಹಮ್ಮದರಿಗೆ ಖುರ್‌ಆನ್ ಸಂದೇಶದ ಕುರಿತು ಇದ್ದ ನಂಬಿಕೆ, ಇಸ್ಲಾಮ್ ಧರ್ಮವು ಒಂದು ಧಾರ್ಮಿಕವೂ ಸಾಮಾಜಿಕವೂ ಆದ ವ್ಯವಸ್ಥೆಯಾಗಿದೆ ಎಂಬುದರ ಕುರಿತು ಅವರಿಗಿದ್ದ ವಿಶ್ವಾಸ ಮತ್ತು ಅವರಿಗೆ ದೇವನು ವಹಿಸಿಕೊಟ್ಟ ಕೆಲಸವೆಂಬ ವಿಶ್ವಾಸದಿಂದ ಅದನ್ನು ಈಡೇರಿಸಲು ಯಾವುದೇ ಹಿಂಜರಿಕೆಯಿಲ್ಲದ ತೀವ್ರವಾದ ಆಸಕ್ತಿ ಇವು ಧರ್ಮ ಪ್ರಚಾರಕ್ಕೆ ಸಹಕರಿಸಿದ ಮುಖ್ಯ ಅಂಶಗಳೆಂದು ಗಣಿಸುವನು................. ಮಕ್ಕವನ್ನು ಅಭಿಮುಖೀಕರಿಸಿ ಅವರು ಮಾಡಿದ ಪ್ರಯಾಣ ಮತ್ತು ಸಂಧಿ ಮುಹಮ್ಮದರಿಂದ ಪ್ರಾರಂಭಿಸಲಾದ ಒಂದು ಹೊಸ ಪ್ರಯತ್ನವನ್ನು ಸೂಚಿಸುತ್ತದೆ." (ಅದೇ ಪುಸ್ತಕ - ಪುಟ 51-2)

ಒಬ್ಬ ಓರಿಯೆಂಟಲಿಸ್ಟ್ ಪ್ರವಾದಿಯವರ(ಸ) ಯಶಸ್ಸಿಗೆ ಕಾರಣವು ಇಸ್ಲಾಮ್ ಧರ್ಮದ ಚಿಂತನೆಗಳ ಪ್ರಭುತ್ವವಾಗಿದೆ ಎಂದು ಹೇಳುವಾಗ, ಮೌಲಾನ ಮೌದೂದಿಯಂತಹ ಒಬ್ಬ ಮುಸ್ಲಿಂ ಗಣ್ಯ ವ್ಯಕ್ತಿಯು ಹಝ್ರತ್ ಮುಹಮ್ಮದ್‌ರವರ(ಸ) ಯಶಸ್ಸಿಗೆ ಖಡ್ಗದ ಪ್ರಭುತ್ವವೇ ಕಾರಣವೆಂದು ಹೇಳುವುದು ದುಃಖಕರವಾಗಿದೆ. ಹುನೈನ್ ಯುದ್ಧದ ನಂತರ ಸಾವಿರಾರು ಅರಬಿಗಳು ಇಸ್ಲಾಮ್ ಧರ್ಮ ಸ್ವೀಕರಿಸಿದುದಕ್ಕೆ ಖಡ್ಗದ ಪ್ರಭುತ್ವವೇ ಕಾರಣ ಎಂದು ಮೌದೂದಿ ಹೇಳುತ್ತಾರೆ.

ಪ್ರವಾದಿಯವರು(ಸ) ನಿಧನ ಹೊಂದಿದ ನಂತರ ಮುಸ್ಲಿಮರು

ವಿದ್ರೋಹಿಗಳಾದುದು ಏಕೆಂದು ಒಂದು ಪ್ರಶ್ನೆ ಇಲ್ಲಿ ಉದಿಸುತ್ತದೆ. ಇದರ ಉತ್ತರ ಅತ್ಯಂತ ಸ್ಪಷ್ಟವಾಗಿದೆ. ಆ ಕಾಲದಲ್ಲಿ ಇಸ್ಲಾಮ್ ಧರ್ಮ ಸ್ವೀಕರಿಸಿದವರಲ್ಲಿ ಬಹುತೇಕ ಜನರು ಗ್ರಾಮೀಣ ಅರಬಿಗಳಾಗಿದ್ದರು. ಪ್ರವಾದಿಯವರಿಂದ(ಸ) ನೇರವಾಗಿ ಅವರು ತರಬೇತಿ ಪಡೆದಿರಲಿಲ್ಲ ಮತ್ತು ಅವರಲ್ಲಿ ಅನೇಕ ಜನರು ಪ್ರವಾದಿಯವರ(ಸ) ಮುಖದರ್ಶನದ ಭಾಗ್ಯವನ್ನು ಕೂಡ ಹೊಂದಿರಲಿಲ್ಲ.

ಅಂದಿನ ಕಾಲದಲ್ಲಿ ಪ್ರಯಾಣ ಮಾಡುವುದು ಬಹಳ ಕಷ್ಟಕರವಾಗಿತ್ತು. ಆಗ ಮಾರ್ಗಗಳು ಇರಲಿಲ್ಲ ಮತ್ತು ಯಾರಿಗೂ ಸಂರಕ್ಷಣೆಯ ಬಗ್ಗೆಯೂ ಖಾತರಿಯಿರಲಿಲ್ಲ. ಆದುದರಿಂದ ಪ್ರತಿಯೊಬ್ಬ ಅರಬಿ ಪೈಗಂಬರರ(ಸ) ಸಮೀಪಕ್ಕೆ ಬಂದು ಇಸ್ಲಾಮ್ ಧರ್ಮದ ಕುರಿತು ನೇರವಾಗಿ ತಿಳಿಯಲು ಸಾಧ್ಯವಿರಲಿಲ್ಲ. ಅರಬ್ ದೇಶದ ಎಲ್ಲಾ ಭಾಗಗಳನ್ನು ಸಂದರ್ಶಿಸುವುದು ಸಹ ಪೈಗಂಬರರಿಗೆ(ಸ) ಸಾಧ್ಯವಿರಲಿಲ್ಲ. ಅಂದಿನ ಸಂಪ್ರದಾಯವೇನೆಂದರೆ, ಒಂದು ಗೋತ್ರದ ಪ್ರತಿನಿಧಿಗಳು ಪ್ರವಾದಿಯವರನ್ನು(ಸ) ಭೇಟಿಯಾಗುತ್ತಿದ್ದರು. ಅಥವಾ ಮುಸ್ಲಿಮರ ಒಂದು ಪ್ರತಿನಿಧಿ ಸಂಘವನ್ನು ಗೋತ್ರಗಳಿಗೆ ಪ್ರಚಾರಕ್ಕಾಗಿ ಕಳುಹಿಸಲಾಗುತ್ತಿತ್ತು. ಅನೇಕ ಚರ್ಚೆಗಳು ಮತ್ತು ವಾದ ಪ್ರತಿವಾದಗಳು ನಡೆಯುತ್ತಿದ್ದುವು. ಪ್ರತಿಯೊಂದು ವಿಷಯದ ಬಗ್ಗೆ ಪ್ರಶ್ನಿಸಿದ ನಂತರ ಗೋತ್ರದ ಪ್ರತಿನಿಧಿಗಳ ಸಂಘ ಅಥವಾ ಗೋತ್ರದ ಹಿರಿಯರು ಮಾಡಿದ ನಿರ್ಧಾರವನ್ನು ಗೋತ್ರದ ಎಲ್ಲಾ ಜನರು ಒಪ್ಪುತ್ತಿದ್ದರು. ಆದುದರಿಂದ ಹಝ್ರತ್ ಮುಹಮ್ಮದ್ ಪೈಗಂಬರರಿಂದ(ಸ) ನೇರವಾಗಿ ಉಪದೇಶವನ್ನು ಪಡೆಯದ ಅನೇಕರು ಇದ್ದರು. ಅವರು ಪೈಗಂಬರರನ್ನು(ಸ) ಮುಖತಃ ಕಂಡಿರಲಿಲ್ಲ. ಪ್ರವಾದಿಯವರ(ಸ) ಶಿಷ್ಯರೊಂದಿಗೆ ಸ್ವಲ್ಪ ಕಾಲ ಕಳೆಯುವ ಸಂದರ್ಭ ಕೂಡ ಅವರಿಗೆ ದೊರಕಿರಲಿಲ್ಲ. ಧರ್ಮವು ಸ್ವತಃ ಅನುಭವಿಸಬೇಕಾದ ಒಂದು ಸಂಗತಿಯಾಗಿದೆ. ಅದು ಮಾದರಿಯನ್ನು ಕಾಣುವ ಮೂಲಕ ಮತ್ತು ಸ್ಫೂರ್ತಿಯಿಂದ ಅನುಭವಿಸಬೇಕಾದುದಾಗಿದೆ. ಹೊಸದಾಗಿ ಇಸ್ಲಾಮ್ ಧರ್ಮ ಸ್ವೀಕರಿಸಿದ ಬಹುತೇಕ ಜನರಿಗೆ ಇದು ಲಭಿಸಿರಲಿಲ್ಲ. ಆ ಜನರು ಹೊಸದಾಗಿ ಧರ್ಮ ಪರಿವರ್ತನೆಗೊಂಡು ಸ್ವಲ್ಪ ಕಾಲದ ನಂತರ ಪೈಗಂಬರರು(ಸ) ನಿಧನ ಹೊಂದಿದ ಕಾರಣ ಅವರ ದುರದೃಷ್ಟತೆ ಇನ್ನಷ್ಟು ಹೆಚ್ಚಿತು. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಿಧನದಿಂದ ಅರಬ್ ದೇಶದ ದಿಗಂತವು ಇನ್ನಷ್ಟು ಕಪ್ಪಗಾಯಿತು. ಹಿಂದಿನ ಪ್ರವಾದಿಗಳ ಚರಿತ್ರೆಯಿಂದ ನಾವು ಬಹಳ ಸಂಗತಿಗಳನ್ನು ತಿಳಿಯಬಹುದು. ಒಬ್ಬ ಪ್ರವಾದಿಯನ್ನು ಅವರ ಕಾಲದ ಜನರು ತಿರಸ್ಕರಿಸಿದರೆ ಮತ್ತು ಪ್ರವಾದಿ ತಂದ ಬೆಳಕನ್ನು ಬಲಾತ್ಕಾರದಿಂದ ನಂದಿಸಿದರೆ ಆ ಪ್ರವಾದಿಯ ಕಾಲದ ಜನರು ಶಿಕ್ಷಿಸಲ್ಪಡುತ್ತಾರೆ.

ಆ ಶಿಕ್ಷೆಯ ಪರಿಣಾಮವೇನಾಗುತ್ತದೆ ಎಂದರೆ ಬಹುತೇಕ ಜನರು ವಿಶ್ವಾಸದ ಬೆಳಕನ್ನು ಆ ಬೆಳಕಿನ ಮೂಲವು ನಂದಿಸಲ್ಪಡಲಿರುವಾಗ ನೋಡುತ್ತಾರೆ. ಕೆಲವು ಸಲ ಒಬ್ಬ ಪ್ರವಾದಿಯು ನಿಧನ ಹೊಂದಿ ದೀರ್ಘಕಾಲ ಕಳೆದ ನಂತರ ಸತ್ಯತೆ ಜನರಿಂದ ಗುರುತಿಸಲ್ಪಡುತ್ತದೆ. ಆ ದುರದೃಷ್ಟಶಾಲಿಗಳು ಒಬ್ಬ ಪ್ರವಾದಿ ಜೀವಿಸಿರುವಾಗ ಅವರನ್ನು ದೌರ್ಜನ್ಯಕ್ಕೆ ಗುರಿಪಡಿಸುತ್ತಾರೆ ಮತ್ತು ಪ್ರವಾದಿ ನಿಧನ ಹೊಂದಿದ ನಂತರ ಅವರನ್ನು ಅಂಗೀಕರಿಸುತ್ತಾರೆ.

ಮೌಲಾನ ಮೌದೂದಿಯವರು ಇಸ್ಲಾಮಿನ ಕಠಿಣ ಶತ್ರುಗಳೊಂದಿಗೆ ಸೇರಿಕೊಂಡು ಇಸ್ಲಾಮ್ ಧರ್ಮದ ಪ್ರಚಾರದಲ್ಲಿ ಖಡ್ಗವು ಪಾತ್ರವಹಿಸಿದ್ದಿತೆಂದು ವಾದಿಸಿರುವುದರಿಂದ ನಾವು ಪ್ರವಾದಿಯವರ(ಸ) ಜೀವನಚರಿತ್ರೆಯನ್ನು ಪರಿಶೀಲಿಸಿ ಜನರನ್ನು ಅವರ ಇಚ್ಛೆಗೆ ವಿರುದ್ಧವಾಗಿ ಎಂದಾದರೂ ಧರ್ಮ ಪರಿವರ್ತನೆ ಮಾಡಲಾಗಿದೆಯೋ ಎಂದು ಪರಿಶೀಲಿಸುವ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವನ ಕಾಲವನ್ನು ಮಕ್ಕದ ಕಾಲ ಮತ್ತು ಮದೀನದ ಕಾಲ ಎಂದು ವಿಂಗಡಿಸುವುದು ತರ್ಕಬದ್ಧವಾಗಿ ಕಾಣಬಹುದಾದರೂ ಅದು ವಾಸ್ತವಿಕವಾಗಿ ಅತಿ ಸರಳೀಕರಣವಾಗಿರುವುದು. ಹಿಜ್ರದ (ಮದೀನಕ್ಕೆ ವಲಸೆಯ) ನಂತರ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮತ್ತು ಶಿಷ್ಯರು ಶತ್ರುಗಳ ಹಿಂಸಾಚಾರಗಳಿಂದ ಮುಕ್ತರಾದರೂ ಅವರ ಸ್ವಯಂ ರಕ್ಷಣೆಗಾಗಿರುವ ಹೋರಾಟ ಕೊನೆಗೊಂಡಿರಲಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವಿತವನ್ನು ನಾಲ್ಕು ಘಟ್ಟಗಳಾಗಿ ವಿಂಗಡಿಸುವುದು ಸೂಕ್ತವಾಗಿದೆ. ಪ್ರಥಮ ಘಟ್ಟ ಮದೀನಕ್ಕೆ ವಲಸೆ ಹೋಗುವ ಕಾಲದ ತನಕ. ದ್ವಿತೀಯ ಘಟ್ಟ ಮದೀನ ಜೀವಿತ ಹುದೈಬಿಯಾ ಸಂಧಿಯ ತನಕ. ಅದು ಸಹ ಹಿಂಸಾಚಾರಕ್ಕೆ ಅವರು ಗುರಿಯಾದ ಘಟ್ಟವೇ ಆಗಿತ್ತು. ಮೂರನೆಯ ಘಟ್ಟ ಹುದೈಬಿಯಾ ಸಂಧಿಯಿಂದ ಮಕ್ಕದ ವಿಜಯದ ತನಕದ್ದು. ನಾಲ್ಕನೆಯ ಘಟ್ಟ ಮಕ್ಕ ವಿಜಯದ ನಂತರ ಅವರು ನಿಧನ ಹೊಂದುವ ತನಕ.

ದ್ವಿತೀಯ ಘಟ್ಟದಲ್ಲಿ ಶತ್ರುಗಳ ಆಕ್ರಮಣಗಳನ್ನು ಎದುರಿಸಲು ಅಲ್ಲಾಹನಿಂದ ಮುಸ್ಲಿಮರಿಗೆ ಅನುಮತಿ ದೊರೆತಿದ್ದರೂ ಬಹುದೈವಾರಾಧಕರನ್ನು ಎದುರಿಸುವ ಶಕ್ತಿ ಮುಸ್ಲಿಮರಿಗಿರಲಿಲ್ಲ. ಆ ಕಾಲದಲ್ಲಿ ಮದೀನ ಮಾತ್ರ ಮುಸ್ಲಿಮರು ವಾಸಿಸುತ್ತಿದ್ದ ಏಕಮಾತ್ರ ನಗರವಾಗಿತ್ತು. ಆದರೆ ಆ ನಗರದ ಸಂಪೂರ್ಣ ನಿಯಂತ್ರಣ ಮುಸ್ಲಿಮರ ಕೈಯ್ಯಲ್ಲಿರಲಿಲ್ಲ. ಯಹೂದಿಯರ ಮೂರು ಗೋತ್ರಗಳು, ಅಲ್ಲದೆ ಔಸ್ ಮತ್ತು ಖಝ್ರಜ್ ಗೋತ್ರಕ್ಕೆ ಸೇರಿದ ಮುಸ್ಲಿಮೇತರರು ಮದೀನದಲ್ಲಿ ಗಣನೀಯ ಸಂಖ್ಯೆಯಲ್ಲಿ ಇದ್ದರು. ಬದ್ರ್ ಯುದ್ಧದಲ್ಲಿ ಭಾಗವಹಿಸಿದ ಮುಸ್ಲಿಮರ ಸಂಖ್ಯೆಯಿಂದ ಅವರ ಶಕ್ತಿಯನ್ನು ಅಳೆಯಬಹುದಾಗಿದೆ. ಆದುದರಿಂದ ಹುದೈಬಿಯಾ ಸಂಧಿಗೆ ಪೂರ್ವದ ಕಾಲವನ್ನೂ ಮಕ್ಕದ ದೌರ್ಜನ್ಯಪೀಡಿತ ಕಾಲದ ಮುಂದುವರಿಕೆ ಎಂದು ಗಣಿಸಬಹುದಾಗಿದೆ.

ಮೂರನೆಯ ಕಾಲಘಟ್ಟ ಹುದೈಬಿಯಾ ಸಂಧಿಯಿಂದ ಆರಂಭಿಸಿ ಮಕ್ಕರ ಶರಣಾಗತಿಯ ತನಕವಿದ್ದಿತು. ಅದು ಶಾಂತಿಯ ಕಾಲವಾಗಿತ್ತು. ಮಕ್ಕದ ಬಹುದೈವಾರಾಧಕರು ಮುಸ್ಲಿಮರನ್ನು ಆ ಕಾಲದಲ್ಲಿ ಆಕ್ರಮಿಸುತ್ತಿರಲಿಲ್ಲ. ಆದರೆ ಕೆಲವು ಅರಬಿ ಗೋತ್ರಗಳು ಮತ್ತು ಯಹೂದಿಯರು ಮುಸ್ಲಿಮರೊಂದಿಗೆ ಮಾಡಿಕೊಂಡ ಒಪ್ಪಂದಗಳನ್ನು ಮುರಿದುದರಿಂದ ಕೆಲವು ಜಟಾಪಟಿಗಳು ಸಂಭವಿಸಿದ್ದವು.

ಮುಸ್ಲಿಮರು ಮಕ್ಕದಲ್ಲಿ ಹದಿಮೂರು ವರ್ಷಗಳ ಕಾಲ ದೌರ್ಜನ್ಯ ಪೀಡಿತರಾಗಿದ್ದುದರಿಂದ ಆ ಕಾಲದಲ್ಲಿ ಬಲಾತ್ಕಾರದಿಂದ ಧರ್ಮ ಪರಿವರ್ತನೆ ಮಾಡಿದ ಪ್ರಶ್ನೆಯೇ ಉದಿಸುವುದಿಲ್ಲ. ಓರಿಯೆಂಟಲಿಸ್ಟರೂ ಇದನ್ನು ಒಪ್ಪಿಕೊಳ್ಳುತ್ತಾರೆ. ಮಕ್ಕದ ಬಹುದೈವಾರಾಧಕರು ದೌರ್ಜನ್ಯಕ್ಕೆ ಗುರಿಪಡಿಸುತ್ತಿದ್ದರೂ ಜನರು ಇಸ್ಲಾಮ್ ಧರ್ಮವನ್ನು ಸ್ವೀಕರಿಸುತ್ತಾ ಇದ್ದರು. ಆ ಕಾಲದಲ್ಲಿ ಇಸ್ಲಾಮ್ ಧರ್ಮ ಸ್ವೀಕರಿಸಿ ಮದೀನಕ್ಕೆ ವಲಸೆ ಹೋದವರನ್ನು ಮುಹಾಜಿರ್ ಎಂದು ಕರೆಯಲಾಗುತ್ತಿತ್ತು. ಯಾವೊಬ್ಬ ಮುಹಾಜಿರ್ ಸಹ ತನ್ನ ಇಚ್ಛೆಗೆ ವಿರುದ್ಧವಾಗಿ ಧರ್ಮ ಪರಿವರ್ತನೆಗೆ ಒಳಗಾಗಿರಲಿಲ್ಲ ಎಂಬುದು ಒಂದು ಚಾರಿತ್ರಿಕ ಸತ್ಯವಾಗಿದೆ.

ದ್ವಿತೀಯ ಕಾಲಘಟ್ಟದಲ್ಲಿ ಮುಸ್ಲಿಮರು ಶತ್ರುಗಳ ದೌರ್ಜನ್ಯವನ್ನು ಸಶಸ್ತ್ರರಾಗಿ ಎದುರಿಸಿದರು. ಈ ಕಾಲಘಟ್ಟದಲ್ಲಿ ಕೆಲವರಾದರೂ ಬಲಾತ್ಕಾರದಿಂದ ಧರ್ಮ ಪರಿವರ್ತನೆಗೊಳಿಸಲ್ಪಟ್ಟಿರಬಹುದೆಂದು ವಿಮರ್ಶಕರಲ್ಲಿ ಯಾರಾದರೂ ಯೋಚಿಸಬಹುದು. ಆದರೆ ಆ ಕಾಲದ ಚರಿತ್ರೆ ಸಂಪೂರ್ಣವಾಗಿ ದಾಖಲಿಸಲ್ಪಟ್ಟಿದೆ. ಮದೀನದ ಮುಸ್ಲಿಮರಲ್ಲಿ ಬಹುತೇಕ ಜನರು ಔಸ್ ಮತ್ತು ಖಿಝ್‌ರಜ್ ಎಂಬ ಎರಡು ಗೋತ್ರಗಳಿಗೆ ಸೇರಿದ್ದರು. ಈ ಜನರೇ ಪ್ರವಾದಿಯವರನ್ನು(ಸ) ಮದೀನಕ್ಕೆ ಆಮಂತ್ರಿಸಿದ್ದರು. ಅವರು ಪ್ರವಾದಿಯನ್ನು(ಸ) ಅಖಬದಲ್ಲಿ ಭೇಟಿಯಾದಾಗ ಹೇಳಿದರು: "ನಾನು ನಿಮ್ಮೊಂದಿಗೆ ಈ ಒಪ್ಪಂದ ಮಾಡುತ್ತೇನೆ: ನೀವು ನಿಮ್ಮ ಮಹಿಳೆಯರನ್ನೂ ಮಕ್ಕಳನ್ನೂ ರಕ್ಷಿಸುವ ಹಾಗೆ ನನ್ನನ್ನೂ ರಕ್ಷಿಸುವಿರೆಂದು ಪ್ರತಿಜ್ಞೆ ಮಾಡಬೇಕು." ಖಿಝ್‌ರಜ್ ಗೋತ್ರದ ಮುಖಂಡರಾದ ಬರಾ ಎದ್ದುನಿಂತು ಪ್ರವಾದಿಯವರ(ಸ) ಕೈ ಹಿಡಿದು ಹೀಗೆಂದರು: "ನಿಮ್ಮನ್ನು ಸತ್ಯದೊಂದಿಗೆ ಕಳುಹಿಸಿದ ದೇವನಾಣೆ, ನಾವು ನಿಮ್ಮನ್ನು ನಮ್ಮ ಮಹಿಳೆಯರನ್ನೂ ಮಕ್ಕಳನ್ನೂ ಸಂರಕ್ಷಿಸುವ ಹಾಗೆ ಸಂರಕ್ಷಿಸುವೆವು. ಆದುದರಿಂದ ನಮ್ಮ ನಿಷ್ಠೆಯ ಪ್ರತಿಜ್ಞೆ ಅಂಗೀಕರಿಸಿರಿ. ಓ ದೇವನ ಸಂದೇಶವಾಹಕರೇ, ನಾವು ಯುದ್ಧ ಮಾಡುವ ಜನರಾಗಿದ್ದೇವೆ. ನಾವು ಆಯುಧ ಹೊಂದಿದ್ದು, ತಂದೆಯಿಂದ ಮಗನಿಗೆ ಅವು ಹಸ್ತಾಂತರಿಸಲ್ಪಡುತ್ತವೆ."

ಈ ಜನರೇ ಯಾತ್ರಿಬ್ (ಮದೀನ)ದಿಂದ ಮಕ್ಕದವರೆಗೆ ಪ್ರಯಾಣ ಮಾಡಿ ತಮ್ಮ ಖಡ್ಗಗಳನ್ನು ಪ್ರವಾದಿಯವರಿಗೆ(ಸ) ಅರ್ಪಿಸಿದವರಾಗಿದ್ದರು. ಅವರನ್ನು ಅನ್‌ಸಾರ್ (ಸಹಾಯಕರು) ಎಂದು ಕರೆಯಲಾಯಿತು.

ಕೆಲವು ಯಹೂದಿಯರು ಮತ್ತು ಮದೀನದಿಂದ ಹೊರಗಿನ ಬೇರೆ ಕೆಲವು ಪಟ್ಟಣಗಳ ಅರಬಿಗಳು ಇಸ್ಲಾಮ್ ಧರ್ಮ ಪರಿಗ್ರಹಣ ಮಾಡಿದರೂ ಅವರಲ್ಲಿ ಯಾರೊಬ್ಬನೂ ಬಲಾತ್ಕಾರಕ್ಕೊಳಗಾಗಿ ಅಥವಾ ಯುದ್ಧದ ಕಾರಣದಿಂದ ಹಾಗೆ ಮಾಡಿರಲಿಲ್ಲ. ಈ ಕಾಲಘಟ್ಟದಲ್ಲಿ ಮಕ್ಕದಲ್ಲಿ ಇಸ್ಲಾಮ್ ಧರ್ಮಕ್ಕೆ ಪರಿವರ್ತನೆ ಹೊಂದುವವರನ್ನು ನಿಷ್ಕರುಣೆಯಿಂದ ಪೀಡಿಸಲಾಗುತ್ತಿತ್ತು. ಹೀಗಿದ್ದರೂ ಮಕ್ಕದ ಅರಬಿಗಳು ಇಸ್ಲಾಮ್ ಧರ್ಮಕ್ಕೆ ಸೇರುತ್ತಾ ಇದ್ದರು. ಇಲ್ಲಿ ಸಹ ಬಲಾತ್ಕಾರವು ಯಾವುದೇ ಪಾತ್ರವನ್ನು ವಹಿಸಿರಲಿಲ್ಲ.

ಯುದ್ಧ ಕೈದಿಗಳು ಈ ವಿಷಯದಲ್ಲಿ ಬಹಳ ದೂರ ಸಾಧ್ಯವಿರುವ ಅಪವಾದವಾಗಬಹುದಾಗಿತ್ತು. ಆ ಬಗ್ಗೆ ಪರಿಶೀಲಿಸುವ ಮೊದಲು ಒಂದು ತಪ್ಪು ಗ್ರಹಿಕೆಯನ್ನು ನಿವಾರಿಸಲು ಬಯಸುತ್ತೇವೆ. ಅರಬಿ ಪದಗಳಾದ "ಘಜ್‌ವ" ಮತ್ತು "ಸರಿಯ್ಯ" ಕೇವಲ "ಯುದ್ಧ" ಮತ್ತು "ಸಂಘರ್ಷ" ಎಂಬ ಅರ್ಥ ಮಾತ್ರ ಹೊಂದಿಲ್ಲ. ಅವುಗಳ ಅರ್ಥ ಒಂದು ನಿಗದಿತ ಉದ್ದೇಶಾರ್ಥ ಪ್ರಯಾಣ ಎಂದಾಗಿದೆ. ಶತ್ರುಗಳ ಸುಳುಹನ್ನು ತಿಳಿಯಲು ಕಳುಹಿಸಲ್ಪಡುವವರು, ಗಸ್ತು ದಳ, ರಾಯಭಾರಿಗಳಾಗಿ ಹೋಗುವವರು, ಅಪಾಯದಿಂದ ರಕ್ಷಿಸುವವರು, ಕಳ್ಳರನ್ನೂ ದರೋಡೆಕೋರರನ್ನೂ ಬೆನ್ನಟ್ಟುವ ಸಂಘಗಳು ಈ ಹೆಸರನ್ನು ಪಡೆದಿವೆ. ಪೈಗಂಬರ್ ಶಿಷ್ಯರೊಬ್ಬರು ಧರ್ಮ ಪ್ರಚಾರಕ್ಕಾಗಿ ಮಾಡುವ ಪ್ರಯಾಣವನ್ನು ಸಹ ಈ ಹೆಸರಿನಲ್ಲಿ ಕರೆಯಲಾಗಿದೆ. ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಭಾಗವಹಿಸಿದರೆ ಅದನ್ನು "ಘಜ್‌ವ" ಎಂದೂ ಭಾಗವಹಿಸದಿದ್ದರೆ "ಸರಿಯ್ಯ" ಎಂದೂ ಕರೆಯಲಾಗುತ್ತಿತ್ತು. ಉದಾಹರಣೆಗಾಗಿ, ಪ್ರವಾದಿ(ಸ) ಕೈಗೊಂಡ ಪ್ರಥಮ ಘಜ್‌ವವು ತಮ್ಮ ಮಾತೆಯ ಸಮಾಧಿಯಿದ್ದ ಅಲ್‌ಅಬ್‌ವ ಎಂಬ ಸ್ಥಳಕ್ಕೆ ಪ್ರಯಾಣ ಮಾಡಿದುದಾಗಿತ್ತು. ಅವರೊಂದಿಗೆ ಅರುವತ್ತು ಮುಹಾಜಿರ್‌ಗಳಿದ್ದರು. ಅಲ್ಲಿ ಹಝ್‌ರತ್ ಪೈಗಂಬರ್(ಸ) ಕೆಲವು ದಿವಸ ತಂಗಿದರು ಮತ್ತು ಬನೂದಮ್‌ರ ಗೋತ್ರದ ಮುಖಂಡನೊಂದಿಗೆ ಸ್ನೇಹದ ಒಂದು ಒಪ್ಪಂದ ಮಾಡಿಕೊಂಡರು. ಅನಂತರ ಅವರು ಕುರ್‌ಝುಲ್ ಫಿಹ್‌ರಿಯನ್ನು ಬೆನ್ನಟ್ಟಬೇಕಾಯಿತು. ಮೋಂಟ್‌ಗೊಮರಿ ವಾಟ್ ಇದರ ಬಗ್ಗೆ ಹೀಗೆ ಹೇಳುತ್ತಾರೆ: "ಅದು ಮದೀನದಲ್ಲಿ ಮೇಯಿತ್ತಾ ಇದ್ದ ಒಂಟೆಗಳನ್ನು ಕದ್ದೊಯ್ದವನನ್ನು ಶಿಕ್ಷಿಸಲಿಕ್ಕಾಗಿತ್ತು. ಈ ಘಟನೆಯು ಪ್ರವಾದಿಯವರು ಜಾಗರೂಕರಾಗಿರಬೇಕಾದ ಅಪಾಯಗಳನ್ನು ಚಿತ್ರಿಸುತ್ತದೆ." (W.Montgomery Watt : Muhammad at Medina - Page 4)

ಈ ರೀತಿಯ ಘಜ್‌ವಗಳ ಸಂಖ್ಯೆ ಹಿಜ್‌ರ ಮತ್ತು ಹುದೈಬಿಯಾ ಸಂಧಿಯ ಮಧ್ಯೆ ಐವತ್ತು ಆಗಿತ್ತು. ಇವುಗಳಲ್ಲಿ ಮೂರು ಮಾತ್ರ ಪೂರ್ಣರೂಪದ ಯುದ್ಧಗಳಾಗಿ ಪರಿಣಮಿಸಿದವು. ಅವು ಬದ್‌ರ್, ಉಹುದ್ ಮತ್ತು ಅಹ್‌ಝಾಬ್ ಯುದ್ಧಗಳಾಗಿವೆ. ಬನೂ ಮುಸ್ತಲಿಖ್ ಗೋತ್ರದ ವಿರುದ್ಧ ನಡೆದ ಸಶಸ್ತ್ರ ಹೋರಾಟದಲ್ಲಿ ನೂರು ಜನರನ್ನು ಕೈದಿಗಳನ್ನಾಗಿ ಮಾಡಲಾಯಿತು. ಅವರನ್ನು ಪರಿಹಾರ ಧನ ಆವಶ್ಯ ಪಡದೆ ಬಿಟ್ಟುಬಿಡಲಾಯಿತು. ಕೆಲವು ಚಿಕ್ಕಪುಟ್ಟ ಹೋರಾಟಗಳಲ್ಲಿ ಒಬ್ಬನನ್ನು ಅಥವಾ ಇಬ್ಬರನ್ನು ಸೆರೆಹಿಡಿದರೆ ಅವರನ್ನು ಸಹ ಯಾವುದೇ ಶರತ್ತುಗಳಿಲ್ಲದೆ ಬಿಟ್ಟುಬಿಡಲಾಯಿತು. ಬದ್‌ರ್ ಯುದ್ಧದಲ್ಲಿ 72 ಜನರನ್ನು ಕೈದಿಗಳನ್ನಾಗಿ ಸೆರೆಹಿಡಿಯಲಾಯಿತು. ಅವರಲ್ಲಿ ಇಬ್ಬರಿಗೆ ಅವರು ಹಿಂದೆ ಮಾಡಿದ್ದ ಅಪರಾಧಗಳಿಗಾಗಿ ಮರಣದಂಡನೆ ವಿಧಿಸಲಾಯಿತು. ಉಳಿದವರನ್ನು ಪರಿಹಾರ ಧನ ಪಡೆದು ಬಿಡುಗಡೆ ಮಾಡಲಾಯಿತು. ಕೆಲವರನ್ನು ಮದೀನ ನಿವಾಸಿಗಳ ಮಕ್ಕಳಿಗೆ ವಿದ್ಯೆ ಕಲಿಸಬೇಕೆಂಬ ಶರ್ತದ ಮೇಲೆ ಬಿಟ್ಟುಬಿಡಲಾಯಿತು.

ಮೂರನೆಯ ಕಾಲಘಟ್ಟ ಹುದೈಬಿಯಾ ಸಂಧಿಯಿಂದ ಪ್ರಾರಂಭಿಸಿ ಮಕ್ಕದ ವಿಜಯದ ತನಕದ್ದಾಗಿತ್ತು. ಈ ಕಾಲಘಟ್ಟದಲ್ಲಿ ನಡೆದ ಘಜ್‌ವ ಮತ್ತು ಸರಿಯ್ಯಗಳ ಸಂಖ್ಯೆ 22 ಆಗಿತ್ತು. ಇವುಗಳಲ್ಲಿ ಮೂರು

ಸಂಘರ್ಷಗಳಲ್ಲಿ ಯುದ್ಧ ಕೈದಿಗಳನ್ನು ಸೆರೆಹಿಡಿಯಲಾಯಿತು. ಪ್ರವಾದಿ(ಸ) ದಿಹ್ಯ ಬಿನ್ ಖಲೀಫ ಅಲ್‌ಕಲ್‌ಬಿಯವರನ್ನು ಬೈಝಾಂಟಿಯನ್ ಸೀಜರನ ಆಸ್ಥಾನಕ್ಕೆ ರಾಯಬಾರಿಯಾಗಿ ಕಳುಹಿಸಿದ್ದರು. ದಿಹ್ಯರವರು ಮರಳಿ ಬರುತ್ತಿದ್ದಾಗ ಸೀಜರನು ಅವರ ಕೈಯಲ್ಲಿ ಪ್ರವಾದಿಯವರಿಗೆ(ಸ) ಕಳುಹಿಸಿದ್ದ ಪಾರಿತೋಷಕಗಳನ್ನು ಅಲ್‌ಹುನೈದ್ ಮತ್ತು ಜುರ್‌ಹಮ್ ಗೋತ್ರದ ಜನರು ಸುಲಿಗೆ ಮಾಡಿದರು. ಪ್ರವಾದಿ(ಸ) ಝೈದ್‌ಬಿನ್ ಹಾರಿಸ್‌ರವರ ನೇತೃತ್ವದಲ್ಲಿ ಒಂದು ದಂಡನ್ನು ಅಲ್‌ಹುನೈದ್ ಮತ್ತು ಅವನ ಸಂಗಡಿಗರನ್ನು ಶಿಕ್ಷಿಸಲು ಕಳುಹಿಸಿದರು. ಈ ಸಂಘರ್ಷದಲ್ಲಿ ಸೆರೆಹಿಡಿಯಲಾದ ಜನರನ್ನು ಅವರು ತಮ್ಮ ಕೃತ್ಯಗಳಿಗಾಗಿ ಪಶ್ಚಾತ್ತಾಪ ಸೂಚಿಸಿ ಕ್ಷಮೆಯನ್ನು ಯಾಚಿಸಿದಾಗ ಬಿಟ್ಟು ಬಿಡಲಾಯಿತು. ಮದೀನದ ಯಹೂದಿಯರೊಂದಿಗೂ ಮಕ್ಕದ ಬಹುದೈವಾರಾಧಕರೊಂದಿಗೂ ಒಪ್ಪಂದ ಮಾಡಿಕೊಂಡಿದ್ದ ಘತ್‌ಫಾನ್ ಗೋತ್ರದ ವಿರುದ್ಧ ಬಶೀರ್ ಬಿನ್ ಸಅದ್ ದಂಡೆತ್ತಿ ಹೋದಾಗ ಕೆಲವರನ್ನು ಸೆರೆಹಿಡಿಯಲಾಯಿತು. ಅವರೊಂದಿಗೆ ಹೇಗೆ ವರ್ತಿಸಲಾಯಿತೆಂಬುದು ದಾಖಲಿಸಲಾಗಿಲ್ಲ. ಬನೀ ಕಿಲಾಬ್ ಗೋತ್ರದವರನ್ನು ಶಿಕ್ಷಿಸಲು ಒಂದು ದಂಡನ್ನು ಕಳುಹಿಸಲಾಗಿತ್ತು. ಬನೀ ಕಿಲಾಬ್‌ರೊಂದಿಗೆ ವಾಸಿಸುತ್ತಿದ್ದ ಬನೀ ಉರೈನ ಗೋತ್ರದ ಜನರು ಇಸ್ಲಾಂ ಧರ್ಮ ಸ್ವೀಕರಿಸಲು ಮದೀನಕ್ಕೆ ಬಂದರು. ಜ್ವರ ಪೀಡಿತರಾಗಿದ್ದ ಅವರನ್ನು ಪ್ರವಾದಿ(ಸ) ಒಳ್ಳೆಯ ಆಹಾರ ಮತ್ತು ಹಾಲನ್ನು ನೀಡಲಿಕ್ಕಾಗಿ ತನ್ನ ಹುಲ್ಲುಗಾವಲು ಪ್ರದೇಶಕ್ಕೆ ಕಳುಹಿಸಿದರು. ಅಲ್ಲಿ ಅವರು ಉತ್ತಮ ಆಹಾರ ಪಡೆದು ಬಲಶಾಲಿಗಳಾದಾಗ, ಅವರು ಒಂಟೆ ಮೇಯಿಸುವವರನ್ನು ಕೊಂದು ಹದಿನೈದು ಒಂಟೆಗಳನ್ನು ಕದ್ದುಕೊಂಡು ಹೋದರು. ಅವರನ್ನು ಶಿಕ್ಷಿಸಲಾಯಿತು. ಅಲ್ಲಿ ಸಹ ಕೆಲವು ಕೈದಿಗಳು ಇದ್ದಿರಬಹುದಾದರೂ ಅವರ ಬಗ್ಗೆ ಮಾಹಿತಿಗಳು ಲಭಿಸಿಲ್ಲ.

ಹಿಜ್‌ರದಿಂದ ಆರಂಭಿಸಿ ಮಕ್ಕಾ ವಿಜಯ ತನಕದ ಘಟನೆಗಳನ್ನು ಸವಿಸ್ತಾರವಾಗಿ ಪರಿಶೀಲಿಸಿದರೆ ಯಾವ ಯುದ್ಧ ಕೈದಿಯನ್ನೂ ಬಲಾತ್ಕಾರದಿಂದ ಇಸ್ಲಾಮ್ ಧರ್ಮಕ್ಕೆ ಸೇರಿಸಿದುದಾಗಿ ಸಾಬೀತಾಗುವುದಿಲ್ಲ. ಅವರ ಹೃದಯದ ಕೊಳಕನ್ನು ಖಡ್ಗದಿಂದ ದೂರೀಕರಿಸಿದ ಬಗ್ಗೆ ಸೂಚನೆ ನೀಡುವ ಯಾವ ಸಾಕ್ಷ್ಯವೂ ದೊರಕುವುದಿಲ್ಲ. ಎಲ್ಲಾ ಯುದ್ಧ ಕೈದಿಗಳನ್ನು ಅವರ ಪೂರ್ವ ಧರ್ಮವಾದ ಬಹುದೇವರಾಧನೆಗೆ ಮರಳಿ ಹೋಗಲು ಬಿಟ್ಟುಬಿಡಲಾಯಿತು.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವಿತದ ಅಂತಿಮ ಕಾಲಘಟ್ಟ ಪ್ರಾರಂಭವಾದುದು ಮಕ್ಕವನ್ನು ಜಯಿಸುವ ಮೂಲಕ ಅಥವಾ ಹೃದಯಗಳನ್ನು ಜಯಿಸುವ ಮೂಲಕ. ಮಕ್ಕದ ಜನರ ಮೇಲೆ ಗಳಿಸಿದ ಇಸ್ಲಾಮಿನ ವಿಜಯವು ಇಸ್ಲಾಮ್ ಧರ್ಮ ಪ್ರಸಾರ ಹಿಂಸೆಯೊಂದಿಗೆ ದೂರದ ಸಂಬಂಧ ಕೂಡ ಹೊಂದಿಲ್ಲವೆಂಬುದನ್ನು ನಿರ್ಣಾಯಕವಾಗಿ ಸಾಬೀತುಗೊಳಿಸಿತು. ಒಬ್ಬನೇ ಒಬ್ಬನನ್ನಾದರೂ ಬಲಾತ್ಕಾರದಿಂದ ಧರ್ಮ ಪರಿವರ್ತನೆಗೆ ಗುರಿಪಡಿಸಲಿಲ್ಲ.

ಇಸ್ಲಾಮ್ ಧರ್ಮದ ಕಠಿಣ ಶತ್ರುವಾಗಿದ್ದ, ಆದರೆ ಅನಂತರ ಪ್ರವಾದಿಯವರು(ಸ) ಮಕ್ಕವನ್ನು ವಿಜಯೋತ್ಸಾಹದಿಂದ ಪ್ರವೇಶಿಸಿದ ದಿನದಂದು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ಅಬೂ ಸೂಫ್‌ಯಾನ್, ನಗರದ ಸಮೀಪ ಒಂದು ಆಯಕಟ್ಟಿನ ಸ್ಥಳದಿಂದ ಮುಸ್ಲಿಮ್ ಸೈನ್ಯವು ಮಕ್ಕನಗರವನ್ನು ಪ್ರವೇಶಿಸುವುದನ್ನು ನೋಡುತ್ತಾ ಇದ್ದರು. ಹಝ್ರತ್ ಪೈಗಂಬರರ(ಸ) ಪಿತೃ ಸಹೋದರ ಅಬ್ಬಾಸ್ ಅವರ ಜೊತೆಗಿದ್ದರು. ಅಲ್ಲಿ ನಿಂತು ಅಬೂ ಸೂಫ್‌ಯಾನ್ ನೋಡುತ್ತಾ ಇದ್ದ ದೃಶ್ಯವನ್ನು ಮಾರ್ಟಿನ್ ಲಿಂಗ್ಸ್ ಹೀಗೆ ವರ್ಣಿಸುತ್ತಾರೆ:

"ಸೈನಿಕರು ಗುಂಪು ಗುಂಪುಗಳಾಗಿ ಸಾಗುತ್ತಿದ್ದರು. ಪ್ರತಿಯೊಂದು ಸೈನ್ಯದಳ ಮುಂದೆ ಸಾಗುತ್ತಿದ್ದಾಗ ಅವರು ಯಾವ ಗೋತ್ರಕ್ಕೆ ಸೇರಿದವರೆಂದು ಅಬೂ ಸೂಫ್‌ಯಾನ್ ಕೇಳುತ್ತಾ ಇದ್ದರು. ಪ್ರತಿಯೊಂದು ಸಲ ಅವರಿಗೆ ಆಶ್ಚರ್ಯವಾಗುತ್ತಿತ್ತು. ಏಕೆಂದರೆ ಪ್ರಶ್ನಿಸಲ್ಪಡುವ ಆ ಸೈನಿಕರ ಗೋತ್ರ ಇಷ್ಟರತನಕ ಖುರೈಶಿಗಳ ಪ್ರಭಾವ ವಲಯದಿಂದ ದೂರವಾಗಿ ಇದ್ದುದಾಗಿತ್ತು ಅಥವಾ ಆ ಗೋತ್ರ ಇತ್ತೀಚೆಗಿನ ವರೆಗೆ ಪ್ರವಾದಿಗೆ ವಿರುದ್ಧವಾಗಿತ್ತು. ಅಶ್‌ಜದ ಘತ್‌ಫಾನ್ ಇಂತಹ ಗೋತ್ರವಾಗಿತ್ತು. ಅದರ ಲಾಂಛನವನ್ನು ಅಬೂ ಸೂಫ್‌ಯಾನರ ಹಿಂದಿನಕಾಲದ ಸ್ನೇಹಿತನಾದ ನುಐಮ್ ಮತ್ತು ಸುಹೈಲ್ ಹಿಡಿದಿದ್ದರು.

"ಅಬೂ ಸೂಫ್‌ಯಾನ್ ಹೇಳಿದರು: 'ಅರಬಿಗಳ ಪೈಕಿ ಈ ಜನರು ಮುಹಮ್ಮದರ ಕಠಿಣ ಶತ್ರುಗಳಾಗಿದ್ದರು.'

"ಆಗ ಅಬ್ಬಾಸ್ ಹೇಳಿದರು: 'ಅವರ ಹೃದಯಗಳನ್ನು ಇಸ್ಲಾಮ್ ಪ್ರವೇಶಿಸುವ ಹಾಗೆ ದೇವನು ಮಾಡಿದನು. ಇವುಗಳೆಲ್ಲಾ ದೇವನ ಅನುಗ್ರಹದಿಂದ ಲಭಿಸಿದುದಾಗಿದೆ." (Martin Lings : Muhammad, his Life Based on the Earliest Sources - Page 297)

ಅವರನ್ನು ಇಸ್ಲಾಮ್ ಧರ್ಮವನ್ನು ಸೇರುವಂತೆ ಮಾಡಿದುದು ಖಡ್ಗವೇ? ಪ್ರವಾದಿ(ಸ) ತನ್ನ ಹತ್ತುಸಾವಿರ ಜನರೊಂದಿಗೆ ಮಕ್ಕವನ್ನು ಪ್ರವೇಶಿಸಿದಾಗ ತನ್ನನ್ನು ಹದಿಮೂರು ವರ್ಷಗಳ ಕಾಲ ಮಕ್ಕದವರು ದೌರ್ಜನ್ಯಕ್ಕೆ ಗುರಿಪಡಿಸಿದುದಕ್ಕೆ ಪ್ರತೀಕಾರ ಮಾಡಿದರೇ? ಮುಯ್ಯಿಗೆ ಮುಯ್ಯಿ ತೀರಿಸುವ ಮನೋಭಾವ ಕೆಲವರಲ್ಲಿ ನಿಶ್ಚಯವಾಗಿಯೂ ಇತ್ತು. ಸಅದ್ ಬಿನ್ ಉಬಾದರವರು ಅಬೂ ಸೂಫ್‌ಯಾನರನ್ನು ಕಂಡಾಗ ಹೇಳಿದರು: "ಓ ಅಬೂ ಸೂಫ್‌ಯಾನ್, ಈ ದಿನ ಕಗ್ಗೊಲೆಗಳು ನಡೆಸಲ್ಪಡುವ ದಿನವಾಗಿದೆ. ಉಲ್ಲಂಘಿಸಲ್ಪಡಬಾರದುದು ಈ ದಿನ ಉಲ್ಲಂಘಿಸಲ್ಪಡುವುದು. ಖುರೈಶಿಗಳು ದೇವನಿಂದ ಹೀನೈಸಲ್ಪಡುವ ದಿನ ಇದಾಗಿದೆ." ಅಬೂ ಸೂಫ್‌ಯಾನ್ ಸಅದ್‌ರವರ ಮಾತುಗಳನ್ನು ಪ್ರವಾದಿಯವರಿಗೆ(ಸ) ತಿಳಿಸಿದಾಗ ಪ್ರವಾದಿ(ಸ) ಹೇಳಿದರು: "ಇದು ಕಾರುಣ್ಯದ ದಿನವಾಗಿದೆ. ಖುರೈಶಿಗಳನ್ನು ದೇವನು ಗೌರವಿಸಿದ ದಿನ ಇದಾಗಿದೆ." ಸಾರ್ವತ್ರಿಕ ಕ್ಷಮಾದಾನವು ಘೋಷಿಸಲ್ಪಟ್ಟಿತು. ಪವಿತ್ರ ಖುರ್‌ಆನಿನಲ್ಲಿ ಉಲ್ಲೇಖಿತವಾದ ಪ್ರವಾದಿ ಯೂಸುಫರ(ಅ) ಮಾತುಗಳಲ್ಲಿ ಪ್ರವಾದಿ(ಸ) ಹೇಳಿದರು:

"ನಾನು ನನ್ನ ಸಹೋದರ, ಪ್ರವಾದಿ ಯೂಸುಫ್ ಹೇಳಿದ ಹಾಗೆ ಹೇಳುತ್ತೇನೆ: ಈ ದಿನ ನಿಮ್ಮ ಮೇಲೆ ಯಾವುದೇ ದೋಷಾರೋಪವಿಲ್ಲ. ಅಲ್ಲಾಹನು ನಿಮ್ಮನ್ನು ಕ್ಷಮಿಸಲಿ. ಅವನು ಕರುಣೆದೋರುವವರ ಪೈಕಿ ಅತ್ಯಂತ ಹೆಚ್ಚು ಕರುಣೆದೋರುವವನಾಗಿದ್ದಾನೆ." (ಪವಿತ್ರ ಖುರ್‌ಆನ್ 12:93)

ವಾಶಿಂಗ್‌ಟನ್ ಇರ್‌ವಿಂಗ್ ಇಸ್ಲಾಮ್ ಕುರಿತು ಸಹಾನುಭೂತಿ ಇದ್ದ ವೀಕ್ಷಕನಾಗಿರದಿದ್ದರೂ ಪ್ರವಾದಿ(ಸ) ಮಕ್ಕ ನಗರವನ್ನು ಪ್ರವೇಶಿದುದನ್ನು ಹೀಗೆ ವಿವರಿಸುತ್ತಾರೆ:

"ಪ್ರವಾದಿ ತಾನು ಹುಟ್ಟಿದ ನಗರವನ್ನು ಪ್ರವೇಶಿಸುವಾಗ ಸೂರ್ಯೋದಯವಾಗುತ್ತಿತ್ತು. ಅವರು ನಗರ ಪ್ರವೇಶಿಸಿದುದು ಒಬ್ಬ ಜಯಶಾಲಿಯ ವಿಜೃಂಭಣೆಯಿಂದ; ಆದರೆ ವಿನಯದ ಪೋಷಾಕನ್ನು ಧರಿಸಿದ ಒಬ್ಬ ತೀರ್ಥಾಟಕನ ಹಾಗೆ. ಮದೀನದಲ್ಲಿ ಅವರಿಗೆ ಅವತೀರ್ಣವಾಗಿದ್ದ ಆ ಘಟನೆಯ ಬಗ್ಗೆ ಭವಿಷ್ಯ ಸೂಚಕವಾದ ಖುರ್‌ಆನ್ ವಚನಗಳನ್ನು ಉಚ್ಚರಿಸುತ್ತಾ ಅವರು ನಗರ ಪ್ರವೇಶ ಮಾಡಿದರು. ಅವರು ನಿಷ್ಠಾವಂತ ಧಾರ್ಮಿಕ ವ್ಯಕ್ತಿಯ ಚೈತನ್ಯ ಹೊಂದಿ ವಿಜಯೋತ್ಸವ ಕೊಂಡಾಡಿದರೇ ಹೋರತು ರಣವೀರನ ಶೈಲಿಯಲ್ಲಿ ಅಲ್ಲ." (Washington Irving: Mohammed and his Successors - Vol 1, Page 253)

ಮಕ್ಕದ ಜನರ ನಾಯಕರು ತಮಗೆ ಸಾಧ್ಯವಿರುವ ರೀತಿಗಳಲ್ಲೆಲ್ಲಾ ಪ್ರವಾದಿಯವರನ್ನು(ಸ) ಹಿಂಸಿಸಿದ್ದರೂ ಅವರನ್ನೆಲ್ಲಾ ಉದಾರ ಮನಸ್ಸಿನಿಂದ ಕ್ಷಮಿಸಲಾಯಿತು. ಮಾತ್ರವಲ್ಲ, ಮೋಂಟ್‌ಗೊಮರಿ ವಾಟ್ಟ್ ಹೇಳುವ ಹಾಗೆ, "ಅವರನ್ನು ಮುಸ್ಲಿಮರಾಗಲು ಬಲಾತ್ಕಾರ ಮಾಡಲಿಲ್ಲ. ಅವರು ಮತ್ತು ಬೇರೆ ಅನೇಕ ಮಂದಿ ಬಹುದೇವಾರಾಧಕರಾಗಿಯೇ ಉಳಿದರು - ಅಲ್‌ಜಿರಾನ ಪ್ರಕರಣ ಕೊನೆಗೊಳ್ಳುವ ತನಕ." (Muhammad at Medina - Page 68)

ಮ್ಯಾಕ್ಸಿಮ್ ರೋಡಿನ್‌ಸನ್, ವಾಟ್ಟ್‌ರೊಂದಿಗೆ ಸಹಮತ ಹೊಂದಿ ಹೀಗೆ ಹೇಳುತ್ತಾರೆ:

"ಇಸ್ಲಾಮ್ ಧರ್ಮವನ್ನು ಅವಲಂಬಿಸಬೇಕೆಂಬ ಒತ್ತಾಯಕ್ಕೆ ಯಾರೂ ಗುರಿಯಾಗಲಿಲ್ಲವೆಂದು ತೋರುತ್ತದೆ." (Maxime Rodinson: Mohammed - Page 262)

ಇಸ್ಲಾಮ್ ಧರ್ಮದ ಮುಖ್ಯ ದಾಖಲೆಗಳಾದ ಹದೀಸ್‌ಗ್ರಂಥಗಳಲ್ಲಿ ಮತ್ತು ಪ್ರವಾದಿ ಜೀವನ ಚರಿತ್ರೆಗಳಲ್ಲಿ ಬಲಾತ್ಕಾರದಿಂದ ಧರ್ಮಪರಿವರ್ತನೆ ಮಾಡಿದ ಕುರಿತು ಯಾವುದಾದರೂ ಸೂಕ್ಷ್ಮ ಸೂಚನೆಯಾದರೂ ಇದ್ದಿದ್ದರೆ ಇಸ್ಲಾಮಿನ ಶತ್ರುಗಳು ವಿಜಯೋತ್ಸವ ಆಚರಿಸುತ್ತಿದ್ದರು. ಈಗ ನೀವು ಇರ್ವಿಂಗ್, ವಾಟ್ಟ್ ಮತ್ತು ರೋಡಿನ್ಸನ್‌ರವರ ಅಭಿಪ್ರಾಯಗಳನ್ನು ಮೌಲಾನ ಮೌದೂದಿಯ ಈ ಅಭಿಪ್ರಾಯದೊಂದಿಗೆ ಹೋಲಿಸಿ ನೋಡಿರಿ:

"ಉಪದೇಶ ಮತ್ತು ಪ್ರವಚನಗಳು ನಿಷ್ಪಯೋಜಕವಾದಾಗ ಪ್ರವಾದಿ(ಸ) ಕೈಯಲ್ಲಿ ಖಡ್ಗ ಎತ್ತಿಕೊಂಡರು. ಆಗ ಹೃದಯಗಳಿಂದ ಕ್ರಮೇಣ ಕೆಡುಕು ಮತ್ತು ಉದ್ಧಟತನದ ತುಕ್ಕು ನೀಗಲು ತೊಡಗಿತು. ಆತ್ಮಗಳ ಕಶ್ಮಲಗಳು ದೂರ ಸರಿದವು."

ಪ್ರವಾದಿ(ಸ) ಮಕ್ಕವನ್ನು ಜಯಿಸಿದ ಘಟನೆಯು ಚರಿತ್ರೆಯ ಹಾಳೆಗಳಲ್ಲಿ ಕೆತ್ತಲ್ಪಟ್ಟು ಎಂದೆಂದಿಗೂ ಬಾಕಿಯಾಗಿ ಉಳಿಯುವುದು. ಆ ದಿನದ ಚರಿತ್ರೆಯು ಲೋಕಕ್ಕೆಲ್ಲಾ ಮಂಗಳದಾಯಕರಾದ ಪ್ರವಾದಿಯವರನ್ನು(ಸ), ಮೌಲಾನ ಮೌದೂದಿ ಆರೋಪಿಸಿದ ಹಿಂಸೆ ಮತ್ತು ಬಲಾತ್ಕಾರದಿಂದ ಸದಾಕಾಲ ಮುಕ್ತರನ್ನಾಗಿ ಮಾಡುತ್ತಾ ಇರುವುದು.

ಒಬ್ಬ ಮುಸ್ಲಿಮೇತರ ಓರಿಯೆಂಟಲಿಸ್ಟ್ ಸ್ಟಾನ್‌ಲೀ ಲೇನ್ ಪೂಲ್‌ರವರು ಮೌದೂದಿಯು ಮಾಡಿದ ತಪ್ಪನ್ನು ಸರಿಪಡಿಸಿದುದು ಗಮನಾರ್ಹವಾಗಿದೆ. ಲೇನ್ ಪೂಲ್ ಹೀಗೆ ಹೇಳುತ್ತಾರೆ:

"ಮುಹಮ್ಮದ್ ತನ್ನ ಶತ್ರುಗಳ ಮೇಲೆ ಸಾಧಿಸಿದ ಅತ್ಯಂತ ದೊಡ್ಡ ವಿಜಯದ ದಿನವು ಅವರು ತನ್ನ ಆತ್ಮದ ಮೇಲೆ ಸಾಧಿಸಿದ ವೈಭವಪೂರಿತ ವಿಜಯದ ದಿನವೂ ಆಗಿತ್ತು. ಖುರೈಶಿಗಳು ಹಲವಾರು ವರ್ಷಗಳ ಕಾಲ ತನ್ನನ್ನು ದುಃಖಕ್ಕೂ ಹಿಂಸಾತ್ಮಕ ತುಚ್ಛೀಕರಣಕ್ಕೂ ಈಡು ಮಾಡಿದ್ದರೂ ಅವರನ್ನೆಲ್ಲಾ ಉದಾರವಾಗಿ ಕ್ಷಮಿಸಲಾಯಿತು ಮತ್ತು ಮಕ್ಕದ ಎಲ್ಲಾ ಜನರಿಗೆ ಸಾರ್ವತ್ರಿಕ ಕ್ಷಮೆಯನ್ನು ಘೋಷಿಸಲಾಯಿತು." (Stanley Lane - Pool: Selections from the Quran and Hadith - Page 28)

ಪ್ರವಾದಿಯವರ(ಸ) ಜೀವಿತದ ಕೊನೆಯ ಘಟ್ಟವು ಮಕ್ಕಾ ವಿಜಯದೊಂದಿಗೆ ಆರಂಭಿಸಿ ಅವರ ನಿಧನದೊಂದಿಗೆ ಮುಕ್ತಾಯವಾಗುತ್ತದೆ. ಈ ಕಾಲದಲ್ಲಿ ಏಳು ದಂಡಯಾತ್ರೆಗಳು ನಡೆದವು. ಮೂರು ದಂಡಯಾತ್ರೆಗಳಲ್ಲಿ ಯುದ್ಧವು ನಡೆಯಲಿಲ್ಲ ಮತ್ತು ಯಾರನ್ನೂ ಸೆರೆ ಹಿಡಿಯಲೂ ಇಲ್ಲ. ಉಳಿದ ನಾಲ್ಕು ದಂಡಯಾತ್ರೆಗಳಲ್ಲಿ ಆರು ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆಯ ಜನರನ್ನು ಸೆರೆಹಿಡಿಯಲಾಯಿತು. ಇವರಿಗೇನು ಸಂಭವಿಸಿತು? ಮೌದೂದಿಯ ತರ್ಕ ಶಾಸ್ತ್ರದಂತೆ ಈ ಜನರ ಆತ್ಮದಿಂದ ಕಲ್ಮಶವನ್ನು ಹೊರಹಾಕಿ ಮುಸಲ್ಮಾನರನ್ನಾಗಿ ಮಾಡುವ ಅತ್ಯುತ್ತಮ ಸಂದರ್ಭ ಅದಾಗಿತ್ತು. ಆದರೆ ಚರಿತ್ರೆ ನಮಗೆ ಬೇರೆಯೇ ಕಥೆ ಹೇಳುತ್ತದೆ.

ಹುನೈನ್ ಯುದ್ಧದಲ್ಲಿ 6000 ಮಂದಿಯನ್ನು ಯುದ್ಧ ಕೈದಿಗಳನ್ನಾಗಿ ಸೆರೆಹಿಡಿಯಲಾಗಿತ್ತು. ಅವರು ಬನೀ ಹವಾಝಿನ್ ಗೋತ್ರಕ್ಕೆ ಸೇರಿದವರಾಗಿದ್ದರು. ಅದೇ ಗೋತ್ರದ ಒಬ್ಬ ಮಹಿಳೆಯಾಗಿದ್ದ ಹಲೀಮರವರು ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಹಾಲುಣಿಸಿ ಬೆಳೆಸಿದ ಸಾಕು ತಾಯಿಯಾಗಿದ್ದರು. ಹಲೀಮರ ಮಗಳು ಯುದ್ಧ ಕೈದಿಗಳಲ್ಲಿ ಸೇರಿದ್ದರು. ಹಲೀಮರ ಮಗಳು ಹೇಳಿದರು: "ದೇವರಾಣೆ, ನಾನು ಮುಹಮ್ಮದರ ಸಹೋದರಿಯಾಗಿದ್ದೇನೆ." ಆಕೆಯನ್ನು ಹಝ್ರತ್ ಪೈಗಂಭರರ(ಸ) ಮುಂದೆ ತರಲಾಯಿತು. ಆಕೆ ತನ್ನ ಸಾಕು ತಾಯಿಯ ಮಗಳಾದ ತನ್ನ ಸಹೋದರಿ ಶೈಮ ಎಂದು ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಗುರುತಿಸಿದರು. ಅವರು ತನ್ನ ಕಂಬಳಿಯನ್ನು ಹಾಸಿ ಅದರ ಮೇಲೆ ಕುಳಿತುಕೊಳ್ಳಲು ಆಕೆಗೆ ಹೇಳಿದರು. ಕಣ್ಣೀರು ತುಂಬಿದ್ದ ಅವರು ತನ್ನ ಸಾಕು ತಾಯಿಯ ಕುರಿತು ಕೇಳಿದರು. ಅಲ್ಲಿ ಯಾವುದೇ ದೂಷಣೆಯ ಮಾತಿರಲಿಲ್ಲ. ಹವಾಝಿನ್ ಗೋತ್ರ ಯುದ್ಧಕ್ಕೆ ಮುಂದಾಗುವ ಮೊದಲು ತನ್ನ ಸಾಕು ಮಗನ ಕುರಿತು ಏಕೆ ಯೋಚಿಸಲಿಲ್ಲವೆಂದು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಕೇಳಲಿಲ್ಲ. ಅವರು ಹೇಳಿದರು: "ನನ್ನ ವಶಕ್ಕೆ ಬಂದವರನ್ನು ಮತ್ತು ಅಬ್ದುಲ್ ಮುತ್ತಲಿಬರ ಪುತ್ರರ ವಶಕ್ಕೆ ಬಂದವರನ್ನು ನಿಮಗೋಸ್ಕರ ಬಿಟ್ಟುಬಿಡುತ್ತೇನೆ. ಉಳಿದವರ ಬಗ್ಗೆ ನಾನು, ಅವರು ಯಾರ

ಸ್ವಾಧೀನದಲ್ಲಿರುವರೋ ಅವರೊಂದಿಗೆ ನಿಮ್ಮ ಪರವಾಗಿ ವಾದಿಸುವೆನು." ಪ್ರವಾದಿಯ(ಸ) ಮಾತುಗಳನ್ನು ಆಲಿಸಿದ ಮುಸ್ಲಿಮರು ಹೇಳಿದರು: "ನಮಗೆ ಸೇರಿದುದು ಪ್ರವಾದಿಯವರಿಗೆ(ಸ) ಸೇರಿದುದು ಆಗಿದೆ." ಅವರೆಲ್ಲರೂ ತಾವು ಹಿಡಿದ ಸೆರೆಯಾಳುಗಳನ್ನು ಕೂಡಲೆ ಪ್ರವಾದಿಯವರಿಗೆ(ಸ) ಒಪ್ಪಿಸಿದರು. ಹೀಗೆ ಎಲ್ಲಾ 6000 ಯುದ್ಧ ಕೈದಿಗಳನ್ನು ಬಿಡುಗಡೆ ಮಾಡಲಾಯಿತು. ಅವರನ್ನು ಧರ್ಮ ಪರಿವರ್ತನೆಗೊಳಪಡಿಸಲು ಖಡ್ಗವು ಯಾವುದೇ ಪಾತ್ರ ವಹಿಸಲಿಲ್ಲ. ಪ್ರವಾದಿಯವರು(ಸ) ತನ್ನ ಸಾಕು ಸಹೋದರಿಗೆ ಒಂಟೆಗಳನ್ನೂ ಕುರಿಗಳನ್ನೂ ಆಡುಗಳನ್ನೂ ಪಾರಿತೋಷಕವಾಗಿ ನೀಡಿದರು. ಪ್ರವಾದಿಯವರ(ಸ) ಸಾಕು ತಂದೆಯವರ ಸಹೋದರರಾದ ಹಾರಿಸ್‌ರವರು, "ಹವಾಝಿನ್ ಗೋತ್ರಗಳನ್ನು ಸಾಕು ಕುಟುಂಬದವರೆಂದು ಗಣಿಸಬೇಕು" ಎಂದು ಪ್ರವಾದಿಯವರೊಂದಿಗೆ(ಸ) ನಿವೇದಿಸಿದರು. ಗೋತ್ರದ ನಾಯಕರಾಗಿದ್ದ ಮಾಲಿಕ್ ತಾಯಿಫ್ ನಗರಕ್ಕೆ ಓಡಿ ಹೋಗಿದ್ದರು. ಅವರನ್ನು ಕರೆಯಿಸಿ ಅವರಿಗೆ 100 ಒಂಟೆಗಳನ್ನು ಕೊಡಲಾಯಿತು. ಹವಾಝಿನ್ ಗೋತ್ರದಲ್ಲಿ ವರ್ಧಿಸುತ್ತಾ ಇದ್ದ ಮುಸ್ಲಿಮರ ಮೇಲ್ವಿಚಾರಕನ್ನಾಗಿ ಅವರನ್ನು ನೇಮಿಸಲಾಯಿತು. ಬೇರೆ ಅನೇಕರು ಸಹ ಕೊಡುಗೆಗಳನ್ನು ಪಡೆದರು.

ಉಯಯ್‌ನ ಬಿನ್ ಹಿಸ್ನ್ ನಡೆಸಿದ ದಂಡಯಾತ್ರೆಯ ಫಲಸ್ವರೂಪವಾಗಿ 62 ಕೈದಿಗಳನ್ನು ಮದೀನಕ್ಕೆ ತರಲಾಯಿತು. ಆ ಕೈದಿಗಳು ತಮ್ಮ ಮೇಲೆ ದಯೆದೋರಬೇಕೆಂದು ಅಪೇಕ್ಷಿಸಿದಾಗ ಅವರನ್ನೆಲ್ಲಾ ಬಂಧ ಮುಕ್ತರನ್ನಾಗಿ ಮಾಡಲಾಯಿತು.

ಫುಲ್‌ಸ್ ಆ ಕಾಲದಲ್ಲಿ ವಿಗ್ರಹಾರಾಧನೆಯ ಕೇಂದ್ರವಾಗಿತ್ತು. ಅಲ್ಲಿದ್ದ ತಾಯ್ಯ್ ಗೋತ್ರದ ನಾಯಕ ಅದೀ, ಮುಸ್ಲಿಮರ ದಂಡಯಾತ್ರೆಯಿಂದ ಭಯ ಭೀತನಾಗಿ ಓಡಿ ಹೋದನು. ಆದರೆ ಅವನ ಸಹೋದರಿಯರಲ್ಲಿ ಒಬ್ಬಳು ಬಂಧಿಸಲ್ಪಟ್ಟಳು. ಆಕೆಯನ್ನು ಮದೀನಕ್ಕೆ ಕರೆತಂದಾಗ ಆಕೆ ಪ್ರವಾದಿಯವರ(ಸ) ಕಾಲುಗಳ ಮುಂದೆ ಬಿದ್ದು ತನ್ನ ಮೇಲೆ ದಯೆದೋರಬೇಕೆಂದು ಕೋರಿದಳು. ಆಕೆ ಹೇಳಿದಳು: "ನನ್ನ ಪಿತ ಸೆರೆಯಾಳುಗಳನ್ನು ಬಂಧಮುಕ್ತರನ್ನಾಗಿ ಮಾಡುತ್ತಿದ್ದರು. ಅವರು ಅತಿಥಿಗಳನ್ನು ಸತ್ಕರಿಸುತ್ತಿದ್ದರು. ಅವರು ಹಸಿದವರಿಗೆ ಆಹಾರ ನೀಡುತ್ತಿದ್ದರು. ಕಷ್ಟದಲ್ಲಿದ್ದವರಿಗೆ ಅವರು ಸಹಾಯ ಮಾಡುತ್ತಿದ್ದರು. ಅವರ ಮನೆಬಾಗಿಲಿಗೆ ಸಹಾಯಕ್ಕಾಗಿ ಕೋರುತ್ತಾ ಬಂದವರನ್ನು ಅವರು ಎಂದೂ ಹಿಂದಕ್ಕೆ ಕಳುಹಿಸುತ್ತಿರಲಿಲ್ಲ. ನಾನು ಹಾತಿಮ್ ತಾಯ್‌ಯವರ ಪುತ್ರಿಯಾಗಿದ್ದೇನೆ."

ಪ್ರವಾದಿಯವರು(ಸ) ಆಕೆಯೊಂದಿಗೆ ಕರುಣೆಯಿಂದ ಮಾತನಾಡಿದರು ಮತ್ತು ಆಕೆಯನ್ನು ಬಂಧಮುಕ್ತಳನ್ನಾಗಿ ಮಾಡಿದರು. ಅವರು ಹೇಳಿದರು: "ಆಕೆಯ ಪಿತ ಒಳಿತನ್ನು ಪ್ರೀತಿಸಿದ್ದರು. ಅಲ್ಲಾಹನು ಸಹ ಅದೇ ರೀತಿ ಒಳಿತನ್ನು ಪ್ರೀತಿಸುತ್ತಾನೆ." ಅವರು ಆಕೆಗೆ ಒಂಟೆಗಳನ್ನೂ ಬೆಲೆಬಾಳುವ ಪೋಷಾಕನ್ನೂ ನೀಡಿದರು. ತಾನೊಬ್ಬಳು ಮಾತ್ರ ಬಂಧಮುಕ್ತಳಾಗಲು ಆಕೆ ಬಯಸದ ಕಾರಣ ಆಕೆಯೊಂದಿಗೆ ಬಂಧಿತರಾದ ಎಲ್ಲಾ ಕೈದಿಗಳನ್ನು ಬಿಟ್ಟುಬಿಡಲಾಯಿತು. ಆಕೆಯ ಪಿತ ಹಾತಿಮ್ ತಾಯ್ ಬಹಳ ಉದಾರಿಯೂ ದಾನಶೂರನೂ ಪ್ರಸಿದ್ಧರಾದ ಒಬ್ಬ ಮಹಾ ಕವಿಯೂ ಗೋತ್ರ ಮುಖಂಡರೂ ಆಗಿದ್ದರು. ಅವರ ಬಗ್ಗೆ ಅರಬಿಗಳು ಅಭಿಮಾನ ಹೊಂದಿದ್ದರು. ಆಕೆ ಆ ಮಹಾಪುರುಷನ ಪುತ್ರಿಯಾದ ಕಾರಣ ಹೀಗೆಲ್ಲ ಮಾಡಲಾಯಿತು. ತನ್ನ ಸಹೋದರಿಯೊಂದಿಗೆ ಪ್ರವಾದಿಯವರು(ಸ) ವರ್ತಿಸಿದ ರೀತಿಯನ್ನು ಅರಿತ ಅದೀ ಇಸ್ಲಾಮ್ ಧರ್ಮಕ್ಕೆ ಸೇರಿದರು. ತಾಯ್ಯ್ ಗೋತ್ರದ ಅವರ ನಾಯಕತ್ವವನ್ನು ಪ್ರವಾದಿಯವರು(ಸ) ಪುನಃ ಸ್ಥಾಪಿಸಿದರು.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವ್ಯಕ್ತಿತ್ವದ ಕುರಿತು ಓರಿಯೆಂಟಲಿಸ್ಟರು ಸೂಚಿಸಿದ ಪರಸ್ಪರ ವಿರುದ್ಧ ಅಭಿಪ್ರಾಯಗಳನ್ನು ಪರಿಶೀಲಿಸಿದ ಮ್ಯಾಕ್ಸಿಮ್ ರೋಡಿನ್‌ಸನ್ ಹೀಗೆ ಹೇಳುತ್ತಾರೆ: "ಪ್ರತಿಯೊಬ್ಬರು ತಮ್ಮ ಭಾವನೆಗಳ, ಚಿಂತನೆಗಳ ಮತ್ತು ಊಹಾಪೋಹಗಳ ಪ್ರಕಾರ ಪ್ರವಾದಿಯ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ." (Mohammed - Page 312)

ರೋಡಿನ್‌ಸನ್‌ರವರ ಈ ಅಭಿಪ್ರಾಯ ಮುಸ್ಲಿಮೇತರ ಓರಿಯೆಂಟಲಿಸ್ಟರಿಗೆ ಅನ್ವಯಿಸುವುದಕ್ಕಿಂತ ಮಿಗಿಲಾಗಿ ಮುಸ್ಲಿಮರಾದ ಮೌಲಾನ ಮೌದೂದಿಯರಿಗೆ ಅನ್ವಯಿಸುತ್ತದೆ.

ಹೈದರಾಬಾದಿನ ನಿಝಾಮರ ಕಳೆಗುಂದುತ್ತಾ ಇದ್ದ ವೈಭವದಿಂದ ಬಾಲ್ಯದಲ್ಲಿ ಪ್ರಭಾವಿತರಾಗಿ ಪೋಷಿಸಲ್ಪಟ್ಟ ಮೌದೂದಿಯ ಅಧಿಕಾರ ಗಳಿಕೆಗಾಗಿರುವ ಮೋಹವು ಅವರ ತಾರುಣ್ಯದಲ್ಲಿ ರಾಜಕೀಯ ಹೋರಾಟದಿಂದಾಗಿ ಇನ್ನಷ್ಟು ಬಲಿಷ್ಠವಾಯಿತು. ಆಗ ಅವರು ಮೊದಲು ಗಾಂಧೀಜಿಯವರ ಬಗ್ಗೆ ಮೆಚ್ಚಿಗೆ ಸೂಚಿಸಿದರೂ ಅನಂತರ ಹಿಂದೂ ಜಾತೀಯತೆಯನ್ನು ವಿರೋಧಿಸಿದರು. ಅಧಿಕಾರದ ಮೋಹವು ಅವರ ಚಿಂತನೆಗಳನ್ನು ಎಷ್ಟರ ಮಟ್ಟಿಗೆ ತನ್ನ ಅಧೀನಕ್ಕೊಳಪಡಿಸಿತೆಂದರೆ ಮನುಷ್ಯರಿಗೆಲ್ಲಾ ಅನುಗ್ರಹವಾಗಿರುವ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಜೀವಿತವನ್ನು ಒಬ್ಬ ರಣವೀರನ ಜೀವಿತವನ್ನಾಗಿ ಚಿತ್ರಿಸಿದರು - ಲೋಕವನ್ನು ಖಡ್ಗದ ಮೂಲಕ ಸರಿಪಡಿಸುವ ಒಬ್ಬ ರಣಾಗ್ರಣಿಯ ರೂಪದಲ್ಲಿ.

**(ಮುಂದುವರಿಯುವುದು)**

ಇಂಗ್ಲಿಷ್‌ನಿಂದ ಭಾಷಾಂತರ : A. ಅಬ್ದುಸ್ಸಲಾಮ್

# ಇಸ್ಲಾಂ ಧರ್ಮ ತತ್ವಜ್ಞಾನ

ಗ್ರಂಥಕರ್ತ : **ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

*ಈ ಐದು ಪ್ರಶ್ನೆಗಳಿಗೆ ಇಸ್ಲಾಮಿಕ ದೃಷ್ಟಿಯ ಉತ್ತರ :*

1. ಮಾನವನ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳು.
2. ಮಾನವನ ಮರಣಾನಂತರದ ಸ್ಥಿತಿ.
3. ಮಾನವನ ಐಹಿಕ ಜೀವಿತೋದ್ದೇಶ ಮತ್ತು ಅದನ್ನು ಗಳಿಸುವ ಮಾರ್ಗಗಳು.
4. ಧರ್ಮನಿಯಮಾನುಸರಣೆ ಇಹ-ಪರ ಜೀವಿತದಲ್ಲಿ ಉಂಟು ಮಾಡುವ ಫಲಗಳು.
5. ದೈವಿಕ ಜ್ಞಾನ ಸಿದ್ಧಿಯ ಮಾರ್ಗಗಳು.

ಬೆಲೆ ರೂ. **25/-**

# ಸನ್ಮಾರ್ಗ ದರ್ಶಕ

ಗ್ರಂಥಕರ್ತ : **ಹಝ್ರತ್ ಮಿರ್ಝಾ ಬಶೀರ್ ಅಹ್ಮದ್**

**ಅಹ್ಮದಿಯಾ ಜಮಾಅತಿನ ವಿಶ್ವಾಸಾದರ್ಶಗಳ ಬಗ್ಗೆ ತಿಳಿಯಲು ಒಂದು ಉತ್ತಮ ಕೃತಿ.**

ಬೆಲೆ : ರೂ. **65/-**

ಮೇಲಿನ ಎರಡೂ ಪುಸ್ತಕಗಳಿಗೋಸ್ಕರ ಸಂಪರ್ಕಿಸಿರಿ :

Ahmaddiya Muslim Mission
No. 1, 3rd Cross Road
Wilson Garden
Bangalore - 560 027

## ದೇವಾಸ್ತಿತ್ವವನ್ನು ರುಜುಗೊಳಿಸುವ, ಧರ್ಮಗಳ ಆವಶ್ಯಕತೆಯನ್ನು ಸಾರುವ, ಆಧ್ಯಾತ್ಮಿಕ ಜ್ಞಾನವನ್ನು ಜನರ ಹೃದಯಗಳಲ್ಲಿ ಮೂಡಿಸುವ ಒಂದು ಉತ್ಕೃಷ್ಟ ತ್ರೈಮಾಸ ಪತ್ರಿಕೆ

# ಯುಗರಶ್ಮಿ

## ಯಥಾರ್ಥ ಇಸ್ಲಾಂ ಮತ್ತು ಅಹ್ಮದಿಯಾ ಸಂಘಟನೆಯ ಸೇವೆಗಾಗಿ ಮೀಸಲಾಗಿರಿಸಿದ "ಯುಗರಶ್ಮಿ" ತ್ರೈಮಾಸಿಕವು ವಿವಿಧ ಧರ್ಮಗಳ ತುಲನಾತ್ಮಕ ಪಠನಾಸಕ್ತರಿಗೆ ಒಂದು ಉತ್ತಮ ಪತ್ರಿಕೆಯಾಗಿದೆ.

ದೇವಾಸ್ತಿತ್ವ, ಇತರ ಧರ್ಮ ಮತ್ತು ಧರ್ಮಾಚಾರ್ಯರ ಕುರಿತು ಇಸ್ಲಾಮಿನ ವೀಕ್ಷಣೆ, ಕೋಮು ಸೌಹಾರ್ದದ ಮಾರ್ಗಗಳು, ಇಸ್ಲಾಮಿನ ತತ್ತೋಪದೇಶಗಳು, ಮಾನವ ಕುಲದ ಏಳಿಗೆಗೆ ಇಸ್ಲಾಮಿನ ಕೊಡುಗೆ,. ಇಂದಿನ ಆಧ್ಯಾತ್ಮಿಕ ಅಧಃಪತನ ಮತ್ತು ಪುನರುಜ್ಜೀವನ ಮಾರ್ಗಗಳು ಮೊದಲಾದ ವಿಷಯಗಳ ಕುರಿತು ಲೇಖನ ಪರಾಮರ್ಶೆಗಳನ್ನು ಈ ಪತ್ರಿಕೆಯ ಪ್ರತಿ ಸಂಚಿಕೆಯಲ್ಲೂ ಕಾಣಬಹುದು.

| | | |
|---|---|---|
| ಬಿಡಿ ಪ್ರತಿ : ರೂ. **5-00** | ವಾರ್ಷಿಕ ಚಂದಾ : ರೂ. **20-00** | ಅಂಚೆ ಮೂಲಕ : ರೂ. **30-00** |

ವ್ಯವಹರಿಸಿರಿ :

**The Editor**

# YUGARASHMI

**Kannada Quarterly**

10-23-1008/1, 1st Floor, Ansari Road,
Bunder, Mangalore - 575 001

# ಅಹ್ಮದಿಯಾ ಖಿಲಾಫತ್ ಶತವಾರ್ಷಿಕ ಜೂಬಿಲಿ 2008

## ಹಝ್ರತ್ ಖಲೀಫತುಲ್ ಮಸೀಹ್ V ನಿರ್ದೇಶಿಸಿದ ಪ್ರಾರ್ಥನೆಗಳು ಮತ್ತು ಕರ್ಮಾನುಷ್ಠಾನಗಳು

1. ಪ್ರತಿ ಮಾಸ ಒಂದು ನಫಲ್ ಉಪವಾಸ ಅನುಷ್ಠಿಸಬೇಕು.
2. ಪ್ರತಿ ದಿನ ಎರಡು ರಕ್ಅತ್ ನಫಲ್ ನಮಾಝ್ ಮಾಡಬೇಕು.
3. ಪ್ರತಿ ದಿನ ಏಳು ಸಲ ಸೂರಃ ಫಾತಿಹ ಅರ್ಥಗ್ರಹಿಸಿಕೊಂಡು ಓದಬೇಕು:

☆ بِسۡمِ اللّٰهِ الرَّحۡمٰنِ الرَّحِيۡمِ۔ اَلۡحَمۡدُ لِلّٰهِ رَبِّ الۡعٰلَمِيۡنَ ۔اَلرَّحۡمٰنِ الرَّحِيۡمِ ۔ مٰلِكِ يَوۡمِ الدِّيۡنِ ۔اِيَّاكَ نَعۡبُدُوَاِيَّاكَ نَسۡتَعِيۡنُ۔

اِهۡدِ نَاالصِّرَاطَ الۡمُسۡتَقِيۡمَ۔ صِرَاطَ الَّذِيۡنَ اَنۡعَمۡتَ عَلَيۡهِمۡ ۔غَيۡرِ الۡمَغۡضُوۡبِ عَلَيۡهِمۡ وَلَاالضَّآلِّيۡنَ۔

ಅರ್ಥ: ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ. ಎಲ್ಲ ಸ್ತುತಿ ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ. ಅವನು ಪರಮ ದಯಾವಂತನೂ ಕಾರುಣ್ಯನಿಧಿಯೂ ನ್ಯಾಯ ತೀರ್ಮಾನ ದಿನದ ಅಧಿಪತಿಯೂ ಆಗಿದ್ದಾನೆ. (ಓ ದೇವಾ,) ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ. ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು. ನಿನ್ನ ಅನುಗ್ರಹಕ್ಕೆ ಪಾತ್ರರಾದವರ, ಕ್ರೋಧಕ್ಕೆ ಈಡಾಗದವರ ಮತ್ತು ದಾರಿತಪ್ಪದವರ ಮಾರ್ಗದಲ್ಲಿ.

4. ☆ اَللّٰهُمَّ صَلِّ عَلٰى مُحَمَّدٍ وَّ عَلٰى اٰلِ مُحَمَّدٍ كَمَا صَلَّيۡتَ عَلٰى اِبۡرَاهِيۡمَ وَعَلٰى اٰلِ اِبۡرَاهِيۡمَ اِنَّكَ حَمِيۡدٌ مَّجِيۡدٌ ۔

☆ اَللّٰهُمَّ بَارِكۡ عَلٰى مُحَمَّدٍ وَّعَلٰى اٰلِ مُحَمَّدٍ كَمَا بَارَكۡتَ عَلٰى اِبۡرَاهِيۡمَ وَعَلٰى اٰلِ اِبۡرَاهِيۡمَ اِنَّكَ حَمِيۡدٌ مَّجِيۡدٌ۔

ಅರ್ಥ: ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ವಿಶೇಷ ಕರುಣೆ ದಯಪಾಲಿಸು- ಹಝ್ರತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ನೀನು ವಿಶೇಷ ಕರುಣೆ ದಯಪಾಲಿಸಿದಂತೆ. ನಿಶ್ಚಯವಾಗಿಯೂ ನೀನು ಸ್ತುತ್ಯರ್ಹನೂ ಮಹತ್ವವಂತನೂ ಆಗಿರುವೆ. ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ಅನುಗ್ರಹವನ್ನು ದಯಪಾಲಿಸು - ಹಝ್ರತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ಅನುಗ್ರಹ ದಯಪಾಲಿಸಿದಂತೆ. ನಿಶ್ಚಯವಾಗಿಯೂ ನೀನು ಸ್ತುತ್ಯರ್ಹನೂ ಮಹತ್ವವಂತನೂ ಆಗಿರುವೆ. (ದಿನಂಪ್ರತಿ 33 ಸಲ)

5. ☆ رَبَّنَا لَا تُزِغۡ قُلُوۡبَنَا بَعۡدَاِذۡ هَدَيۡتَنَا وَهَبۡ لَنَامِنۡ لَّدُنۡكَ رَحۡمَةً ۔اِنَّكَ اَنۡتَ الۡوَهَّابُ۔

ಅರ್ಥ: ನಮ್ಮ ಪ್ರಭೂ ನೀನು ನಮಗೆ ಮಾರ್ಗದರ್ಶನ ಮಾಡಿದ ಬಳಿಕ ನಮ್ಮ ಹೃದಯಗಳಲ್ಲಿ ವಕ್ರಬುದ್ಧಿಯುಂಟಾಗುವಂತೆ ಮಾಡದಿರು. ನೀನು ನಮಗೆ ನಿನ್ನಿಂದ ಕರುಣೆಯನ್ನು ದಯಪಾಲಿಸು. ನಿಸ್ಸಂದೇಹವಾಗಿಯೂ ನೀನೇ ಅತಿ ದೊಡ್ಡ ಅನುಗ್ರಹದಾತ. (ದಿನಂಪ್ರತಿ 33 ಸಲ)

6. ☆ رَبَّنَا اَفۡرِغۡ عَلَيۡنَا صَبۡرًا وَّثَبِّتۡ اَقۡدَامَنَا وَانۡصُرۡنَا عَلَى الۡقَوۡمِ الۡكٰفِرِيۡنَ۔

ಅರ್ಥ: ನಮ್ಮ ಪ್ರಭೂ, ನೀನು ನಮಗೆ ಸ್ಥೈರ್ಯವನ್ನು ಕರುಣಿಸು. ನಮ್ಮ ಪಾದಗಳನ್ನು ಸ್ಥಿರಗೊಳಿಸಿ ಅವಿಶ್ವಾಸಿಗಳಿಗೆ ವಿರುದ್ಧವಾಗಿ ನಮಗೆ ನೆರವು ನೀಡು. (ದಿನಂಪ್ರತಿ 11 ಸಲ)

7. ☆ اَللّٰهُمَّ اِنَّا نَجۡعَلُكَ فِىۡ نُحُوۡرِ هِمۡ وَ نَعُوۡذُبِكَ مِنۡ شُرُوۡرِهِمۡ ۔

ಅರ್ಥ: ಓ ಅಲ್ಲಾಹ್, ಅವರನ್ನು ಎದುರಿಸಲು ನಾವು ನಿನ್ನನ್ನು ಗುರಾಣಿಯನ್ನಾಗಿ ಮಾಡುತ್ತೇವೆ. ಅವರ ಎಲ್ಲಾ ಉಪದ್ರಗಳಿಂದ ಪಾರಾಗಲು ನಿನ್ನ ಅಭಯ ಯಾಚಿಸುತ್ತೇವೆ. (ದಿನಂಪ್ರತಿ 11 ಸಲ)

8 ☆ اَسۡتَغۡفِرُاللّٰهَ رَبِّىۡ مِنۡ كُلِّ ذَنۡبٍ وَّاَتُوۡبُ اِلَيۡهِ۔

ಅರ್ಥ: ನನ್ನ ಪ್ರಭುವಾದ ಅಲ್ಲಾಹನೊಡನೆ ನಾನು ನನ್ನ ಎಲ್ಲ ಪಾಪಗಳಿಗೆ ಕ್ಷಮೆಕೋರುತ್ತೇನೆ ಮತ್ತು ನಾನು ಅವನೆಡೆಗೆ ಬಾಗುತ್ತೇನೆ. (ದಿನಂಪ್ರತಿ 33 ಸಲ)

9. ☆ سُبۡحَانَ اللّٰهِ وَبِحَمۡدِهٖ سُبۡحَانَ اللّٰهِ الۡعَظِيۡمِ۔ اَللّٰهُمَّ صَلِّ عَلٰى مُحَمَّدٍ وَّاٰلِ مُحَمَّدٍ۔

ಅರ್ಥ: ಅಲ್ಲಾಹನು ಪರಿಶುದ್ಧನು ಮತ್ತು ಅವನಿಗೆ ಸಕಲ ಸ್ತುತಿಸ್ತೋತ್ರಗಳು. ಅಲ್ಲಾಹನು ಪರಿಶುದ್ಧನು ಮತ್ತು ಮಹಾಮಹಿಮನು. ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ವಿಶೇಷ ಕರುಣೆ ದಯಪಾಲಿಸು. (ದಿನಂಪ್ರತಿ 33 ಸಲ)

Registered with the Registrar of Newspapers for India No. R.N. 27354/75
YUGARASHMI Kannada Quarterly, February - 2007

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ
ಪ್ರಪ್ರಥಮ ಇಸ್ಲಾಮೀ ಟಿ.ವಿ. ಚ್ಯಾನೆಲ್

# ಮುಸ್ಲಿಂ ಟೆಲಿವಿಶನ್ ಅಹ್ಮದಿಯಾ ಇಂಟರ್‌ನೇಶನಲ್

# THE FIRST ISLAMIC SATELLITE CHANNEL

**BROADCASTING ROUNDTHE CLOCK**

| | | | |
|---|---|---|---|
| SATELLITE | : ASIASAT 3S | POLARISATION | : HORIZONTAL |
| POSITION | : 105.5$^0$ EAST | SYMBOL RATE | : 26000 MBPS |
| FREQUENCY | : 3760 MHZ | FEC | : 7/8 |
| MIN. DISH SIZE | : 1.8 METRE | | |

E-Mail : info@alislam.org    Website : http:www.alislam.org/mta

ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ
ಪ್ರಕಟಿಸಲ್ಪಟ್ಟ

# ಪವಿತ್ರ ಖುರ್‌ಆನ್

## ಕನ್ನಡ ಭಾಷಾಂತರ

ಬೆಲೆ : ರೂ. 200/-

ದೊರೆಯುವ ವಿಳಾಸ :

AHMADIYYA MUSLIM MISSION
No.1, 3rd Cross Road,
Wilson Garden,
Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001.
Printed at Karavali Printers, Azizuddin Road, Mangalore on behalf of Jubilee Printing Press, Mangalore.
Typeset at View Graphics, Car street, Mangalore - 575 001